# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ಸಂಪಾದಕರು : ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ ಶುಕ್ರವಾರ, ಮೇ 05, 2023

ಸಂಪುಟ : 49 ಸಂಚಿಕೆ : 353 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com







## ಕೋಮುವಾದ ಎದುರಿಸುವ ಶಕ್ತಿ ಇರುವುದು ಕಾಂಗ್ರೆಸ್‌ಗೆ ಮಾತ್ರ: ಕನ್ನಯ್ಯ ಕುಮಾರ್

ದಾವಣಗೆರೆ, ಮೇ 4- ಈ ದೇಶದಲ್ಲಿ ಬಿಜೆಪಿಯ ಕೋಮುವಾದವನ್ನು ಎದುರಿಸುವ ಶಕ್ತಿ ಇರುವುದು ಕಾಂಗ್ರೆಸ್ ಪಕ್ಷಕ್ಕೆ ಮಾತ್ರ. ಅಲ್ಪಸಂಖ್ಯಾತರು ಬೇರೆ ಪಕ್ಷಕ್ಕೆ ಮತ ಹಾಕಿದರೆ ಬಿಜೆಪಿಯ ಕೋಮುವಾದವನ್ನು ಬೆಂಬಲಿಸಿದಂತೆ ಎಂದು ಕಾಂಗ್ರೆಸ್ ಪಕ್ಷದ ಸ್ಟಾರ್ ಪ್ರಚಾರಕ ಕನ್ನಯ್ಯಕುಮಾರ್ ಹೇಳಿದರು.

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಶಾಮನೂರು ಶಿವಶಂಕರಪ್ಪ ಅವರ ಪರ ನಗರದ ಅರಳಿ ಮರ ವೃತ್ತದಿಂದ ರೋಡ್ ಶೋ ನಡೆಸಿದ ಸಂದರ್ಭದಲ್ಲಿ ಅವರು ಮಾತನಾಡಿದರು.

ಬಿಜೆಪಿಗರು ಅಲ್ಪಸಂಖ್ಯಾತರ ಮತ ಬೇಡ ಎಂದು ಅಧಿಕಾರದಲ್ಲಿದ್ದಾಗ ಹೇಳಿಕೆ ನೀಡಿ, ಇದೀಗ ಅವರ ಬಳಿ ಬಂದು ಮತ ಯಾಚಿಸುತ್ತಿದ್ದಾರೆ. ಬಿಜೆಪಿಗೆ ತಕ್ಕ ಪಾಠ ಕಲಿಸುವಂತೆ ಮತದಾರರಲ್ಲಿ ಮನವಿ ಮಾಡಿದರು.



ಅಭ್ಯರ್ಥಿ ಶಾಮನೂರು ಶಿವಶಂಕರಪ್ಪ ಮಾತನಾಡಿ, ಅಲ್ಪಸಂಖ್ಯಾತರು ನಮ್ಮನ್ನು ಸದಾ ಬೆಂಬಲಿಸುತ್ತಾ ಬಂದಿದ್ದು, ಈ ಬಾರಿಯೂ ನಮ್ಮನ್ನು ಬೆಂಬಲಿಸಿದ್ದಾರೆ. ಕೆಲವರು ಅವರನ್ನು ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದು, ಅಂತವರನ್ನು ದೂರವಿಡಿ ಎಂದು ಕರೆ ನೀಡಿದರು.

ಉತ್ತರ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಎಸ್.ಎಸ್. ಮಲ್ಲಿಕಾರ್ಜುನ್ (4ನೇ ಪುಟಕ್ಕೆ)

## ಖಾದ್ಯ ತೈಲ ಬೆಲೆ ಇಳಿಕೆಗೆ ಸೂಚನೆ

ನವದೆಹಲಿ, ಮೇ 4- ಜಾಗತಿಕ ಮಾರುಕಟ್ಟೆ ಯಲ್ಲಿ ಖಾದ್ಯ ತೈಲದ ಬೆಲೆ ಇಳಿಕೆಯಾಗಿರುವ ಹಿನ್ನೆಲೆಯಲ್ಲಿ, ಮಾರಾಟ ಬೆಲೆಯನ್ನೂ ಇಳಿ ಸುವಂತೆ ಕಂಪನಿಗಳಿಗೆ ಕೇಂದ್ರ ಸರ್ಕಾರ ತಿಳಿಸಿದೆ.

ಭಾರತ ಖಾದ್ಯ ತೈಲಕ್ಕಾಗಿ ಆಮದನ್ನು ಅವಲಂಬಿಸಿದೆ. ಮಲೇಷಿಯಾ ಮತ್ತು ಇಂಡೋನೇಷಿಯಾಗಳಿಂದ ತಾಳೆ ಎಣ್ಣೆ ಹಾಗೂ ಅರ್ಜೆಂಟಿನಾ ಮತ್ತು ಬ್ರೆಜಿಲ್‌ಗಳಿಂದ ಸೋಯಾ ಬೀನ್ ಆಮದು ಮಾಡಿಕೊಳ್ಳಲಾಗುತ್ತಿದೆ.

ಖಾದ್ಯ ತೈಲ ಬೆಲೆ ಇಳಿಕೆಯನ್ನು ಗ್ರಾಹಕರಿಗೆ ಸೂಕ್ತ ರೀತಿಯಲ್ಲಿ ವರ್ಗಾಯಿಸ ಬೇಕು ಎಂದು ಕೇಂದ್ರ ಆಹಾರ ಕಾರ್ಯದರ್ಶಿ ಸಂಜೀವ್ ಚೋಪ್ರ ಅವರು ಉದ್ಯಮದ ಪ್ರತಿನಿಧಿಗಳ ಸಭೆಯಲ್ಲಿ ತಿಳಿಸಿದ್ದಾರೆ.

ಧಾರಾ ಬ್ರಾಂಡ್‌ನ ತೈಲದ ಬೆಲೆಯನ್ನು ಲೀಟರ್‌ಗೆ 15-20 ರೂ. ಇಳಿಸಲಾಗಿದೆ. ಹೊಸ ಸರಕು ಮುಂದಿನ ವಾರ ಮಾರುಕಟ್ಟೆಗೆ (3ನೇ ಪುಟಕ್ಕೆ)

## ಭಜರಂಗೀ ರಾಜಕೀಯ

### ಚುನಾವಣಾ ಕೇಂದ್ರ ವಿಷಯವಾದ ಭಜರಂಗ ದಳ

**ಭಜರಂಗ ದಳ ನಿಷೇಧದ ವಿಷಯದಲ್ಲಿ ಟೀಕೆ ಎದುರಿಸುತ್ತಿರುವ ಕಾಂಗ್ರೆಸ್, ನಿಷೇಧದ ತನ್ನ ನಿರ್ಧಾರವನ್ನು ಸಮರ್ಥಿಸಿಕೊಳ್ಳುತ್ತಲೇ, ರಾಜ್ಯಾದ್ಯಂತ ಹನುಮಂತ ದೇವರ ದೇವಾಲಯ ನಿರ್ಮಾಣ ಹಾಗೂ ನವೀಕರಣ ಕಾರ್ಯ ಕೈಗೊಳ್ಳುವುದಾಗಿ ಹೇಳಿದೆ.**

ಬೆಂಗಳೂರು, ಮೇ 4- ವಿಧಾನಸಭಾ ಚುನಾವಣೆ ಸಮೀಪಿಸುತ್ತಿರುವಂತೆಯೇ, ಬೇರೆಲ್ಲ ವಿಷಯಗಳಿಗಿಂತ ಭಜರಂಗ ದಳ ನಿಷೇಧದ ವಿಷಯವೇ ಕೇಂದ್ರ ಸ್ಥಾನ ಪಡೆದುಕೊಳ್ಳುತ್ತಿದೆ.

ಭಜರಂಗ ದಳ ಸೇರಿದಂತೆ ಹಿಂದೂ ಸಂಘಟನೆಗಳು ರಾಜ್ಯಾದ್ಯಂತ ಕಾಂಗ್ರೆಸ್ ನಿಲುವಿನ ವಿರುದ್ಧ ಪ್ರತಿಭಟನೆ ನಡೆಸಿವೆ. ಈ ನಡುವೆಯೇ, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಚುನಾವಣಾ ಸಮಾವೇಶಗಳಲ್ಲಿ ಜೈ ಭಜರಂಗ ಬಲಿ ಘೋಷಣೆ ಮೊಳಗಿಸಿದ್ದು ಗಮನ ಸೆಳೆದಿದೆ.

ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಅವರು ಕಾಂಗ್ರೆಸ್ ಪ್ರಣಾಳಿಕೆಯನ್ನು ಸುಡುವ ಮೂಲಕ ಪ್ರತಿಭಟನೆ ನಡೆಸಿದ್ದಾರೆ. ಕೆಲ ಹಿಂದೂ ಸಂಘಟನೆಗಳು ಹನುಮಾನ್ ಚಾಲಿಸಾ ಪಠಿಸುವ ಮೂಲಕ ನಿಷೇಧಕ್ಕೆ ವಿರೋಧ ವ್ಯಕ್ತಪಡಿಸಿವೆ.

ಈ ನಡುವೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ದೇವಾಲಯಗಳನ್ನು ಸುತ್ತುವ ಮೂಲಕ ವಿವಾದ ಶಮನಗೊಳಿಸುವ ಯತ್ನ ನಡೆಸಿದ್ದಾರೆ.

ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ತೆರಳಿ ಚಾಮುಂಡೇಶ್ವರಿ ಹಾಗೂ ಆಂಜನೇಯ ದೇವರಿಗೆ ಪೂಜೆ ಸಲ್ಲಿಸಿದ ನಂತರ ಮಾತನಾಡಿರುವ ಅವರು, ರಾಜ್ಯಾದ್ಯಂತ ಹನುಮಂತ ದೇವರ ದೇವಾಲಯ ಗಳನ್ನು ನಿರ್ಮಿಸಲಾಗುವುದು ಇಲ್ಲವೇ ಈಗಿರುವ ದೇವಾಲಯಗಳನ್ನು ನವೀಕರಿಸಲಾಗುವುದು ಎಂದಿದ್ದಾರೆ.ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಅಂಜನಾದ್ರಿ ಅಭಿವೃದ್ಧಿ ಮಂಡಳಿ (3ನೇ ಪುಟಕ್ಕೆ)

## ರಾಜ್ಯ ಸರ್ಕಾರಕ್ಕೆ ಜಾತಿ ಗಣತಿ ಅಧಿಕಾರವಿಲ್ಲ : ಹೈಕೋರ್ಟ್

ಪಾಟ್ನಾ, ಮೇ 4 – ರಾಜ್ಯ ಸರ್ಕಾರಕ್ಕೆ ಜಾತಿ ಗಣತಿ ನಡೆಸುವ ಅಧಿಕಾರವಿಲ್ಲ ಎಂದು ಹೇಳಿ ರುವ ಪಾಟ್ನಾ ಹೈಕೋರ್ಟ್, ಬಿಹಾರ ಸರ್ಕಾರದ ಜಾತಿ ಗಣತಿಗೆ ತಡೆಯಾಜ್ಞೆ ಹೊರಡಿಸಿದೆ.

ಜಾತಿ ಗಣತಿ ನಿಲ್ಲಿಸಬೇಕು. ಅಂತಿಮ ಆದೇಶದವರೆಗೆ ಜಾತಿ ಗಣತಿಗಾಗಿ ಸಂಗ್ರಹಿಸಿದ ಮಾಹಿತಿಯನ್ನು ಯಾರೊಂದಿಗೂ ಹಂಚಿಕೊಳ್ಳ ಬಾರದು ಎಂದು ನ್ಯಾಯಾಲಯ ತಿಳಿಸಿದೆ.

ಬಿಹಾರ ಸರ್ಕಾರ ನಡೆಸಿರುವ ಜಾತಿ ಗಣತಿ ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಅರ್ಜಿಗಳನ್ನು ದಾಖಲಿಸಲಾಗಿತ್ತು. ಮೇಲ್ನೋಟಕ್ಕೆ ಕಂಡು ಬರುವಂತೆ ಈ ಅರ್ಜಿಗಳಲ್ಲಿ ಹುರುಳಿದೆ ಎಂದು ನ್ಯಾಯಾಲಯ ಹೇಳಿದೆ.

ರಾಜ್ಯ ಸರ್ಕಾರಕ್ಕೆ ಜಾತಿ ಆಧರಿತ ಗಣತಿ ನಡೆಸುವುದು ಸಂಸತ್ತಿನ ಶಾಸನಾತ್ಮಕ ಅಧಿಕಾರದ ಉಲ್ಲಂಘನೆ ಎಂದು ಹೈಕೋರ್ಟ್ ಹೇಳಿದೆ.

ಗಣತಿಯ ಮಾಹಿತಿಯನ್ನು ವಿವಿಧ ಪಕ್ಷಗಳ ಜೊತೆ ಹಂಚಿಕೊಳ್ಳುವುದಾಗಿ ರಾಜ್ಯ ಸರ್ಕಾರ ಹೇಳಿರುವ ಬಗ್ಗೆಯೂ ಹೈಕೋರ್ಟ್ ಆಕ್ಷೇಪಿಸಿದೆ.

ಇದರಿಂದಾಗಿ ಖಾಸಗಿತನದ ಹಕ್ಕಿನ ಪ್ರಶ್ನೆ ಉದ್ಭವಿಸುತ್ತದೆ. ಖಾಸಗಿತನದ ಹಕ್ಕೂ ಸಹ ಜೀವನದ ಹಕ್ಕಿನ ಇನ್ನೊಂದು ಮುಖ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ ಎಂದು ಹೈಕೋರ್ಟ್ ಹೇಳಿದೆ.

ಸಮೀಕ್ಷೆಯ ಹೆಸರಿನಲ್ಲಿ ರಾಜ್ಯ ಸರ್ಕಾರ ಜಾತಿ ಗಣತಿ ನಡೆಸಲಾಗದು. ಗಣತಿ ಹಾಗೂ ಸಮೀಕ್ಷೆಯ ನಡುವೆ ವ್ಯತ್ಯಾಸ ಇದೆ. ಮಾಹಿತಿ ವಿಶ್ಲೇಷಣೆಗಾಗಿ ಸಮೀಕ್ಷೆ ನಡೆಸಲಾಗುತ್ತದೆ. ಆದರೆ, ನಿಖರ ಮಾಹಿತಿಗಾಗಿ ಗಣತಿ ನಡೆಸಲಾಗುತ್ತದೆ ಎಂದು ಹೈಕೋರ್ಟ್ ಹೇಳಿದೆ.

## ಪಾಕಿಸ್ತಾನದಲ್ಲಿ ಎಂಟು ಶಿಕ್ಷಕರ ಹತ್ಯೆ

ಪೆಷಾವರ, ಮೇ 4 – ಪಾಕಿಸ್ತಾನದ ವಾಯುವ್ಯ ಬುಡಕಟ್ಟು ಜಿಲ್ಲೆಯಲ್ಲಿ ನಡೆದ ಎರಡು ಪ್ರತ್ಯೇಕ ಗುಂಡಿನ ದಾಳಿಗಳಲ್ಲಿ ಎಂಟು ಶಿಕ್ಷಕರನ್ನು ಹತ್ಯೆಗೈಯ್ಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಖೈಬರ್ ಪಖ್ತುಂಖ್ವದಲ್ಲಿರುವ ಅಪ್ಪರ್ ಕುರ್ರಮ್ ಬುಡಕಟ್ಟು ಜಿಲ್ಲೆಯ ಹೈಸ್ಕೂಲ್ ಮೇಲೆ ನಡೆಸಿದ ದಾಳಿಯಲ್ಲಿ ಏಳು ಶಿಕ್ಷಕರನ್ನು ಹತ್ಯೆ ಮಾಡಲಾಗಿದೆ. ಇದೇ ಜಿಲ್ಲೆಯ ಪರಚಿನಾರ್ ಎಂಬಲ್ಲಿ ಇನ್ನೊಬ್ಬ ಶಿಕ್ಷಕರನ್ನು ಹತ್ಯೆ ಮಾಡಲಾಗಿದೆ.

ಎರಡು ದಿನಗಳ ಹಿಂದೆ ಪಾಕಿಸ್ತಾನದ ಭದ್ರತಾ ಪಡೆಗಳು ಟಿ.ಟಿ.ಪಿ. ಉಗ್ರವಾದಿ ಸಂಘಟನೆಯ ಕುಖ್ಯಾತ ಅಬ್ದುಲ್ ಜಬರ್ ಷಾ ಹಾಗೂ ಇನ್ನಿಬ್ಬರನ್ನು ಹೊಡೆದುರುಳಿಸಿದ್ದವು.

ಶಿಕ್ಷಕರ ಹತ್ಯೆ ನಂತರ ಜಿಲ್ಲೆಯಲ್ಲಿ ಕಟ್ಟೆಚ್ಚರ ಘೋಷಿಸಲಾಗಿದೆ. 9 ಹಾಗೂ (3ನೇ ಪುಟಕ್ಕೆ)

## ಮಣಿಪುರದಲ್ಲಿ ಕಂಡಲ್ಲಿ ಗುಂಡಿಗೆ ಆದೇಶ

ಇಂಫಾಲ್, ಮೇ 4- ಮಣಿಪುರದಲ್ಲಿ ಬುಡಕಟ್ಟು ಜನರು ಹಾಗೂ ಬಹು ಸಂಖ್ಯಾತ ಮೀಟಿ ಸಮುದಾಯದ ನಡುವಿನ ಹಿಂಸಾಚಾರದ ಹಿನ್ನೆಲೆಯಲ್ಲಿ, ರಾಜ್ಯದ ಕೆಲವೆಡೆ ಕಂಡಲ್ಲಿ ಗುಂಡು ಹಾರಿಸಲು ರಾಜ್ಯ ಸರ್ಕಾರ ಆದೇಶಿಸಿದೆ.

ಮನವೊಲಿಕೆ, ಎಚ್ಚರಿಕೆ ಹಾಗೂ ಸಕಾರಣವಾದ ಬಲ ಬಳಸಿದ ನಂತರವೂ ಪರಿಸ್ಥಿತಿ ನಿಯಂತ್ರಣಕ್ಕೆ ಬಾರದೇ ಹೋದರೆ ಕಂಡಲ್ಲಿ ಗುಂಡು ಹಾರಿಸುವಂತೆ ರಾಜ್ಯಪಾಲರ ಪರವಾಗಿ ಆದೇಶ ಹೊರಡಿಸಲಾಗಿದೆ. ರಾಜ್ಯದಲ್ಲಿ ಪರಿಸ್ಥಿತಿ (3ನೇ ಪುಟಕ್ಕೆ)


GURUDATT ACADEMY
Gateway to NEET & IIT
Classroom coaching for 8th, 9th, 10th std ( CBSE ) 1st PUC & 2nd PUC ( NEET / JEE ) Supplementary batches.
Rangamahal, PJ Extension, Davangere.
Call: 9739865711



॥ ಶ್ರೀ ಉಜ್ಜಿನಿ ಮರುಳ ಸಿದ್ದೇಶ್ವರ ಪ್ರಸನ್ನ ॥



### ಗೃಹಪ್ರವೇಶ ಸಮಾರಂಭದ ಆಹ್ವಾನ

ಹರಿಹರ ನಗರ ವಾಸಿ ದಿ॥ ಬಸವಲಿಂಗಮ್ಮ ದಿ॥ ಪಟೇಲ್ ಸಂಗಪ್ಪಗೌಡ್ರು ಇವರ ಮಗನಾದ

ಶ್ರೀಮತಿ ಶೋಭಾ ಮತ್ತು ಶ್ರೀ ಪಿ.ಎಸ್. ಬಸವರಾಜಪ್ಪ ಗೌಡ್ರು

ಇವರು ಮಾಡುವ ವಿಜ್ಞಾಪನೆಗಳು.

ನಾವು ಹರಿಹರ ನಗರ ಹಳ್ಳದಕೇರಿಯಲ್ಲಿ ನೂತನವಾಗಿ ನಿರ್ಮಿಸಿರುವ

"ಶ್ರೀ ಪಟೇಲ್ ಸಂಗಪ್ಪ ಬಸವಲಿಂಗಮ್ಮ ನಿಲಯ"ದ

ಗೃಹಪ್ರವೇಶ ಸಮಾರಂಭವನ್ನು

ಸ್ವಸ್ತಿ ಶ್ರೀ ವಿಜಯಾಭ್ಯುದಯ ಶ್ರೀಮನ್ನೃಪ ಶಾಲಿವಾಹನ ಶಕೆ 1945ನೇ ಶ್ರೀ ಶೋಭಕೃತನಾಮ ಸಂವತ್ಸರ ವೈಶಾಖ ಮಾಸ ಶುಕ್ಲಪಕ್ಷ ಚತುರ್ಥಿ ದಿನಾಂಕ : 05.05.2023ನೇ ಶುಕ್ರವಾರ ಉದಯಪೂರ್ವ 04.45 ರಿಂದ 05.40ರವರೆಗೆ ಸಲ್ಲುವ ಬ್ರಾಹ್ಮೀ ಲಗ್ನದ ಶುಭ ಮುಹೂರ್ತದಲ್ಲಿ ಹಾಗೂ ಬೆಳಿಗ್ಗೆ 8.30 ರಿಂದ 9.00 ರವರೆಗೆ "ವಾಸ್ತು ಪೂಜೆ ನವಗ್ರಹ ಶಾಂತಿ" ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ನಮ್ಮ ಆತಿಥ್ಯ ಸ್ವೀಕರಿಸಬೇಕಾಗಿ ವಿನಂತಿ.



ತಮ್ಮ ಆಗಮನಾಭಿಲಾಷಿಗಳು

ಶ್ರೀಮತಿ ಶೋಭ ಮತ್ತು ಶ್ರೀ ಪಿ.ಎಸ್. ಬಸವರಾಜಪ್ಪ
ಜಿ.ಬಿ. ಹರೀಶ್ ಮತ್ತು ಮೀನಾ ಹೆಚ್.ಪಿ.
ಶ್ರೀಮತಿ ಮೀನಾ ಮತ್ತು ಶ್ರೀ ಶಿವಕುಮಾರ್, ಬೆಂಗಳೂರು.
ಶ್ರೀಮತಿ ಪೂರ್ಣಿಮಾ & ಶ್ರೀ ರಾಜಶೇಖರ ಕೈಲಾಸ್, ಬೆಂಗಳೂರು.
ಧನುಷ್ ಪಟೇಲ್, ಹೇಮ ಪಟೇಲ್, ಶುಭಾಂಕರ್, ಮಲ್ಲಿಕಾರ್ಜುನ್ ಆದೀಪ್ ಕೈಲಾಸ್

ತಮ್ಮ ಸುಖಾಗಮನ ಬಯಸುವವರು :

ಗೌಡ್ರ ವಂಶಸ್ಥರು ಹಳ್ಳದಕೇರಿ ಮತ್ತು ಬಂಧು-ಮಿತ್ರರು, ಹರಿಹರ.

ವಿ.ಸೂ. : ಆಹ್ವಾನ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.



## ದ್ವಿತೀಯ ವರ್ಷದ ಪುಣ್ಯಸ್ಮರಣೆ



ಜನನ : 18.05.1957 - ನಿಧನ : 05.05.2021

ನನ್ನ ಪೂಜ್ಯ ಪತಿಯವರಾದ

ಶ್ರೀ ಶೇಖರಪ್ಪ ಎಸ್. ದೊಡ್ಡಮನಿ

ನೀಲಮ್ ಗಾರ್ಮೆಂಟ್ಸ್, ಸಂಸ್ಥಾಪಕರು ಮತ್ತು ಮಾಲೀಕರು

ಕಾಳಿಕಾ ದೇವಿ ರಸ್ತೆ, ದಾವಣಗೆರೆ.

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು, ಸದಾ ನಮ್ಮ ಅಂತರಂಗದಲ್ಲಿ ನಮ್ಮೊಂದಿಗೆ ಇದ್ದೀರಿ...
ನಿಮ್ಮ ನೆನಪು ಸದಾ ಹಚ್ಚ ಹಸಿರಾಗಿದ್ದು, ನಿಮ್ಮ ಪ್ರೀತಿ-ವಾತ್ಸಲ್ಯ ನಮಗೆಲ್ಲಾ ಆದರ್ಶವಾಗಿದೆ.
ನೀವು ತೋರಿದ ಸನ್ಮಾರ್ಗದಲ್ಲಿ ಮುನ್ನಡೆಯುತ್ತಿದ್ದೇವೆ.

ಇಂತಿ ದುಃಖತಪ್ತರು :

ಶ್ರೀಮತಿ ಶಿವಲೀಲಾ ಶೇಖರಪ್ಪ ದೊಡ್ಡಮನಿ ಮತ್ತು ಮಕ್ಕಳು
ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು
ಸ್ನೇಹಿತರು, ಬಂಧುಗಳು ಹಾಗೂ ಸಿಬ್ಬಂದಿ ವರ್ಗದವರು, ಫೋನ್ : 87620 05533

# ಹಿಂದುತ್ವ ಬಿಜೆಪಿಯ ಆಸ್ತಿ ಅಲ್ಲ, ನಾವೂ ಹಿಂದೂಗಳೇ

## ಮಲೇಬೆನ್ನೂರಿನ ಕಾಂಗ್ರೆಸ್ ಪ್ರಚಾರದಲ್ಲಿ ತರಾಟೆ ತೆಗೆದುಕೊಂಡ ಮಾಜಿ ಸಚಿವ ಹೆಚ್.ಎಂ.ರೇವಣ್ಣ



ಮಲೇಬೆನ್ನೂರು, ಮೇ 4- ಬೆಲೆ ಏರಿಕೆ, ಭ್ರಷ್ಟಾಚಾರ, ಜನಾಂಗೀಯ ಕಲಹಗಳೇ ಬಿಜೆಪಿ ಸರ್ಕಾರದ ಸಾಧನೆಗಳಾಗಿವೆ ಎಂದು ಮಾಜಿ ಸಚಿವ ಹಾಗೂ ಕಾಂಗ್ರೆಸ್ ಹಿರಿಯ ಮುಖಂಡ ಹೆಚ್.ಎಂ.ರೇವಣ್ಣ ದೂರಿದರು.

ಹರಿಹರ ವಿಧಾನ ಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ನಂದಿಗಾವಿ ಶ್ರೀನಿವಾಸ್ ಪರ ಪಟ್ಟಣದಲ್ಲಿ ಇಂದು ಮತಯಾಚನೆ ಮಾಡಿದ ಸಂದರ್ಭದಲ್ಲಿ ಅವರು ಮಾತನಾಡಿದರು.

ಬಿಜೆಪಿ ಸರ್ಕಾರ 40 ಪರ್ಸೆಂಟ್ ಭ್ರಷ್ಟಾಚಾರದ ಮೂಲಕ ನಮ್ಮ ರಾಜ್ಯಕ್ಕೆ ಕಪ್ಪು ಚುಕ್ಕಿ ಇಟ್ಟಿದೆ. ಬಿಜೆಪಿ ಜನರಿಗೆ ಒಳ್ಳೆಯದನ್ನು ಮಾಡುವುದಕ್ಕಿಂತ ಕೆಟ್ಟದ್ದನ್ನೇ ಹೆಚ್ಚು ಮಾಡಿದೆ. ಇಂತಹ ಕೆಟ್ಟ ಸರ್ಕಾರವನ್ನು ಈ ಬಾರಿ ಚುನಾವಣೆಯಲ್ಲಿ ರಾಜ್ಯದ ಜನ ಧೂಳಿಪಟ ಮಾಡಲಿದ್ದಾರೆ. ಬಿಜೆಪಿಯವರು ಏನೇ ಮಾಡಿದರೂ ಪುನಃ ಅಧಿಕಾರಕ್ಕೆ ಬರಲ್ಲ ಎಂದ ರೇವಣ್ಣ, ಹಿಂದುತ್ವ ಬಿಜೆಪಿಯ ಆಸ್ತಿ ಅಲ್ಲ, ನಾವೂ ಹಿಂದೂಗಳೇ. ನಾವೂ ದೇವಸ್ಥಾನಗಳನ್ನು ಕಟ್ಟಿದ್ದೇವೆ. ದೇವರನ್ನು ಪೂಜಿಸುತ್ತೇವೆ. ಆದರೆ, ಬಿಜೆಪಿಯವರಂತೆ ಕುತಂತ್ರ ಮಾಡುವುದಿಲ್ಲ ಎಂದರು.

ಇಂದಿರಾಗಾಂಧಿ ಅವರ ಕಾಲದಲ್ಲಿ ಸುಧಾರಿತ ಆರ್ಥಿಕ ಪರಿಸ್ಥಿತಿಯಿಂದಾಗಿ ದೇಶ ಇವತ್ತು ಬಲಿಷ್ಠವಾಗಿದೆ. ಎಲ್ಲದಕ್ಕೂ ಜಿಎಸ್‌ಟಿ ಹಾಕುವ ಬಿಜೆಪಿಯಿಂದ ಬಡವರಿಗೆ ಯಾವ ಅನುಕೂಲವಾಗುವುದಿಲ್ಲ. ಬದಲಿಗೆ ಉದ್ಯಮಿಗಳ ಸಾಲ ಮನ್ನಾ ಆಗುತ್ತಿದೆ. ದೇಶದ ಸರ್ಕಾರಿ ಆಸ್ತಿಗಳನ್ನು ಖಾಸಗಿಯವರಿಗೆ ಮಾರಾಟ ಮಾಡುವ ಮೂಲಕ ದೇಶದಲ್ಲಿ ನಿರುದ್ಯೋಗಿಗಳ ಸಂಖ್ಯೆ ಹೆಚ್ಚು ಮಾಡಿದ್ದೇ ಪ್ರಧಾನಿ ಮೋದಿ ಅವರ ಸಾಧನೆ ಎಂದು ಹೆಚ್.ಎಂ.ರೇವಣ್ಣ ಆರೋಪಿಸಿದರು.

ಬಿಜೆಪಿಯವರು ಹನುಮಾನ್ ಚಾಲೀಸ ಮಾಡುತ್ತಿಲ್ಲ. ಚಾಲೀಸ್ ಪರ್ಸೆಂಟ್ ಭ್ರಷ್ಟಾಚಾರ ಮಾಡುತ್ತಿದ್ದಾರೆ. ಈ ಎಲ್ಲಾ ಕಾರಣಗಳಿಂದಾ ಮತ್ತು ಈ ಹಿಂದೆ ಸಿದ್ದರಾಮಯ್ಯ ಅವರು ರಾಜ್ಯದ ಮುಖ್ಯಮಂತ್ರಿಯಾಗಿ ಬಸವಜಯಂತಿಯಂದೇ ಅಧಿಕಾರ ವಹಿಸಿಕೊಂಡು ಬಸವಣ್ಣನವರ ಆಶಯದಂತೆ 5 ವರ್ಷ ಯಶಸ್ವೀ ಆಡಳಿತ ನೀಡಿದ್ದರ ಫಲವಾಗಿ ಈ ಬಾರಿ 140 ರಿಂದ 150 ಸ್ಥಾನಗಳನ್ನು ಕಾಂಗ್ರೆಸ್ ಗೆಲ್ಲಲಿದೆ ಎಂದು ರೇವಣ್ಣ ಹೇಳಿದರು.

ಶಾಸಕ ಎಸ್.ರಾಮಪ್ಪ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ರಚಿಸಲು ಹರಿಹರ ಕ್ಷೇತ್ರದಿಂದಲೂ ಕಾಂಗ್ರೆಸ್ ಅಭ್ಯರ್ಥಿ ನಂದಿಗಾವಿ ಶ್ರೀನಿವಾಸ್ ಅವರನ್ನು ಗೆಲ್ಲಿಸಿ ಕಳುಹಿಸೋಣ ಎಂದು ಕಾರ್ಯಕರ್ತರಿಗೆ ಕರೆ ನೀಡಿದರು.

ಜಿ.ಪಂ. ಮಾಜಿ ಸದಸ್ಯ ಎಂ.ನಾಗೇಂದ್ರಪ್ಪ ಮಾತನಾಡಿ, ಬಿಜೆಪಿಯ ಜನ ವಿರೋಧಿ ಆಡಳಿತದಿಂದಾಗಿ ಜನ ಬೇಸತ್ತು, ಜನಪರ ಆಡಳಿತ ನೀಡುವ ಕಾಂಗ್ರೆಸ್ ಪಕ್ಷ ಬೆಂಬಲಿಸಲು ಈಗಾಗಲೇ ನಿರ್ಧರಿಸಿದ್ದಾರೆ. ನೀವು ಎಷ್ಟೇ ಹಣ ಕೊಟ್ಟರೂ ಗೆಲ್ಲುವುದಿಲ್ಲ ಎಂದು ಬಿಜೆಪಿಯವರಿಗೆ ಟಾಂಗ್ ನೀಡಿದರು.

ಕಾಂಗ್ರೆಸ್ ಅಭ್ಯರ್ಥಿ ನಂದಿಗಾವಿ ಶ್ರೀನಿವಾಸ್ ಮಾತನಾಡಿ, ನನ್ನ ಪರ ಶಾಸಕ ರಾಮಪ್ಪ, ಎಂ.ನಾಗೇಂದ್ರಪ್ಪ, ಬೆಣ್ಣೆಹಳ್ಳಿ ಹಾಲೇಶಪ್ಪ ಸೇರಿದಂತೆ ಎಲ್ಲಾ ಹಿರಿಯರು ಪ್ರಚಾರ ಮಾಡುತ್ತಿರುವುದರಿಂದ ಕಾರ್ಯಕರ್ತರಲ್ಲಿ ಉತ್ಸಾಹ ಹೆಚ್ಚಾಗಿದೆ. ಹಾಗಾಗಿ ನನ್ನ ಗೆಲುವು ನಿಶ್ಚಿತ ಎಂದರು.

ಕಾಂಗ್ರೆಸ್ ವೀಕ್ಷಕ ಹಾಗೂ ತಮಿಳುನಾಡು ಶಾಸಕ ಅಸ್ಸನ್ ಮೌಲಾನಾ, ಕೆಪಿಸಿಸಿ ಸದಸ್ಯ ಕೆ.ರೇವಣಸಿದ್ದಪ್ಪ, ಡಾ. ಬಿ.ಚಂದ್ರಶೇಖರ್, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ನಿಖಿಲ್ ಕೊಂಡಜ್ಜಿ, ಜಿ.ಪಂ. ಮಾಜಿ ಸದಸ್ಯ ಬೆಣ್ಣೆಹಳ್ಳಿ ಹಾಲೇಶಪ್ಪ, ಎಪಿಎಂಸಿ ಮಾಜಿ ಅಧ್ಯಕ್ಷ ಜಿ.ಮಂಜುನಾಥ್ ಪಟೇಲ್, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ತಾ. ಪಂ. ಮಾಜಿ ಅಧ್ಯಕ್ಷರಾದ ಎಂ.ಬಿ.ರೋಷನ್ ಸಾಬ್, ಎಸ್.ಜಿ.ಪರಮೇಶ್ವರಪ್ಪ, ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಸಿರಿಗೆರೆ ರಾಜಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ.ಅಬೀದ್ ಅಲಿ, ತಾ. ಮಹಿಳಾ ಕಾಂಗ್ರೆಸ್ ಎಸ್ಸಿ ಘಟಕದ ಅಧ್ಯಕ್ಷೆ ಸವಿತಾ ನಾಯ್ಕ ಸೇರಿದಂತೆ ಇನ್ನೂ ಅನೇಕರು ಪ್ರಚಾರದಲ್ಲಿದ್ದರು.

# ಅಲ್ಪಸಂಖ್ಯಾತರು ಒಗ್ಗಟ್ಟಾಗಿ ಜಾತ್ಯತೀತ ನಿಲುವಿನ ಕಾಂಗ್ರೆಸ್ ಬೆಂಬಲಿಸಲು ಕರೆ



**ಹರಪನಹಳ್ಳಿಯಲ್ಲಿ ಕೆಪಿಸಿಸಿ ಅಲ್ಪಸಂಖ್ಯಾತರ ಘಟಕದ ರಾಜ್ಯಾಧ್ಯಕ್ಷ ಅಬ್ದುಲ್ ಜಬ್ಬಾರ್**

ಹರಪನಹಳ್ಳಿ, ಮೇ 4- ಅಲ್ಪಸಂಖ್ಯಾತರು ಒಗ್ಗಟ್ಟಾಗಿ ಜಾತ್ಯತೀತ ನಿಲುವು ಹೊಂದಿರುವ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಬೇಕು ಎಂದು ಕೆಪಿಸಿಸಿ ಅಲ್ಪಸಂಖ್ಯಾತರ ಘಟಕದ ರಾಜ್ಯಾಧ್ಯಕ್ಷ ಅಬ್ದುಲ್ ಜಬ್ಬಾರ್ ಸಾಬ್ ಹೇಳಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಇಂದು ಜರುಗಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶ ಹಾಗೂ ರಾಜ್ಯದಲ್ಲಿ ಶಾಂತಿ ಕದಡುವಂತಹ ಯಾವುದೇ ಸಂಘಟನೆಗಳಿರಲಿ ಅವುಗಳನ್ನು ನಿಷೇಧಿಸುವ ಅಗತ್ಯವಿದೆ. ಭಜರಂಗ ದಳ ಸಂಘಟನೆ ಒಂದೇ ಅಲ್ಲ, ಸಮಾಜದಲ್ಲಿ ಶಾಂತಿ ಹಾಗೂ ಸಮಾರಸ್ಯ ಕದಡುವಂತಹ ಮುಸ್ಲಿಂ ಸಂಘಟನೆ ಕೂಡ ಇರಬಹುದು ಅಥವಾ ಯಾವುದೇ ಸಂಘಟನೆ ಇರಲಿ ಅವುಗಳನ್ನು ಸಂಪೂರ್ಣವಾಗಿ ನಿಷೇಧಿಸುವುದರಲ್ಲಿ ತಪ್ಪೇನಿಲ್ಲ ಎಂದರು.

ಕಾಂಗ್ರೆಸ್ ಪಕ್ಷ ಪ್ರಣಾಳಿಕೆಯಲ್ಲಿ ಘೋಷಣೆ ಮಾಡಿರುವ ಭರವಸೆಗಳನ್ನು ಈಡೇರಿಸಲಿದೆ. ಕಾಂಗ್ರೆಸ್ ಪಕ್ಷಕ್ಕೆ ಉತ್ತಮ ವಾತವರಣವಿದೆ. ಅದೇ ರೀತಿ ಹರಪನಹಳ್ಳಿ ತಾಲೂಕಿನಲ್ಲಿ ಕಾಂಗ್ರೆಸ್ ಪಕ್ಷ ಈ ಬಾರಿ ಗೆಲುವು ಸಾಧಿಸಲಿದೆ ಎಂದು ಹೇಳಿದರು.

ಹರಪನಹಳ್ಳಿ ತಾಲ್ಲೂಕಿನಲ್ಲಿ ಕೆಲ ಅಲ್ಪಸಂಖ್ಯಾತರು ಅನ್ಯ ಪಕ್ಷಗಳಲ್ಲಿ ಗುರುತಿಸಿಕೊಂಡು ಕೆಲಸ ಮಾಡುತ್ತಿರುವುದಾಗಿ ಗಮನಕ್ಕೆ ಬಂದ ಹಿನ್ನೆಲೆಯಲ್ಲಿ ಅಂತವರನ್ನು ಮನವೊಲಿಸುವ ನಿಟ್ಟಿನಲ್ಲಿ ಅಲ್ಪಸಂಖ್ಯಾತ ಘಟಕ ಹಾಗೂ ಹಿರಿಯರನ್ನು ಒಳಗೊಂಡ ಸಮಿತಿ ರಚಿಸಲಾಗಿದೆ. ಈ ಸಮಿತಿ ಇಂದಿನಿಂದಲೇ ಸಕ್ರಿಯವಾಗಿ ಪಕ್ಷದ ಪರವಾಗಿ ಕೆಲಸ ಮಾಡಿ, ಗೆಲುವಿಗೆ ಶ್ರಮಿಸಲಿದೆ ಎನ್ನುವ ನಂಬಿಕೆ ಇದೆ. ಕಾಂಗ್ರೆಸ್ ಪಕ್ಷದಲ್ಲಿದ್ದು ಅನ್ಯಪಕ್ಷದ ವ್ಯಕ್ತಿಗೆ ಬೆಂಬಲಿಸುವ ಕೈ ಕಾರ್ಯಕರ್ತರ ಮೇಲೆ ಶಿಸ್ತುಕ್ರಮ ಜರುಗಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ವಕ್ಫ್ ಬೋರ್ಡ್ ಅಧ್ಯಕ್ಷ ಶಿರಾಜ್, ಎಂ.ಸರ್ಖಾವಸ್, ಪುರಸಭೆ ಮಾಜಿ ಅಧ್ಯಕ್ಷ ಹೆಚ್.ಕೆ. ಹಾಲೇಶ್, ಶಶಿಧರ ಪೂಜಾರ, ಎ.ಮೂಸಾಸಾಬ್, ಪುರಸಭೆ ಸದಸ್ಯರಾದ ಜಾಕೀರ್ ಹುಸೇನ್, ಭರತೇಶ್ ಜೋಗಿನರ್, ಬಿ.ನಜೀರ್ ಆಹ್ಮದ್, ಅಜ್ಜಯ್ಯ, ಖಾಲಿದ್, ಇಬ್ರಾಹಿಂ ಸಾಬ್, ಬಿ.ನಜೀರ್, ಎಂ.ಡಿ.ಸಮೀವುಲ್ಲಾ, ಎನ್.ಮಜೀದ್, ದಾದಾಪೀರ್, ಯೂನಸ್, ಎಂ.ಕೆ. ರಾಯಲ್ ಸಿದ್ದಿಕ್, ಜೀಸಾನ್, ನೌಶಾದ್, ಇರ್ಫಾನ್, ಅಬ್ದುಲ್, ನಸ್ರುಲ್ಲಾ ಸೇರಿದಂತೆ ಇತರರು ಇದ್ದರು.

# ಕಾಂಗ್ರೆಸ್‌ಗೆ ಈ ಬಾರಿ 140 ಸ್ಥಾನ ಖಚಿತ: ಹರಿಹರದ ಶಾಸಕ ರಾಮಪ್ಪ ವಿಶ್ವಾಸ



ಮಲೇಬೆನ್ನೂರು, ಮೇ 4- ಟಿಕೆಟ್ ಸಿಗದಿದ್ದಕ್ಕೆ ಮನಸ್ಸಿಗೆ ನೋವು, ಬೇಸರ ಆಗಿದ್ದು ನಿಜ. ಆ ಸಂದರ್ಭದಲ್ಲಿ ನಾವು ನಾಲ್ಕು ದಿನ ತಟಸ್ಥರಾಗಿದ್ದು ನಿಜ. ಈಗ ಆ ನೋವು, ಬೇಸರ ಮರೆತು ಪಕ್ಷದ ಗೆಲುವಿಗಾಗಿ ನಾವೆಲ್ಲರೂ ಒಟ್ಟಾಗಿದ್ದೇವೆ ಎಂದು ಶಾಸಕ ಎಸ್.ರಾಮಪ್ಪ ಅವರು ಸ್ಪಷ್ಟಪಡಿಸಿದರು.

> ಕ್ಷೇತ್ರದಲ್ಲಿ ಕಾಂಗ್ರೆಸ್ ಪರ ವಾತಾವರಣವಿದ್ದು, ನನಗೆ ಎದುರಾಳಿಯೇ ಇಲ್ಲದಂತಾಗಿದೆ.
> - ನಂದಿಗಾವಿ ಶ್ರೀನಿವಾಸ್, ಕಾಂಗ್ರೆಸ್ ಅಭ್ಯರ್ಥಿ

> ಸಮಾಜದಲ್ಲಿ ಆಶಾಂತಿ ಉಂಟು ಮಾಡುವ ಸಂಘಟನೆಗಳನ್ನು ನಿಷೇಧ ಮಾಡುವ ವಿಚಾರ ಸಂವಿಧಾನ ಬದ್ಧವಾಗಿದೆ.
> - ವಕೀಲ ಎಂ.ನಾಗೇಂದ್ರಪ್ಪ


ಪಟ್ಟಣದ ಬ್ಲಾಕ್ ಕಾಂಗ್ರೆಸ್ ಕಚೇರಿಯಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾಗೇಂದ್ರಪ್ಪ, ಕೃಷ್ಣಸಾ ಭೂತೆ, ಬಾಬುಲಾಲ್, ನಿಖಿಲ್ ಕೊಂಡಜ್ಜಿ ಸೇರಿದಂತೆ ಒಟ್ಟು 9 ಜನ ಟಿಕೆಟ್ ಆಕಾಂಕ್ಷಿಗಳಾಗಿದ್ದೆವು. ಈಗ ಬಹುತೇಕ ಎಲ್ಲರೂ ಒಂದಾಗಿ ಪಕ್ಷದ ಅಭ್ಯರ್ಥಿ ನಂದಿಗಾವಿ ಶ್ರೀನಿವಾಸ್ ಗೆಲುವಿಗೆ ಶ್ರಮಿಸುತ್ತಿದ್ದೇವೆ. ನಮ್ಮ ಎಲ್ಲಾ ಬೆಂಬಲಿಗರು, ಅಭಿಮಾನಿಗಳು, ಕಾಂಗ್ರೆಸ್ ಗೆಲುವಿಗೆ ಶ್ರಮಿಸಬೇಕೆಂದು ರಾಮಪ್ಪ ಕರೆ ಕೊಟ್ಟರು.

ಜಿ.ಪಂ. ಮಾಜಿ ಸದಸ್ಯ ಎಂ.ನಾಗೇಂದ್ರಪ್ಪ, ಕಾಂಗ್ರೆಸ್ ಅಭ್ಯರ್ಥಿ ನಂದಿಗಾವಿ ಶ್ರೀನಿವಾಸ್ ಮಾತನಾಡಿದರು. ಕೆಪಿಸಿಸಿ ಸದಸ್ಯ ಕೆ.ರೇವಣ ಸಿದ್ದಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬೀದ್ ಅಲಿ, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ನಿಖಿಲ್ ಕೊಂಡಜ್ಜಿ, ಜಿ.ಮಂಜುನಾಥ್ ಪಟೇಲ್, ಜಿಗಳಿ ಆನಂದಪ್ಪ, ಮಹಮದ್ ಫೈರೋಜ್, ಸೈಯದ್ ಜಾಕೀರ್, ವೈ.ವಿರೂಪಾಕ್ಷಪ್ಪ, ಭಾನುವಳ್ಳಿ ಚಂದ್ರಪ್ಪ ಸೇರಿ ದಂತೆ ಇನ್ನೂ ಅನೇಕರು ಈ ವೇಳೆ ಹಾಜರಿದ್ದರು.

## 8ರಂದು ನಗರದಲ್ಲಿ ಪಶುಸಂಗೋಪನಾ ತರಬೇತಿ

ದಾವಣಗೆರೆ, ಮೇ 4 - ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ವತಿಯಿಂದ ಇದೇ ದಿನಾಂಕ 8 ಮತ್ತು 9 ರಂದು ನಗರದ ಪಶು ಆಸ್ಪತ್ರೆ ಆವರಣದಲ್ಲಿರುವ ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ರೈತರಿಗೆ ಪಶುಸಂಗೋಪನಾ ಚಟುವಟಿಕೆಗಳ ತರಬೇತಿ ನಡೆಯಲಿದೆ. ವಿವರಕ್ಕೆ ಸಂಪರ್ಕಿಸುವ ದೂರವಾಣಿ : 08192-233787.

# ಕಂಪ್ಯೂಟರ್ ವೈರಸ್ ದಾಳಿ : ಎಚ್ಚರಿಕೆ



ನವದೆಹಲಿ, ಮೇ 4- ಸಂಪರ್ಕ, ಆರೋಗ್ಯ, ಶಿಕ್ಷಣ ವಲಯಗಳ ಸಂಸ್ಥೆಗಳಷ್ಟೇ ಅಲ್ಲದೇ ವೈಯಕ್ತಿಕ ಕಂಪ್ಯೂಟರ್ ಬಳಕೆದಾರರಿಗೂ 'ರಾಯಲ್ ರ್‍ಯಾನ್‌ಸಮ್‌ವೇರ್' ದಾಳಿಯ ಅಪಾಯ ಇದೆ ಎಂದು ಸೈಬರ್ ಸುರಕ್ಷತಾ ಸಂಸ್ಥೆ ತಿಳಿಸಿದೆ.

ಇಂಡಿಯನ್ ಕಂಪ್ಯೂಟರ್ ಎಮರ್ಜೆನ್ಸಿ ರೆಸ್ಪಾನ್ಸ್ ಟೀಮ್ (ಸಿಇಆರ್‌ಟಿ-ಇನ್) ಸಂಸ್ಥೆಯು ಈ ಬಗ್ಗೆ ಎಚ್ಚರಿಕೆ ನೀಡಿದ್ದು, ದಾಳಿಗೆ ಗುರಿಯಾದವರ ಮಾಹಿತಿಯ ಬದಲು ಬಿಟ್‌ಕಾಯಿನ್ ರೂಪದಲ್ಲಿ ಹಣ ಕೇಳಲಾಗುತ್ತಿದೆ ಎಂದು ತಿಳಿಸಿದೆ.2022ರ ಜನವರಿಯಲ್ಲಿ ಮೊದಲು ಈ ರ್‍ಯಾನ್‌ಸಮ್‌ವೇರ್ ಪತ್ತೆ ಮಾಡಲಾಗಿತ್ತು. ಸೆಪ್ಟೆಂಬರ್ ವೇಳೆಗೆ ಇದು ಸಕ್ರಿಯವಾಗಿತ್ತು.

ಹಲವು ಸಂಸ್ಥೆಗಳು ಹಾಗೂ ವ್ಯಕ್ತಿಗಳ ಕಂಪ್ಯೂಟರ್‌ಗಳ ಮೇಲೆ ದಾಳಿ ನಡೆಸಲಾಗುತ್ತಿದೆ. ಹಣ ಕೊಡದೇ ಇದ್ದರೆ ಮಾಹಿತಿಯನ್ನು ಸಾರ್ವಜನಿಕ ವಲಯದಲ್ಲಿ ಬಹಿರಂಗ ಮಾಡುವುದಾಗಿ ಬೆದರಿಕೆ ಹಾಕಲಾಗುತ್ತಿದೆ ಎಂದು ತಿಳಿಸಲಾಗಿದೆ. ಈ ಸಮಸ್ಯೆ ತಡೆಯಲು ಕಂಪ್ಯೂಟರ್‌ಗಳಲ್ಲಿರುವ ಆಂಟಿ ವೈರಸ್‌ಗಳನ್ನು ಅಪ್ಡೇಟ್ ಮಾಡಬೇಕು. ಅನಾಮಿಕ ಮೂಲಗಳಿಂದ ಬರುವ ಇ-ಮೇಲ್‌ಗಳನ್ನು ತೆರೆಯಬಾರದು ಎಂದು ಸಲಹೆ ನೀಡಲಾಗಿದೆ.

## ನಲ್ಕುದುರೆ ಸುತ್ತಮುತ್ತ ಇಂದು ಮಾಯಕೊಂಡ ಕಾಂಗ್ರೆಸ್ ಅಭ್ಯರ್ಥಿ ಬಸವಂತಪ್ಪ ಪ್ರಚಾರ




ಮಾಯಕೊಂಡ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ಎಸ್ ಬಸವಂತಪ್ಪ ಅವರು ಬೃಹತ್ ಮೆರವಣಿಗೆ ಮೂಲಕ ಚುನಾವಣಾ ಪ್ರಚಾರ ನಡೆಸುವರು. ಬೆಳಿಗ್ಗೆ 7.30ಕ್ಕೆ ಮಿಯ್ಯಾಪುರ, 7.45ಕ್ಕೆ ನಲ್ಕುದುರೆ ಗೋಮಾಳ, 8ಕ್ಕೆ ಅಶೋಕ ನಗರ ಕ್ಯಾಂಪ್, 8.15ಕ್ಕೆ ನಲ್ಕುದುರೆ, 8.45ಕ್ಕೆ ನವಿಲೇಹಾಳ್, 9.15ಕ್ಕೆ ದೊಡ್ಡಘಟ್ಟ, 9.45ಕ್ಕೆ ಕಬ್ಬಳ, 10.15ಕ್ಕೆ ಸೇವಾನಗರ, 11.15ಕ್ಕೆ ಹೊಸಹಳ್ಳಿ ಹಾಗೂ 11.45ಕ್ಕೆ ಕಂಸಾಗರ ಗ್ರಾಮಗಳಲ್ಲಿ ಪ್ರಚಾರ ನಡೆಸುವರು ಎಂದು ಬಸವಾಪಟ್ಟಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಜಿ. ನಾಗರಾಜ್ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಸಾಮೂಹಿಕ ಗಾಯತ್ರಿ ಪೂಜೆ

ಶ್ರೀ ಗಾಯತ್ರಿ ದೇವಿಯ ಉಪಾಸಕರ ಕ್ರಿಯಾತ್ಮಕ ಸಂಸ್ಥೆ ಶ್ರೀ ಗಾಯತ್ರಿ ಪರಿವಾರದಿಂದ ಪ್ರತೀ ತಿಂಗಳ ಹುಣ್ಣಿಮೆಯೆಂದು ನಡೆಸುವ ಸಾಮೂಹಿಕ ಶ್ರೀ ಗಾಯತ್ರಿ ಪೂಜೆ, ಉಪಾಸನೆ, ಸಾಮೂಹಿಕ ಶ್ರೀ ಗಾಯತ್ರಿ ಪೂಜೆ ಬುದ್ಧ ಪೂರ್ಣಿಮೆ ಅಂಗವಾಗಿ ನಗರದ ಶ್ರೀ ಶಂಕರ ಮಠದಲ್ಲಿ ಇಂದು ಬೆಳಿಗ್ಗೆ 7 ಕ್ಕೆ ನಡೆಯಲಿದೆ ಎಂದು ಪರಿವಾರದ ಅಧ್ಯಕ್ಷರಾದ ಡಾ॥ ಸುಶೀಲಮ್ಮ ತಿಳಿಸಿದ್ದಾರೆ. ಬೇಳೂರು ಸಂತೋಷ್‌ಕುಮಾರ್ ಶೆಟ್ಟಿ ಮತ್ತು ಕುಟುಂಬದವರು ಪೂಜಾ ಸೇವಾಕರ್ತರಾಗಿದ್ದಾರೆ ಎಂದು ಪರಿವಾರದ ಪ್ರಧಾನ ಕಾರ್ಯದರ್ಶಿಯಾದ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

# ಪಂಚರತ್ನ ಅನುಷ್ಠಾನಕ್ಕಾಗಿ ಜೆಡಿಎಸ್‌ಗೆ ಬಹುಮತ ನೀಡಿ : ಕುಮಾರಸ್ವಾಮಿ



**ಉಚಿತ ಶಿಕ್ಷಣ, ಆರೋಗ್ಯ, ನಿರುದ್ಯೋಗ ಭತ್ಯೆ, ಸಾಲಮನ್ನಾ ಸೇರಿ ಹಲವು ಯೋಜನೆ**

ಮಾಯಕೊಂಡ ಮೇ. 4 - ಪಂಚರತ್ನ ಯೋಜನೆ ಜಾರಿಗಾಗಿ ಜೆಡಿಎಸ್‌ಗೆ ಪೂರ್ಣ ಬಹುಮತ ನೀಡಿರಿ ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಮತ ಯಾಚಿಸಿದರು.

ಇಲ್ಲಿಗೆ ಸಮೀಪದ ಬಾಡ ಗ್ರಾಮದಲ್ಲಿ ಇಂದು ನಡೆದ ಪ್ರಚಾರ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ನಾಡಿನ ಮಹಿಳೆಯರು, ಯುವಕರು, ನೊಂದವರು ಪ್ರತಿನಿತ್ಯ ನಮ್ಮ ಮನೆ ಬಾಗಿಲಿಗೆ ಬಂದು, ಹೇಳಿಕೊಂಡ ನೋವನ್ನು ಆಲಿಸಿ ಅದನ್ನು ಪರಿಹರಿಸಲು ಪಂಚರತ್ನ ಯೋಜನೆ ತಯಾರಿಸಲಾಗಿದೆ. ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಕೊರತೆಯಿಂದ ಪ್ರತಿಷ್ಠಿತ ಶಾಲೆಗಳಲ್ಲಿ ಮಕ್ಕಳನ್ನು ಓದಿಸಲು ಹೋಗಿ ರೈತರು ಸಾಲಗಾರರಾಗಿದ್ದಾರೆ. ಇದನ್ನು ತಪ್ಪಿಸಲು ಪ್ರತೀ ಪಂಚಾಯತಿಯಲ್ಲಿ ಗುಣಮಟ್ಟದ ಹೈಟೆಕ್ ಶಾಲೆ ತೆರೆದು, ಉಚಿತ ಶಿಕ್ಷಣ ನೀಡುತ್ತೇವೆ. ರಾಜ್ಯದ 6006 ಗ್ರಾಮ ಪಂಚಾಯತಿಗಳಲ್ಲೂ ಗುಣಮಟ್ಟದ ಉಚಿತ ಚಿಕಿತ್ಸೆ ನೀಡುವ ಆಸ್ಪತ್ರೆ ನಿರ್ಮಿಸಲಾಗುತ್ತದೆ. ಕ್ಯಾನ್ಸರ್‌ನಂಥ ಗಂಭೀರ ಕಾಯಿಲೆಗೂ ಉಚಿತ ಚಿಕಿತ್ಸೆ ನೀಡಲಾಗುತ್ತದೆ.

ರೈತರಿಗೆ ಸಕಾಲಕ್ಕೆ ಬೀಜ, ರಸಗೊಬ್ಬರ ಖರೀದಿಗೆ ಪ್ರತಿವರ್ಷ ಎಕರೆಗೆ ಹತ್ತು ಸಾವಿರ ಧನ ಸಹಾಯ ನೀಡಲಾಗುತ್ತದೆ.

ಎರಡು ಬಾರಿ ಸಾಲಮನ್ನಾ ಮಾಡಲಾಗಿದೆ. ಕಳೆದ ಬಾರಿ 26 ಲಕ್ಷ ಕುಟುಂಬಗಳ 35 ಸಾವಿರ ಕೋಟಿ ರೂ. ಸಾಲ ಮನ್ನಾ ಮಾಡಲಾಗಿದೆ. ಭೂ ರಹಿತ ಕೂಲಿ ಕಾರ್ಮಿಕರಿಗೆ ತಿಂಗಳಿಗೆ 2 ಸಾವಿರ ನೆರವು ನೀಡಲಾಗುತ್ತದೆ. ಬಡವರಿಗೆ ಪ್ರತಿವರ್ಷ 5 ಸಿಲಿಂಡರ್ ಉಚಿತ ವಿತರಿಸುತ್ತೇವೆ. ವೃದ್ಧಾಪ್ಯ ವೇತನ 5 ಸಾವಿರಕ್ಕೆ, ವಿಧವಾ ವೇತನ 2 ಸಾವಿರಕ್ಕೆ ಹೆಚ್ಚಿಸಲಾಗುತ್ತದೆ. ಈ ಎಲ್ಲಾ ಯೋಜನೆ ಜಾರಿಗೆ ಪ್ರತಿವರ್ಷ 2.5 ಲಕ್ಷ ಕೋಟಿ ಹಣ ಮೀಸಲಿಡುತ್ತೇನೆ. ರಾಷ್ಟ್ರೀಯ ಪಕ್ಷಗಳಿಗೆ 75 ವರ್ಷ ಮತ ನೀಡಿದ್ದೀರಿ, ಜೆಡಿಎಸ್‌ಗೆ ಈ ಬಾರಿ ಬಹುಮತದ ಸರ್ಕಾರ ನೀಡಿ, ಅಭಿವೃದ್ಧಿಗೆ ಕಾರಣೀಭೂತರಾಗಿ ಎಂದು ಮನವಿ ಮಾಡಿದರು.

ಮಾಜಿ ಶಾಸಕ ಮಹಿಮಾ ಜೆ.ಪಟೇಲ್ ಮಾತನಾಡಿ, ಕುಮಾರಸ್ವಾಮಿ ಮುಖ್ಯಮಂತ್ರಿಯಾಗಬೇಕು ಎಂಬುದು ನಾಡಿನ ಬಹುಜನರ ಒತ್ತಾಸೆ. ಅದಕ್ಕಾಗಿ ಎಲ್ಲರೂ ಜೆಡಿಎಸ್ ಬೆಂಬಲಿಸಬೇಕು ಎಂದರು.

ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ರಾಜ್ಯ ಪ್ರಧಾನ ಕಾರ್ಯದರ್ಶಿ ಕಲ್ಲೇ ರುದ್ರೇಶ್, ಜೆಡಿಎಸ್ ಅಭ್ಯರ್ಥಿಗಳಾದ ಆನಂದಪ್ಪ, ಮಲ್ಲಾಪುರ ದೇವರಾಜ್, ತೇಜಸ್ವಿ ಪಟೇಲ್, ಅಮಾನುಲ್ಲಾ ಖಾನ್, ಬಾತಿ ಶಂಕರ್, ಜಿಲ್ಲಾಧ್ಯಕ್ಷ ಚಿದಾನಂದಪ್ಪ, ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ಶೀಲಾಕುಮಾರಿ, ಹರಲೀಪುರ ಗಂಗಾಧರಪ್ಪ, ಕುಬೇರಪ್ಪ, ಆನಗೋಡು ಸಿದ್ದಲಿಂಗಪ್ಪ, ಬಿ.ಸಿ. ಬಸವರಾಜಪ್ಪ, ಕಾಶೀಪುರ ಸಿದ್ದಲಿಂಗಪ್ಪ ಮತ್ತಿತರರು ಇದ್ದರು.

## ಪೂಜಾರ್ ಸೋಮಶೇಖರ್ ನಿಧನ



ದಾವಣಗೆರೆ ಹಳೇ ಕೊತ್ವಾಲ್ ಪೇಟೆ (ಶಿವಾಜಿ ಸರ್ಕಲ್) ವಾಸಿ ದಿ. ಪೂಜಾರ್ ಗುಡ್ಡಪ್ಪನವರ ಪುತ್ರ ನಗರದ ದೇವತೆ ಶ್ರೀ ದುರ್ಗಾಂಬಿಕಾ ದೇವಸ್ಥಾನದ ಅರ್ಚಕರಾದ

**ಶ್ರೀ ಪೂಜಾರ್ ಸೋಮಶೇಖರ್** (58)

ಅವರು ದಿನಾಂಕ 4.5.2023ರ ಗುರುವಾರ ಸಂಜೆ 7.20ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಪತ್ನಿ, ಸಹೋದರರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 5.5.2023ರ ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ನಗರದ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ, ಮೊ : 85534 49853, 94489 64877**

## ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ಜಿಲ್ಲೆ ಹೊನ್ನಾಳಿ ಟೌನ್ ಕುಂಬಾರ ಬೀದಿ ವಾಸಿ

**ಶ್ರೀಮತಿ ಬಸಮ್ಮ ಶ್ರೀ ಮಹೇಶ್ವರಪ್ಪ**


ಇವರು ಮಾಡುವ ವಿಜ್ಞಾಪನೆಗಳು. ದಿನಾಂಕ 28.04.2023ನೇ ಶುಕ್ರವಾರ ರಾತ್ರಿ 10.30ಕ್ಕೆ ನನ್ನ ಮಗನಾದ

**ಶ್ರೀ ಶಂಭುಲಿಂಗ ಎಂ.**

ಇವರು ಕೈಲಾಸ ವಾಸಿಗಳಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **ಕೈಲಾಸ ಸಮಾರಾಧನೆಯನ್ನು** ದಿನಾಂಕ 6.5.2023ನೇ ಶನಿವಾರ ಬೆಳಿಗ್ಗೆ 10 ಗಂಟೆಗೆ ಕುಂಬಾರ ಬೀದಿಯ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತ ಕುಟುಂಬ ವರ್ಗ : **ಶ್ರೀ ಚಂದ್ರಪ್ಪ ಮತ್ತು ಸಹೋದರರು, ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ದೊಡ್ಡೆತ್ತಿನಹಳ್ಳಿ ವಂಶಸ್ಥರು ಮತ್ತು ಸಮಾಜದವರು ಹಾಗೂ ಬಂಧು-ಮಿತ್ರರು. ಮೊ: 96322 06773**

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 03-05-2023ರ ಬುಧವಾರ ಅಕಾಲಿಕವಾಗಿ ನಿಧನರಾದ ಹಿರಿಯ ತೆರಿಗೆ ಸಲಹೆಗಾರರೂ ಹಾಗೂ ವಕೀಲರೂ ಶ್ರೀ ಮಾತಾ ಟ್ರಸ್ಟ್‌ನ ಗೌರವಾಧ್ಯಕ್ಷರಾದ

**ಶ್ರೀ ಅರುಣಾಚಲ ಶೆಟ್ಟರು**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.

ಅವರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಮೃತರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ಶ್ರೀ ಮಾತಾ ಟ್ರಸ್ಟ್‌ನ ಅಧ್ಯಕ್ಷರು, ಎಲ್ಲಾ ನಿರ್ದೇಶಕರು ಮತ್ತು ಆಶ್ರಮದ ಅತಿಥಿಗಳು ಹಾಗೂ ಸಿಬ್ಬಂದಿ ವರ್ಗದವರು.**

## ಕಾಶ್ಮೀರದಲ್ಲಿ ಸೈನ್ಯದ ಹೆಲಿಕಾಪ್ಟರ್ ಕುಸಿದು ತಾಂತ್ರಿಕ ಸಿಬ್ಬಂದಿ ಸಾವು

ಜಮ್ಮು, ಮೇ 4 – ಜಮ್ಮು ಮತ್ತು ಕಾಶ್ಮೀರದ ಕಿಶ್ತವರ್ ಜಿಲ್ಲೆಯಲ್ಲಿ ಸೈನ್ಯದ ಹೆಲಿಕಾಪ್ಟರ್ ಇಳಿಯುವಾಗ ಕುಸಿದು ತಾಂತ್ರಿಕ ಸಿಬ್ಬಂದಿಯೊಬ್ಬರು ಸಾವನ್ನಪ್ಪಿದ್ದಾರೆ ಹಾಗೂ ಇಬ್ಬರು ಪೈಲಟ್‌ಗಳು ಗಾಯಗೊಂಡಿದ್ದಾರೆ. ಹಿಮಪಾತದ ಕಾರಣದಿಂದ ಧ್ರುವ ಆಧುನಿಕ ಹಗುರ ಹೆಲಿಕಾಪ್ಟರ್ ಅನ್ನು ಜಿಲ್ಲಾ ಕೇಂದ್ರದಲ್ಲಿ ಇಳಿಸಲು ಸಾಧ್ಯವಾಗಲಿಲ್ಲ. ನಂತರ ಅದನ್ನು ಮಾರ್ವಾ ಪ್ರದೇಶದಲ್ಲಿ ನದಿ ದಂಡೆಯಲ್ಲಿ ಇಳಿಸಲು ಪ್ರಯತ್ನ ನಡೆಸಲಾಗಿತ್ತು. ಹೆಲಿಕಾಪ್ಟರ್‌ನಲ್ಲಿ ತಾಂತ್ರಿಕ ತೊಡಕಾಗಿರುವ ಬಗ್ಗೆ ಪೈಲಟ್‌ಗಳು ವೈಮಾನಿಕ ನಿಯಂತ್ರಕರಿಗೆ ತಿಳಿಸಿದ್ದರು. ಈ ಘಟನೆಯ ಬಗ್ಗೆ ತನಿಖೆ ನಡೆಸಲು ಆದೇಶಿಸಲಾಗಿದೆ.

## ಸುನಂದಮ್ಮ ಚಂದ್ರಶೇಖರಪ್ಪ ನಿಧನ



ದಾವಣಗೆರೆ ಸಿಟಿ ಎಸ್.ಎಸ್ ಲೇಔಟ್ ಎ ಬ್ಲಾಕ್‌ನ ನಾಲ್ಕನೇ ಕ್ರಾಸ್ ವಾಸಿ ಶ್ರೀಮತಿ ಸುನಂದಮ್ಮ ಚಂದ್ರಶೇಖರಪ್ಪ (ಲಿಂಗೈಕ್ಯ ತಿಳುವಳ್ಳಿ ಶೆಟ್ರು ಸಿದ್ದರಾಮಪ್ಪನವರ ತೃತೀಯ ಮಗಳು) ಇವರು ದಿನಾಂಕ 4.05.2023ರ ಗುರುವಾರ ಮಧ್ಯಾಹ್ನ 3.40ಕ್ಕೆ ನಿಧನರಾದರು. ಮೂವರು ಪುತ್ರರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಪಾರ್ಥಿವ ಶರೀರವನ್ನು ದಿನಾಂಕ 5.5.2023ರ ಶುಕ್ರವಾರ ನಗರದ ಎಸ್.ಎಸ್ ಲೇಔಟ್ ಎ ಬ್ಲಾಕ್‌ನ ನಾಲ್ಕನೇ ಕ್ರಾಸ್‌ನ ಅಂಗವಿಕಲ ಶಾಲೆಯ ಹತ್ತಿರ ಅಂತಿಮ ದರ್ಶನಕ್ಕೆ ಇಡಲಾಗುವುದು. ನಂತರ ಬೆಳಿಗ್ಗೆ 11 ಕ್ಕೆ ಶಾಮನೂರು ಗ್ಲಾಸ್ ಹೌಸ್ ಹತ್ತಿರ ವೀರಶೈವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಲಿದೆ.

## 24ರಂದು ನಗರದಲ್ಲಿ ಧರ್ಮೋಪನಯನ

ದಾವಣಗೆರೆ, ಮೇ 4 - ಶ್ರೀ ಶಂಕರ ಸೇವಾ ಸಂಘದಿಂದ ತ್ರಿಮತಸ್ಥ ಬ್ರಾಹ್ಮಣ ವಟುಗಳಿಗೆ ಇದೇ ದಿನಾಂಕ 24 ರಂದು ಧರ್ಮೋಪನಯನವನ್ನು ನಗರದ ನಿಜಲಿಂಗಪ್ಪ ಬಡಾವಣೆಯ ಶ್ರೀ ಶಂಕರ ಸಮುದಾಯ ಭವನದಲ್ಲಿ ಏರ್ಪಡಿಸಲಾಗಿದೆ.ಆಸಕ್ತಿಯುಳ್ಳ ವಿಪ್ರ ಪೋಷಕರು ಮೇ 15 ರೊಳಗೆ ಮೊ: 82964 08068 । 94807 10858 ಗೆ ಕರೆ ಮಾಡಿ ತಮ್ಮ ಹೆಸರನ್ನು ದೇವಸ್ಥಾನದ ವ್ಯವಸ್ಥಾಪಕರಲ್ಲಿ ನೋಂದಾಯಿಸುವಂತೆ ಸಂಘದ ಕಾರ್ಯದರ್ಶಿ ಶ್ರೀನಿವಾಸ ಕೆ. ಜೋಶಿ ತಿಳಿಸಿದ್ದಾರೆ.

## ಭಾವಪೂರ್ಣ ಶ್ರದ್ಧಾಂಜಲಿ




ನಮ್ಮ ಅಸೋಸಿಯೇಷನ್ನಿನ ನಿರ್ದೇಶಕರೂ, ದಾವಣಗೆರೆ ದೈವಜ್ಞ ಸಮಾಜ ಸಂಘದ ಮಾಜಿ ಕಾರ್ಯದರ್ಶಿಗಳೂ, ದೈವಜ್ಞ ವಿದ್ಯಾ ಸಂಸ್ಥೆ ಉಪಾಧ್ಯಕ್ಷರೂ, ವೈಕುಂಠ ಟ್ರಸ್ಟ್ ಖಜಾಂಚಿಗಳೂ ಹಾಗೂ ಅನೇಕ ಸಂಘ - ಸಂಸ್ಥೆಗಳಲ್ಲಿ ಸಕ್ರಿಯವಾಗಿ ಸಮಾಜ ಸೇವೆ ಸಲ್ಲಿಸುತ್ತಿದ್ದ

**ಶ್ರೀ ಸುಬ್ರಾಯ ವೀರಪ್ಪ ಕುರುಡೇಕರ್ ಕೊಟ್ಟೂರು**

ಇವರು ದಿನಾಂಕ 23.04.2023ರಂದು ದೈವಾಧೀನರಾಗಿದ್ದು, ಶ್ರೀಯುತರ ನಿಧನಕ್ಕೆ ಭಗವಂತನು ಮೃತರ ಆತ್ಮಕ್ಕೆ ಚಿರಶಾಂತಿ ಕರುಣಿಸಲೆಂದು ಹಾಗೂ ಕುಟುಂಬದವರಿಗೆ ದುಃಖವನ್ನು ಭರಿಸುವ ಶಕ್ತಿ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಜ್ಯೂಯಲರ್ಸ್ ಅಸೋಸಿಯೇಷನ್ ದಾವಣಗೆರೆ.**

## ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ



॥ ಶ್ರೀ ಸೋಮೇಶ್ವರ ಪ್ರಸನ್ನ ॥

**ಶ್ರೀಮತಿ ರೂಪಾ ಎಸ್. ಕುರ್ಡೇಕರ್ ಮತ್ತು ಮಕ್ಕಳು, ದಾವಣಗೆರೆ**

ಇವರು ಮಾಡುವ ವಿಜ್ಞಾಪನೆಗಳು. ದಿನಾಂಕ 22.04.2023ನೇ ಶನಿವಾರ ರಾತ್ರಿ 9.30ಕ್ಕೆ ನನ್ನ ಪೂಜ್ಯ ಪತಿಯವರಾದ

**ಶ್ರೀ ಸುಭ್ರಾಯ್ ವೀರಪ್ಪ ಕುರ್ಡೇಕರ್**

ಇವರು ವೈಕುಂಠ ವಾಸಿಗಳಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **ವೈಕುಂಠ ಸಮಾರಾಧನೆಯನ್ನು** ದಿನಾಂಕ 5.5.2023ನೇ ಶುಕ್ರವಾರ ಮಧ್ಯಾಹ್ನ 1 ಕ್ಕೆ ದೈವಜ್ಞ ಕಲ್ಯಾಣ ಮಂಟಪ, ರೇಣುಕಾ ಬಡಾವಣೆ, ಪಿ.ಬಿ. ರಸ್ತೆ, ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತ ಕುಟುಂಬ ವರ್ಗ : **ಶ್ರೀಮತಿ ರೂಪಾ ಎಸ್.ಕೆ. ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಕುರ್ಡೇಕರ್ ಫ್ಯಾಮಿಲಿ ಹಾಗೂ ಬಂಧು-ಮಿತ್ರರು.**

**ಮೊ : 90351 11004**

ವಿ. ಸೂ. : ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.

## ಆರ್. ಚಂದ್ರನಾಯ್ಕ ನಿಧನ



ದಾವಣಗೆರೆ ಸರಸ್ವತಿ ನಗರ 'ಎ' ಬ್ಲಾಕ್ 1ನೇ ಮೇನ್, 1ನೇ ಕ್ರಾಸ್ ವಾಸಿ ನಿವೃತ್ತ ಬೆಸ್ಕಾಂ ಎ.ಇ.ಇ

**ಆರ್.ಚಂದ್ರಾನಾಯ್ಕ್**

ಅವರು ದಿನಾಂಕ 4.5.2023ರ ಗುರುವಾರ ಸಂಜೆ 5.45ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 74 ವರ್ಷ ವಯಸ್ಸಾಗಿತ್ತು.

ಓರ್ವ ಪುತ್ರಿ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 5.5.2023ರ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಮೃತರ ಸ್ವಗ್ರಾಮವಾದ ಚನ್ನಗಿರಿ ತಾಲ್ಲೂಕು ಕದರನಹಳ್ಳಿ ಗ್ರಾಮದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**
**ಶ್ರೀಮತಿ ಡಾ. ಮಂಜುಳ ಮತ್ತು ಶ್ರೀ ಪರಶುರಾಮ್ ಕದರನಹಳ್ಳಿ.**
**ಶ್ರೀಮತಿ ನಾಗರತ್ನ ದಿ. ಕಿರಣ್ ಕುಮಾರ್.ಸಿ**
**78928 49893, 97317 711803**

## 18ನೇ ವರ್ಷದ ಪುಣ್ಯಸ್ಮರಣೆ



**ಜಿ.ಸಿ. ರುದ್ರಮುನಿ,** ASI

ನೀವು ನಮ್ಮನ್ನಗಲಿ ಇಂದಿಗೆ 18 ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ,

ಪತ್ನಿ : ಶ್ರೀಮತಿ ಗೌರಮ್ಮ ಜಿ.ಎಂ.
ಮಗಳು : ಶ್ರೀಮತಿ ಆರ್. ಲತಾ ಮಂಜಣ್ಣ ಎಸ್.ಬಿ.,
ಮಗ : ಆರ್. ವೀರೇಂದ್ರ, ಶ್ರೀಮೈತ್ರಿ,
ಮೊಮ್ಮಕ್ಕಳು : ಓಂಪ್ರಕಾಶ್, ಶಿವಾನಿ
ಹಾಗೂ ಬಂಧು-ಮಿತ್ರರು.

# ಜೈಕಾರ, ಡೊಳ್ಳಿನ ಸದ್ದು, ನೆಂಟರಂತೆ ಬಂದು ಹೋಗುವ ರಾಷ್ಟ್ರೀಯ ನಾಯಕರು

ದಾವಣಗೆರೆ, ಮೇ 4- ಅಲ್ಲಲ್ಲಿ ಜೈಕಾರ, ಡೊಳ್ಳಿನ ಸದ್ದು, ಮೈಕುಗಳಲ್ಲಿ ಪಕ್ಷಗಳ ಹಾಡು, ಮೈಕ್ ಕಟ್ಟಿಕೊಂಡು ತಿರುಗಾಡುತ್ತಿರುವ ಆಟೋಗಳು. ಮನೆ ಮುಂದಿನ ಗೇಟು ಅಥವಾ ಬಾಗಿಲು ಬಡಿದು ಮತ ಪತ್ರ ನೀಡುವ ಕಾರ್ಯಕರ್ತರು. ನೂರಾರು ಜನರೊಂದಿಗೆ ತೆರೆದ ವಾಹನದಲ್ಲಿ ಕೈ ಮುಗಿಯುತ್ತಾ ಸಾಗುವ ಅಭ್ಯರ್ಥಿಗಳು. ನೆಂಟರು, ಬೀಗರಂತೆ ಆಗಾಗ್ಗೆ ಬಂದು ಹೋಗುವ ರಾಷ್ಟ್ರೀಯ ನಾಯಕರು.

ಚಹಾ ಅಂಗಡಿ, ಹೋಟೆಲ್‌ಗಳು, ಕ್ಷೌರಿಕರ ಅಂಗಡಿಗಳು, ಬಸ್ ನಿಲ್ದಾಣ, ಬೆಳಿಗ್ಗೆ ಹಾಗೂ ಸಂಜೆ ಪಾರ್ಕುಗಳಲ್ಲಿ ಹೀಗೆ ನಾಲ್ಕೈದು ಜನ ಸೇರುವ ಕಡೆ 'ಹೇಗಿದೆ ಎಲೆಕ್ಷನ್ ?' ಎಂಬ ಪ್ರಶ್ನೆಯೊಂದು ಸಾಮಾನ್ಯವಾಗಿ ಹರಿದಾಡುತ್ತದೆ. ಪ್ರಸ್ತುತ ವಿದ್ಯಮಾನಗಳ ಸುದೀರ್ಘ ಚರ್ಚೆಯ ಕೊನೆಗೆ 'ಯಾರ್ ಗೆದ್ರೂ ಅಷ್ಟೇ' ಎಂಬ ನಿರಾಸೆಯ ಭಾವ ಹೊತ್ತ ಉತ್ತರವೂ ಬರುತ್ತದೆ.

ಹೌದು, ವಿಧಾನಸಭಾ ಚುನಾವಣೆ ಘೋಷಣೆಯಾಗಿ ಮತದಾನಕ್ಕೆ ದಿನಗಣನೆ ಆರಂಭವಾಗಿದ್ದು, ನಗರದಲ್ಲಿ ಕಂಡುಬರುತ್ತಿರುವ ಸಾಮಾನ್ಯ ಚಿತ್ರಣಗಳಿವು.

ಜಿಲ್ಲೆಯಲ್ಲಿ ಕಣ ರಂಗೇರಿದೆ. ಬಿರು ಬಿಸಿಲನ್ನೂ ಲೆಕ್ಕಿಸದ ಅಭ್ಯರ್ಥಿಗಳು ಮತದಾರರ ಓಲೈಕೆಯಲ್ಲಿ ನಿರತರಾಗಿದ್ದಾರೆ. ಅಭ್ಯರ್ಥಿಗಳ ಜೊತೆ ಕುಟುಂಬದ ಸದಸ್ಯರೂ ಶ್ರಮ ವಹಿಸುತ್ತಿದ್ದಾರೆ. ಒಂದೆಡೆ ಅಭ್ಯರ್ಥಿಗಳು ಬೆಂಬಲಿಗರು, ಕಾರ್ಯಕರ್ತರೊಂದಿಗೆ ರೋಡ್ ಶೋ ನಡೆಸುತ್ತಾ, ಕೈ ಮುಗಿಯುತ್ತಾ ಸಾಂಪ್ರದಾಯಿಕವಾಗಿ ಮತ ಕೇಳುತ್ತಿದ್ದರೆ, ಮತ್ತೊಂದೆಡೆ ತಂತ್ರಜ್ಞಾನಕ್ಕೆ ತಕ್ಕಂತೆ ಚುನಾವಣಾ ಪ್ರಚಾರದ ಬಗೆಗಳೂ ಬದಲಾಗುತ್ತಿವೆ.

ಸದ್ಯ ದಾವಣಗೆರೆ ಕ್ಷೇತ್ರಗಳಲ್ಲಿನ ಪ್ರಚಾರದ ಅಬ್ಬರವನ್ನೇ ನೋಡುವುದಾದರೆ, ಬೆಳಿಗ್ಗೆಯೇ ಸಿಂಗರಿಸಿದ ತೆರೆದ ವಾಹನದಲ್ಲಿ ಅಭ್ಯರ್ಥಿಗಳು ಕೈ ಮುಗಿಯುತ್ತಾ ಸಾಗುತ್ತಿದ್ದರೆ, ಕಾರ್ಯಕರ್ತರು ಪಕ್ಷದ ಪಾಂಪ್ಲೆಟ್ ಹಿಡಿದು ಮನೆ ಮನೆಗಳಿಗೂ ತಲುಪಿಸಿ, ಅಭ್ಯರ್ಥಿಗಳಿಗೆ ಮತ ನೀಡುವಂತೆ ಮನವಿ ಮಾಡುತ್ತಿದ್ದಾರೆ.





ದಾವಣಗೆರೆ ಬಡಾವಣೆಯೊಂದರಲ್ಲಿ ಅಭ್ಯರ್ಥಿಗಳ ಪ್ರಚಾರ ವೀಕ್ಷಿಸುತ್ತಿರುವ ಮತದಾರರು. ಪ್ರಚಾರಕ್ಕೆ ಎಲೆಕ್ಟ್ರಿಕ್ ವಾಹನ ಬಳಸುತ್ತಿರುವ ಡಾ.ಶಾಮನೂರು ಶಿವಶಂಕರಪ್ಪ (ಬಲಚಿತ್ರ)

## ದೇವನಗರಿಯಲ್ಲಿ ಜೋರಾಗಿದೆ ಎಲೆಕ್ಷನ್ ಹವಾ ..!

ಸ್ಪರ್ಧಿಗಳು ನಾವೇ ಎಂಬ ಖಚಿತತೆ ಇದ್ದ ಕಾಂಗ್ರೆಸ್ ಅಭ್ಯರ್ಥಿಗಳು ಬಲುಬೇಗ ಪ್ರಚಾರಕ್ಕಿಳಿದಿದ್ದರು. ಬಿಜೆಪಿಯಲ್ಲಿನ್ನೂ ಅಭ್ಯರ್ಥಿಗಳು ಹುಡುಕಾಟ ನಡೆದಿತ್ತು. ಬಿಜೆಪಿ ಮೊದಲ ಪಟ್ಟಿ ಬಿಡುಗಡೆ ಮಾಡಿದರೂ, ಉತ್ತರ ಹಾಗೂ ದಕ್ಷಿಣ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳು ಯಾರೆಂಬುದು ತಿಳಿದಿರಲಿಲ್ಲ. ಇತ್ತ ಅಭ್ಯರ್ಥಿಗಳ ಘೋಷಣೆಯಾಗುವ ಹೊತ್ತಿಗೆ ಕಾಂಗ್ರೆಸ್ ಅಭ್ಯರ್ಥಿಗಳು ತಮ್ಮ ಕ್ಷೇತ್ರಗಳಲ್ಲಿ ನಾಲ್ಕಾಣೆ ಭಾಗ ಪ್ರಚಾರ ನಡೆಸಿಯಾಗಿತ್ತು.

ಕಾಂಗ್ರೆಸ್‌ನಿಂದ ಸ್ಪರ್ಧೆಗಿಳಿದಿರುವುದು ಹಳೆಯ ಹುಲಿಗಳು. ಈ ಹಳೆಯ ಹುಲಿಗಳನ್ನು ಕಟ್ಟಿಹಾಕಲು ಬಿಜೆಪಿ ಹೊಸ ಬೇಟೆಗಾರರನ್ನೇ ಕಣಕ್ಕಿಳಿಸಿದೆ.

ಉತ್ತರ ಕ್ಷೇತ್ರದ ಅಭ್ಯರ್ಥಿ ಲೋಕಿಕೆರೆ ನಾಗರಾಜ್ ಬೆಳಿಗ್ಗೆ 6 ಗಂಟೆಗಾಗಲೇ ಪ್ರಚಾರಕ್ಕಿಳಿಯುತ್ತಿದ್ದು, ಕಳೆದ ಕೆಲ ದಿನಗಳಿಂದ ವಿವಿಧ ಪಾರ್ಕುಗಳಲ್ಲಿ ಸಂಚರಿಸಿ, ವಾಯುವಿಹಾರಿಗಳ ಮನವೊಲಿಕೆಯಲ್ಲಿ ಮುಂದಾಗಿದ್ದಾರೆ. ನಾಲ್ಕೈದು ಜನರೊಂದಿಗೆ ಸರಳವಾಗಿಯೇ ಮತ ಯಾಚಿಸುವ ಅವರು, ಮಾಜಿ ಸಚಿವ ಎಸ್.ಎ. ರವೀಂದ್ರನಾಥ್ ಅವರ ನಡೆಯನ್ನೇ ಅನುಸರಿಸುತ್ತಿದ್ದಾರೆ ಎಂಬುದು ಅವರ ಪಕ್ಷದ ಕಾರ್ಯಕರ್ತರೇ ಹೇಳುವ ಮಾತು.

ಚುನಾವಣೆ ಘೋಷಣೆಗೆ ಮುನ್ನವೇ ಟಿಕೆಟ್‌ಗಾಗಿ ತೀವ್ರ ಕಸರತ್ತು ನಡೆಸಿದ್ದ ದಕ್ಷಿಣ ಕ್ಷೇತ್ರದ ಅಭ್ಯರ್ಥಿ ಅಜಯ್ ಕುಮಾರ್, ಟಿಕೆಟ್ ಘೋಷಣೆಯಾಗುತ್ತಿದ್ದಂತೆ ಭರ್ಜರಿಯಾಗಿಯೇ ಪ್ರಚಾರಕ್ಕೆ ಧುಮುಕಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿಗಳು ಆರಂಭದಿಂದಲೇ ಗೆಲುವು ನಮ್ಮದೆಂದು ಬೀಗುತ್ತಿದ್ದಾರಾದರೂ, ಪ್ರಚಾರ ಕಾರ್ಯದಲ್ಲಿ ಮಾತ್ರ ಹಿಂದೆ ಬಿದ್ದಿಲ್ಲ. ಶಾಮನೂರು ಶಿವಶಂಕರಪ್ಪ ಅವರ ಜೊತೆ ಸ್ಥಳೀಯ ಕಾಂಗ್ರೆಸ್ ಮುಖಂಡರ ದಂಡೇ ಸಾಗುತ್ತಿದೆ. ಜೊತೆಗೆ ಪುತ್ರರೂ ಸಾಥ್ ನೀಡುತ್ತಿದ್ದಾರೆ.

ಎಸ್.ಎಸ್. ಮಲ್ಲಿಕಾರ್ಜುನ್ ಅವರ ಪತ್ನಿ ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್ ಅವರಂತೂ, ಪತಿ ಹಾಗೂ ಮಾವನವರ ಗೆಲುವಿಗಾಗಿ ಸಾಕಷ್ಟು ಶ್ರಮಿಸುತ್ತಿದ್ದಾರೆ. ಮುಖ್ಯವಾಗಿ ಮಹಿಳಾ ಮತದಾರರ ಮನವೊಲಿಸುವಲ್ಲಿ ನಿರತರಾಗಿದ್ದಾರೆ.

ಪ್ರತಿ ವಾರ್ಡ್‌ಗಳಲ್ಲೂ ಪ್ರತಿ ಪಕ್ಷಗಳ 50 ರಿಂದ 100 ಜನರ ಗುಂಪು ದಿನಂಪ್ರತಿ ಅಭ್ಯರ್ಥಿಗಳಿಗೆ ಜೈ ಕಾರ ಹಾಕುತ್ತಾ ಪ್ರತಿ ಮನೆಗೂ ಮತಪತ್ರ ಹಂಚುವ ಕಾರ್ಯ ನಡೆಯುತ್ತಲೇ ಇದೆ. ಮುಚ್ಚಿರುವ ಬಾಗಿಲು ಬಡಿದು, ಒಳಗಿದ್ದವರನ್ನು ಹೊರ ಕರೆದು ಮತ ಪತ್ರ ನೀಡಿ ಮನವಿ ಮಾಡುತ್ತಿದ್ದಾರೆ. ಒಟ್ಟಿನಲ್ಲಿ ಅಭ್ಯರ್ಥಿಗಳ ಬೆವರಿಳಿಯುತ್ತಿದೆ. ಮತದಾರ ಮೂಕ ಪ್ರೇಕ್ಷಕನಂತೆ ಎಲ್ಲವನ್ನೂ ವೀಕ್ಷಿಸುತ್ತಿದ್ದಾನೆ.

## ಮತದಾರನ ಓಲೈಕೆಗೆ ಅಭ್ಯರ್ಥಿಗಳ ಸರ್ಕಸ್

**ತಂತ್ರಜ್ಞಾನ ಹಾಗೂ ಸಾಮಾಜಿಕ ಜಾಲ ತಾಣಗಳನ್ನು ತಮ್ಮ ಪ್ರಚಾರ ಕಾರ್ಯಕ್ಕಾಗಿ ರಾಜಕೀಯ ಪಕ್ಷಗಳು ಸಮರ್ಥವಾಗಿ ಬಳಸಿಕೊಳ್ಳುತ್ತಿವೆ. ಅಭ್ಯರ್ಥಿಗಳ ವಿಡಿಯೋಗಳನ್ನು ನೂತನ ಜನಪ್ರಿಯ ಹಾಡುಗಳಿಗೆ ಜೋಡಿಸಿ ಹರಿಬಿಡಲಾಗುತ್ತಿದೆ. ಪಕ್ಷದ ಕಾರ್ಯಕರ್ತರ ಸ್ಟೇಟಸ್‌ಗಳಲ್ಲಿ ಇವು ಕಾಣಿಸಿಕೊಳ್ಳುತ್ತಿವೆ.**

**ಸಾಮಾನ್ಯ ಜನರೊಂದಿಗೆ ಬೆರೆತು ಖುಷಿ ಪಡಿಸಿ ಮತ ಕೇಳುವ ತಂತ್ರವನ್ನೂ ಅಭ್ಯರ್ಥಿಗಳು ಬಳಸಿಕೊಳ್ಳುತ್ತಿದ್ದಾರೆ.**

**92ರ ಹರೆಯದ ಶಾಮನೂರು ಶಿವಶಂಕರಪ್ಪ ಅವರು ಈ ಬಾರಿ ಮತ ಪ್ರಚಾರಕ್ಕೆ ಫ್ಯಾನ್ ಸೌಲಭ್ಯವೂ ಇರುವ ಎಲೆಕ್ಟ್ರಿಕ್ ವಾಹನ ಬಳಸುತ್ತಿದ್ದಾರೆ.**

**ಎಸ್.ಎಸ್. ಮಲ್ಲಿಕಾರ್ಜುನ್ ಮತ ಪ್ರಚಾರಕ್ಕೆ ತೆರಳಿದಾಗ ಲಂಬಾಣಿ ಮಹಿಳೆಯರೊಂದಿಗೆ ನೃತ್ಯ ಮಾಡಿದ್ದರು. ಪ್ರಚಾರದ ವೇಳೆಯೇ ಕಾರ್ಯಕರ್ತರೊಂದಿಗೆ ಬೆಣ್ಣೆ ದೋಸೆ ಸೇವಿಸಿದರು. ಪತ್ನಿ ಪ್ರಭಾ ಮಲ್ಲಿಕಾರ್ಜುನ್ ಅವರು ಗುಂಡಿ ಮಹದೇವಪ್ಪ ವೃತ್ತದಲ್ಲಿ ರಸ್ತೆ ಬದಿಯಲ್ಲಿ ಪಡ್ಡು ಮಾಡುವ ಮೂಲಕ ಗಮನ ಸೆಳೆದರು. ಒಟ್ಟಾರೆ ಈ ಬಾರಿಯ ಚುನಾವಣೆಯಲ್ಲಿ ಅಭ್ಯರ್ಥಿಗಳ ಜೊತೆ ಪತ್ನಿ, ಮಕ್ಕಳು ಸೇರಿದಂತೆ ಕುಟುಂಬವೇ ಪ್ರಚಾರ ಕಾರ್ಯದಲ್ಲಿ ತೊಡಗಿಸಿಕೊಂಡಿದೆ. ಗೆಲುವಿಗೆ ಟೊಂಕಕಟ್ಟಿ ನಿಂತಿದೆ.**

# ಹೊರಗುತ್ತಿಗೆ ಮೂಲಕ ಕಾರ್ಮಿಕರ ಶೋಷಣೆ

## ಎಸ್‌ಯುಸಿಐ ರಾಜ್ಯ ಕಾರ್ಯದರ್ಶಿ ಕೆ.ಉಮಾ ಆರೋಪ




ದಾವಣಗೆರೆ, ಮೇ 4- ವರ್ಷಕ್ಕೆ ಎರಡು ಕೋಟಿ ಉದ್ಯೋಗ ಮಾಡುತ್ತೇವೆ ಎಂದಿತ್ತು ಬಿಜೆಪಿ. ಆದರೆ 14 ಕೋಟಿ ವಲಸೆ ಕಾರ್ಮಿಕರಿಗೆ ಯಾವುದೇ ಉದ್ಯೋಗ ಭದ್ರತೆ ಇಲ್ಲ. ಎಲ್ಲಾ ಸರ್ಕಾರಿ ಇಲಾಖೆಗಳಲ್ಲಿ ಹೊರಗುತ್ತಿಗೆ ಮೂಲಕ ನೇಮಕ ಮಾಡಿಕೊಂಡು ಕಾರ್ಮಿಕರನ್ನು ಹೀನಾಯವಾಗಿ ಶೋಷಣೆ ಮಾಡಲಾಗುತ್ತಿದೆ ಎಂದು ಎಸ್‌ಯುಸಿಐ ರಾಜ್ಯ ಕಾರ್ಯದರ್ಶಿ ಕೆ.ಉಮಾ ಆರೋಪಿಸಿದರು.

ಇಂದು ಎಸ್‌ಯುಸಿಐ (ಕಮ್ಯುನಿಸ್ಟ್) ಪಕ್ಷದ ಚುನಾವಣಾ ಭಾಗವಾಗಿ ಅರಳಿ ಮರ ಸರ್ಕಲ್‌ನಲ್ಲಿ ಏರ್ಪಡಿಸಿದ್ದ ಬಹಿರಂಗ ಸಭೆಯಲ್ಲಿ ಅವರು ಮಾತನಾಡಿದರು.

ಪ್ರಧಾನಿ ನರೇಂದ್ರ ಮೋದಿ ಅವರು ನಾನು ತಿನ್ನುವುದಿಲ್ಲ, ತಿನ್ನುವುದಕ್ಕೂ ಬಿಡುವುದಿಲ್ಲ ಎಂದು ಹೇಳಿದ್ದರು. ಆದರೆ, ಇತ್ತೀಚಿನ ದಿನಗಳಲ್ಲಿ ಕೆಪಿಎಸ್‌ಸಿ, ಪಿಎಸ್‌ಐ, ಕೆಇಬಿ ಹುದ್ದೆಗಳ ನೇಮಕಾತಿಯಲ್ಲಿ ಲಕ್ಷಾಂತರ ರೂ. ಭ್ರಷ್ಟಾಚಾರ ನಡೆದರೂ ಸಹ ಯಾರಿಗೂ ಶಿಕ್ಷೆ ಆಗಿಲ್ಲ ಎಂದು ದೂರಿದರು.

ಮಹಿಳೆಯರ ಭದ್ರತೆ ಬಗ್ಗೆ ಮಾತನಾಡುವ ಸರ್ಕಾರಗಳು, ಬಲ್ಕೀಸ್ ಬಾನು ಅವರನ್ನು ಅತ್ಯಾಚಾರ ಮಾಡಿ ಜೈಲು ಸೇರಿದ್ದ 11 ಜನ ಅಪರಾಧಿಗಳು ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ಸನ್ನಡತೆಯ ಮೇಲೆ ಬಿಡುಗಡೆ ಮಾಡಿದರು. ಈಗ ದೆಹಲಿಯಲ್ಲಿ ರಾಷ್ಟ್ರದ ಕೀರ್ತಿಯನ್ನು ಪ್ರಪಂಚದಾದ್ಯಂತ ಹರಡಿದ್ದ ಕುಸ್ತಿಪಟುಗಳು ರಕ್ಷಣೆಗಾಗಿ ಜಂತರ್ ಮಂತರ್ ನಲ್ಲಿ ಹೋರಾಟ ಮಾಡುತ್ತಿದ್ದಾರೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಮಂಜುನಾಥ್ ಕೈದಾಳೆ ಮಾತನಾಡಿ, ಭಗತ್ ಸಿಂಗ್, ಸುಭಾಷ್ ಚಂದ್ರ ಬೋಸ್, ಅಷ್ಫಖುಲ್ಲಾ ಖಾನ್, ಚಂದ್ರಶೇಖರ ಆಜಾದ್ ಮುಂತಾದ ಕ್ರಾಂತಿಕಾರಿಗಳ ನಾಯಕತ್ವದಲ್ಲಿ ರೈತರು, ಕಾರ್ಮಿಕರು, ಮಹಿಳೆಯರು ತಮ್ಮ ಜೀವತ್ಯಾಗ ಮಾಡಿ ಪಡೆದ ಭಾರತ ಸ್ವಾತಂತ್ರ್ಯದ 75 ವರ್ಷಗಳ ಅಮೃತ ಮಹೋತ್ಸವ ಆಚರಣೆ ನಡೆಸಿದರೂ ಸಹ ಜನರಿಗೆ ಇನ್ನೂ ಸರಿಯಾದ ಮೂಲಭೂತ ಸೌಲಭ್ಯಗಳಾದ ಶಿಕ್ಷಣ, ಆರೋಗ್ಯ, ಉದ್ಯೋಗ ಸಿಗುತ್ತಿಲ್ಲ ಎಂದು ವಿಷಾದಿಸಿದರು.

ಪಕ್ಷದ ಅಭ್ಯರ್ಥಿ ಭಾರತಿ ಕೆ. ಮಾತನಾಡಿ, ಹಳೇ ದಾವಣಗೆರೆ ಹಲವಾರು ಜೀವನಾವಶ್ಯಕ ಸೌಲಭ್ಯಗಳಿಂದ ವಂಚಿತವಾಗಿದೆ. ಇಲ್ಲಿ ಶಾಲಾ-ಕಾಲೇಜು, ಸುಸಜ್ಜಿತ ಆಸ್ಪತ್ರೆ, ಮನೆಗಳಿಗೆ ಹಕ್ಕುಪತ್ರಗಳು ಇತ್ಯಾದಿಗಳನ್ನು ಈಡೇರಿಸಲು ಈ ಹಿಂದೆ ಹಲವಾರು ಬಾರಿ ಹೋರಾಟಗಳನ್ನು ಮಾಡಿದ್ದೇವೆ. ಅಂತಹ ಹೋರಾಟಗಳ ಮೂಲಕ ಬೇಡಿಕೆಗಳನ್ನು ಈಡೇರಿಸಲು ಶ್ರಮ ಪಡುವುದಾಗಿ ಭರವಸೆ ನೀಡಿದರು.

ಪಕ್ಷದ ರಾಜ್ಯ ಸಮಿತಿ ಸದಸ್ಯರಾದ ಬಿ.ಆರ್. ಅಪರ್ಣಾ, ಮಂಜುನಾಥ್ ಕುಕ್ಕುವಾಡ, ತಿಪ್ಪೇಸ್ವಾಮಿ ಅಣಬೇರು, ಮಧು ತೊಗಲೇರಿ, ಪರಶುರಾಮ್, ಪೂಜಾ, ಕಾವ್ಯ, ನಾಗಜ್ಯೋತಿ, ಸ್ಮಿತಾ, ಮಂಜುನಾಥ್ ರೆಡ್ಡಿ, ಗುರು, ಮಮತಾ ಮುಂತಾದವರು ಪಾಲ್ಗೊಂಡಿದ್ದರು.

## ಗುಂಡಿಗೆ ಆದೇಶ

(1ನೇ ಪುಟದಿಂದ) ನಿಯಂತ್ರಿಸಲು ಸೈನ್ಯ ಹಾಗೂ ಅಸ್ಸಾಂ ರೈಫಲ್‌ನ 55 ತುಕಡಿಗಳನ್ನು ನಿಯೋಜಿಸಲಾಗಿದೆ. ಬುಡಕಟ್ಟು ಜನರು ಹಾಗೂ ಮೀಟಿ ಸಮುದಾಯಗಳ ಸಂಘರ್ಷದಿಂದ 9 ಸಾವಿರ ಜನರು ಸ್ಥಳಾಂತರಗೊಂಡಿದ್ದಾರೆ.ಬಹುಸಂಖ್ಯಾತವಾಗಿರುವ ಮೀಟಿ ಸಮುದಾಯಕ್ಕೆ ಬುಡಕಟ್ಟು ಸ್ಥಾನ ನೀಡುವುದನ್ನು ವಿರೋಧಿಸಿ ನಾಗಾ ಹಾಗೂ ಕುಕಿ ಬುಡಕಟ್ಟು ಜನರು ಪ್ರತಿಭಟನೆ ನಡೆಸಿದ್ದರು. ನಂತರ ಸಂಘರ್ಷ ತೀವ್ರವಾಗಿತ್ತು.

# ಬಿಜೆಪಿ ಅಭ್ಯರ್ಥಿಗಳಿಗೆ ಮಡಿವಾಳ ಸಮಾಜ ಬೆಂಬಲ



ದಾವಣಗೆರೆ, ಮೇ 4- ದಕ್ಷಿಣ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಿ.ಜಿ ಅಜಯ್ ಕುಮಾರ್ ಹಾಗೂ ಉತ್ತರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಲೋಕಿಕೆರೆ ನಾಗರಾಜ್ ಅವರುಗಳಿಗೆ ಜಿಲ್ಲಾ ಮಡಿಕಟ್ಟೆ (ದೋಬಿ ಘಾಟ್) ಮಡಿವಾಳ ಸಮಾಜ ಬೆಂಬಲ ವ್ಯಕ್ತಪಡಿಸಿದೆ. ಈ ಸಂದರ್ಭದಲ್ಲಿ ದಾವಣಗೆರೆ ಮಡಿಕಟ್ಟೆ (ದೋಬಿ ಘಾಟ್) ಜಿಲ್ಲಾಧ್ಯಕ್ಷ ಕಿಶೋರ್ ಕುಮಾರ್, ಪ್ರಧಾನ ಕಾರ್ಯದರ್ಶಿ ಹೆಬ್ಬಾಳ ಬಸವರಾಜ್, ಖಜಾಂಚಿ ಗುತ್ಯಪ್ಪ, ಪ್ರವೀಣ್, ಕಾರ್ಯದರ್ಶಿಗಳಾದ ರವಿ, ನಿಂಗರಾಜ್, ದೋಬಿ ಘಾಟ್ ಉಸ್ತುವಾರಿಗಳಾದ ಪಡಿಯಪ್ಪ, ಗೌರವ ಅಧ್ಯಕ್ಷ ಫಕೀರಸ್ವಾಮಿ, ನಿರ್ದೇಶಕರುಗಳಾದ ಶಂಕರ್, ರಮೇಶ್, ಜಗದೀಶ್, ಮಂಜಣ್ಣ, ಅಜಯಣ್ಣ, ಕೃಷ್ಣ, ಡೈಮಂಡ್ ಮಾಂತೇಶ್, ನಾಗಣ್ಣ, ಸೋಮಶೇಖರ್, ಪವನ್, ರವಿಕುಮಾರ್, ರವಿ ಹಾಗೂ ಸಮಾಜದ ಮತ್ತಿತರರು ಉಪಸ್ಥಿತರಿದ್ದರು

# ಸಮಾವೇಶಗಳಲ್ಲಿ ಹನುಮಂತ ದೇವರ ಹೆಸರು ಹೇಳದಂತೆ ಮೋದಿಗೆ ನಿರ್ಬಂಧಿಸಿ

## ಚುನಾವಣಾ ಆಯೋಗಕ್ಕೆ ಕಾಂಗ್ರೆಸ್ ಮನವಿ

ಬೆಂಗಳೂರು, ಮೇ 4 – ಚುನಾವಣಾ ಸಮಾವೇಶಗಳಲ್ಲಿ ಹನುಮಂತ ದೇವರ ಹೆಸರು ಹೇಳದಂತೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ನಿರ್ಬಂಧಿಸಬೇಕು ಎಂದು ಚುನಾವಣಾ ಆಯೋಗಕ್ಕೆ ಕಾಂಗ್ರೆಸ್ ಮನವಿ ಸಲ್ಲಿಸಿದೆ.

ಭಜರಂಗದಳ ನಿಷೇಧಿಸುವುದಾಗಿ ಕಾಂಗ್ರೆಸ್ ಪಕ್ಷ ತನ್ನ ಪ್ರಣಾಳಿಕೆಯಲ್ಲಿ ತಿಳಿಸಿದೆ. ನಂತರ ನಡೆದ ಸಮಾವೇಶಗಳಲ್ಲಿ ಪ್ರಧಾನಿ ಮೋದಿ ಜೈ ಭಜರಂಗ ಬಲಿ ಘೋಷಣೆ ಮೊಳಗಿಸುತ್ತಿದ್ದಾರೆ.

ಚುನಾವಣಾ ಸಮಾವೇಶಗಳಲ್ಲಿ ಹಿಂದೂ ದೇವರುಗಳ ಹೆಸರು ಹೇಳದಂತೆ ನಿರ್ಬಂಧಿಸಬೇಕು ಎಂದು ಚುನಾವಣಾ ಆಯೋಗದ ಬಳಿ ಕಾಂಗ್ರೆಸ್ ಮನವಿ ದಾಖಲಿಸಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಚುನಾವಣಾ ಸಮಾವೇಶದಲ್ಲಿ ಮಾತನಾಡುವಾಗ ಭಜರಂಗ ದಳ ನಿಷೇಧಿಸುವುದಾಗಿ ಹೇಳಿರುವುದನ್ನು ಪ್ರಸ್ತಾಪಿಸಿ, ಇದು ದೇವರಿಗೆ ಬೀಗ ಹಾಕಿದಂತೆ ಎಂದು ಹೇಳಿದ್ದರು.

ಈ ವಿಷಯವನ್ನು ಚುನಾವಣಾ ಆಯೋಗದ ಬಳಿ ಪ್ರಸ್ತಾಪಿಸಿರುವ ಕಾಂಗ್ರೆಸ್, ಕೆಲ ವರ್ಷಗಳ ಹಿಂದೆ ಗೋವಾದ ಮುಖ್ಯಮಂತ್ರಿಯಾಗಿದ್ದ ದಿವಂಗತ ಮನೋಹರ್ ಪಾರಿಕ್ಕರ್ ಅವರು ಶ್ರೀ ರಾಮ ಸೇನೆ ನಿಷೇಧಿಸಲು ಮುಂದಾಗಿದ್ದರು. ಇದು ರಾಮ ದೇವರ ಅವಮಾನವೇ ಅಥವಾ ಶಿವಸೇನೆಯಿಂದ ಬಿಜೆಪಿ ದೂರವಾಗಿದ್ದು ಶಿವ ದೇವರಿಗೆ ಮಾಡಿದ ಅವಮಾನವೇ ಎಂದು ಪ್ರಶ್ನಿಸಿದೆ.

ಭಜರಂಗ ದಳ ನಿಷೇಧವನ್ನು ಹಿಂದೂ ವಿರೋಧಿ ಎಂದು ಪ್ರಧಾನಿ ಬಿಂಬಿಸುತ್ತಿದ್ದಾರೆ. ಜೈ ಭಜರಂಗಬಲಿ ಎಂಬ ಘೋಷಣೆ ಮಾಡುತ್ತಿದ್ದಾರೆ. ಇದೆಲ್ಲವೂ ಬಿಜೆಪಿ ಪರವಾಗಿ ಮತ ಕೇಳುವ ಉದ್ದೇಶದ್ದಾಗಿದೆ ಎಂದು ಕಾಂಗ್ರೆಸ್ ದೂರಿನಲ್ಲಿ ಹೇಳಿದೆ.

ಕೇವಲ ಧರ್ಮದ ಹೆಸರಿನಲ್ಲಿ ಮತ ಕೇಳುವುದಕ್ಕಾಗಿ ಪ್ರಧಾನ ಮಂತ್ರಿ ಚುನಾವಣಾ ಸಮಾವೇಶಗಳಲ್ಲಿ ಹಿಂದೂ ದೇವರ ಹೆಸರು ಹೇಳದಂತೆ ನಿರ್ಬಂಧಿಸಬೇಕು ಎಂದು ಚುನಾವಣಾ ಆಯೋಗಕ್ಕೆ ಕಾಂಗ್ರೆಸ್ ಒತ್ತಾಯಿಸಿದೆ.

## ನಗರದಲ್ಲಿಂದು ಕಸಾಪ ಸಂಸ್ಥಾಪನಾ ದಿನಾಚರಣೆ

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಇಂದು ಮಧ್ಯಾಹ್ನ 3 ಗಂಟೆಗೆ ಸರಸ್ವತಿ ನಗರ, ಕೆ.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯದ ಆವರಣದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ 109ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ನಿರ್ದೇಶಕರಾದ ಶ್ರೀಮತಿ ಎ.ಎಲ್. ನಾಗವೇಣಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ಕೆ.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ಬಿ.ಎಸ್. ಚನ್ನಬಸಪ್ಪ ಅಧ್ಯಕ್ಷತೆ ವಹಿಸಲಿದ್ದು, ವಿಶ್ರಾಂತ ಪ್ರಾಧ್ಯಾಪಕ ಡಾ. ಎಸ್. ಶಿವಯ್ಯ ಕನ್ನಡ ಅಸ್ಮಿತೆ-ಕನ್ನಡ ಸಾಹಿತ್ಯ ಪರಿಷತ್ತು ವಿಷಯ ಕುರಿತು ಉಪನ್ಯಾಸ ನೀಡಲಿದ್ದಾರೆ.

ಆಕಾಶವಾಣಿ ಮತ್ತು ದೂರದರ್ಶನ ಕಲಾವಿದ ಅಜಯ್‌ಕುಮಾರ್, ಹಿರಿಯ ನಾಗರಿಕರ ಸಹಾಯವಾಣಿಯ ನವೀನ್ ಕುಮಾರ್ ಉಪಸ್ಥಿತರಿರುವರು. ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಸುಮತಿ ಜಯಪ್ಪ ಪ್ರಾಸ್ತಾವಿಕ ನುಡಿಗಳನ್ನಾಡಲಿದ್ದಾರೆ.

# ಭಜರಂಗೀ ರಾಜಕೀಯ

(1ನೇ ಪುಟದಿಂದ) ಸ್ಥಾಪಿಸುವುದಾಗಿ ಅವರು ಚಾಮುಂಡೇಶ್ವರಿ ಮೇಲೆ ಆಣೆ ಮಾಡಿ ಹೇಳಿದರು. ಆದರೆ, ಭಜರಂಗ ದಳ ನಿಷೇಧದ ಕಾಂಗ್ರೆಸ್ ಪ್ರಣಾಳಿಕೆಯನ್ನು ತರಾಟೆಗೆ ತೆಗೆದುಕೊಂಡಿರುವ ಈಶ್ವರಪ್ಪ, ಇದು ಮುಸ್ಲಿಂ ಲೀಗ್‌ನ ಪ್ರಣಾಳಿಕೆಯಂತಿದೆ ಎಂದಿದ್ದಾರೆ.

ಪ್ರಣಾಳಿಕೆ ಸುಟ್ಟಿರುವುದನ್ನು ಖಂಡಿಸಿರುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಈ ಕೃತ್ಯ ರಾಜ್ಯದ ಜನತೆಗೆ ನೀಡಲಾಗಿರುವ ಗ್ಯಾರಂಟಿಗಳನ್ನು ಸುಟ್ಟಂತೆ. ಇದು ಜನರಿಗೆ ಹಾಗೂ ಪ್ರಜಾಪ್ರಭುತ್ವಕ್ಕೆ ಮಾಡಿದ ಅವಮಾನ ಎಂದರು.

ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಭಜರಂಗ ದಳ ನಿಷೇಧದ ಪ್ರಸ್ತಾಪ ಇರುವುದು ರಾಜ್ಯಾಧ್ಯಕ್ಷ ಶಿವಕುಮಾರ್ ಅವರಿಗೆ ತಿಳಿದಿರಲಿಲ್ಲ ಎಂದು ಕಾಂಗ್ರೆಸ್‌ನ ಉನ್ನತ ಮೂಲಗಳು ತಿಳಿಸಿವೆ.

ಪ್ರಣಾಳಿಕೆ ಪ್ರಕಟಣೆಗೆ ಮುಂಚೆ ಅದನ್ನು ಓದಿದವರು ಭಜರಂಗದಳ ಉಲ್ಲೇಖಿಸದಂತೆ ತಿಳಿಸಿದ್ದರು. ಆದರೆ, ಅವರು ಈ ಮಾತು ಕೇಳಲಿಲ್ಲ. ಈಗ ನಾವೆಲ್ಲರೂ ಬೆಲೆ ತೆರಬೇಕಾಗಿದೆ ಎಂದು ಕಾಂಗ್ರೆಸ್ ಪದಾಧಿಕಾರಿಯೊಬ್ಬರು ಹೇಳಿದ್ದಾರೆ. ಈ ನಡುವೆ ಹೇಳಿಕೆ ನೀಡಿದ ಕಾಂಗ್ರೆಸ್ ನಾಯಕ ವೀರಪ್ಪ ಮೊಯ್ಲಿ, ಭಜರಂಗದಳ ನಿಷೇಧಿಸುವ ಪ್ರಸ್ತಾಪ ಇಲ್ಲ ಎಂದಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿದ ವಿಶ್ವ ಹಿಂದೂ ಪರಿಷತ್, ಭಜರಂಗದಳದ ತೇಜೋವಧೆ ಮಾಡಿದ ನಂತರ ಕಾಂಗ್ರೆಸ್‌ಗೆ ತಪ್ಪು ಮಾಡಿರುವುದು ತಿಳಿದಿದೆ ಎನ್ನಿಸುತ್ತಿದೆ. ಆದರೆ, ರಾಜ್ಯದ ಜನ ಕಾಂಗ್ರೆಸ್ಸನ್ನು ಕ್ಷಮಿಸುವುದಿಲ್ಲ ಎಂದು ಹೇಳಿದೆ.

## ನಿರಾಶ್ರಿತರಿಗೆ ವನಿತಾ ಸಮಾಜದಿಂದ ಅರ್ಜಿ ಆಹ್ವಾನ

ದಾವಣಗೆರೆ, ಮೇ 4- ವನಿತಾ ಸಮಾಜದ ಅಂಗ ಸಂಸ್ಥೆಯಾದ 'ಆಶ್ರಯ' ಹಿರಿಯ ವನಿತೆಯರ ಆನಂದಧಾಮವು ನಿರಾಶ್ರಿತ ಮಹಿಳೆಯರು, ವಿಧವೆಯರು, ಅವಿವಾಹಿತರು, ಮಕ್ಕಳಿಲ್ಲದವರು, ಮಕ್ಕಳು ಇದ್ದು ಅವರನ್ನು ನೋಡಿಕೊಳ್ಳ ದವರು ಹಾಗೂ ಅನಾಥರು, ಅಬಲೆಯರಿಗೆ ಆಸರೆ ನೀಡುತ್ತಾ ಬಂದಿದೆ. ಈ ಆನಂದಧಾಮದಲ್ಲಿ ಕೆಲವೇ ಸ್ಥಾನಗಳು ತೆರವಾಗಿವೆ. ಆಸಕ್ತಿ ಇರುವ ಮಹಿಳೆಯರು ಅರ್ಜಿ ಸಲ್ಲಿಸಬಹುದಾಗಿದೆ. ವಿವರಕ್ಕೆ 94806 87273, 98448 50414, 98451 66724ಈ ಸಂಖ್ಯೆಗಳನ್ನು ಸಂಪರ್ಕಿಸಬಹುದಾಗಿದೆ.

## ಬೆಲೆ ಇಳಿಕೆಗೆ ಸೂಚನೆ

(1ನೇ ಪುಟದಿಂದ) ಬರಲಿದೆ ಎಂದು ಬ್ರಾಂಡ್ ಮಾಲೀಕತ್ವ ಹೊಂದಿರುವ ಮದರ್ ಡೈರಿ ತಿಳಿಸಿದೆ.


ಖಾದ್ಯಸ ತೈಲದ ಬೆಲೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಳೆದ ಎರಡು ತಿಂಗಳಲ್ಲಿ ಪ್ರತಿ ಟನ್‌ಗೆ 200 ರಿಂದ 250 ಡಾಲರ್ ಇಳಿಕೆಯಾಗಿದೆ. ಆದರೆ, ಇದರ ಪರಿಣಾಮ ಇನ್ನೂ ಚಿಲ್ಲರೆ ಮಾರಾಟದಲ್ಲಿ ಕಂಡು ಬರುತ್ತಿಲ್ಲ ಎಂದು ಕೇಂದ್ರ ಆಹಾರ ಸಚಿವಾಲಯ ತಿಳಿಸಿದೆ.

## ಎಂಟು ಶಿಕ್ಷಕರ ಹತ್ಯೆ

(1ನೇ ಪುಟದಿಂದ) 10ನೇ ತರಗತಿಯ ಪರೀಕ್ಷೆಗಳನ್ನು ಮುಂದೂಡಲಾಗಿದೆ.

ಉತ್ತರ ವಾಜಿರಿಸ್ತಾನ ಬುಡಕಟ್ಟು ಜಿಲ್ಲೆಯಲ್ಲಿ ನಡೆದ ಪ್ರತ್ಯೇಕ ಗುಂಡಿನ ಚಕಮಕಿಯಲ್ಲಿ ಆರು ಸೈನಿಕರು ಹಾಗೂ ಮೂವರು ಉಗ್ರರು ಹತರಾಗಿದ್ದಾರೆ.

# ಎಸ್.ಎಸ್. ಆಸ್ಪತ್ರೆಯಲ್ಲಿ ಕೊಬ್ಲೇಶನ್ ಇನ್ ಇಎನ್‌ಟಿ ಶಸ್ತ್ರಚಿಕಿತ್ಸಾ ಕಾರ್ಯಾಗಾರ



ದಾವಣಗೆರೆ, ಮೇ 4- ಎಸ್.ಎಸ್ ಆಸ್ಪತ್ರೆಯ ಕಿವಿ, ಮೂಗು, ಗಂಟಲು ವಿಭಾಗ, ಜೆ.ಜೆ.ಎಂ. ಆಸ್ಪತ್ರೆಯ ಕಿವಿ, ಮೂಗು, ಗಂಟಲು ವಿಭಾಗ ಹಾಗೂ ಅಖಿಲ ಭಾರತ ಕಿವಿ, ಮೂಗು, ಗಂಟಲು ಸಂಘದ ದಾವಣಗೆರೆ ವಿಭಾಗದ ಸಂಯುಕ್ತಾಶ್ರಯದಲ್ಲಿ ಎಸ್.ಎಸ್ ಆಸ್ಪತ್ರೆಯಲ್ಲಿ ಕೊಬ್ಲೇಶನ್ ಇನ್ ಇಎನ್‌ಟಿ ಎಂಬ ಶಸ್ತ್ರಚಿಕಿತ್ಸಾ ಕಾರ್ಯಾಗಾರವನ್ನು ಮೊನ್ನೆ ನಡೆಸಲಾಯಿತು.

ಬೆಂಗಳೂರಿನ ನುರಿತ ಕಿವಿ, ಮೂಗು, ಗಂಟಲು ಶಸ್ತ್ರಚಿಕಿತ್ಸಕ ಡಾ.ಗೌರವ ಮಡಿಕೇರಿ ಅವರು ಕಾರ್ಯಾಗಾರವನ್ನು ನಡೆಸಿಕೊಟ್ಟು, ಪ್ರಾಯೋಗಿಕವಾಗಿ ಇ.ಎನ್.ಟಿ ಕಾಯಿಲೆಗಳಾದ ಅಡೆನೋಟೊನ್ಸಿಲೈಟಸ್, ನೇಸಲ್ ಪಾಲಿಪ್, ಇನ್ವರ್ಟೆಡ್ ಪಾಪಿಲ್ಲೋಮಾದಿಂದ ಬಳಲುತ್ತಿದ್ದ ರೋಗಿಗಳಿಗೆ ಕೊಬ್ಲೇಷನ್ ತಂತ್ರಜ್ಞಾನದ ನೆರವಿನಿಂದ ಶಸ್ತ್ರಚಿಕಿತ್ಸೆ ನಡೆಸಲಾಯಿತು. ಕೊಬ್ಲೇಷನ್ ಒಂದು ಆಧುನಿಕ ಶಸ್ತ್ರಚಿಕಿತ್ಸಾ ತಂತ್ರಜ್ಞಾನವಾಗಿದ್ದು ಅಂಗಾಂಶಗಳನ್ನು ನಿಯಂತ್ರಿತವಾಗಿ ಕ್ಷಯಿಸುವ ಗುಣ ಹೊಂದಿದೆ. ಈ ತಂತ್ರಜ್ಞಾನದಲ್ಲಿ ಕಡಿಮೆ ಉಷ್ಣಾಂಶದ ರೇಡಿಯೋ ಫ್ರಿಕ್ವೆನ್ಸಿ ತರಂಗಳನ್ನು ಲವಣಯುಕ್ತ ದ್ರಾವಣಗಳನ್ನು ಬಳಸಿ. ಅನಗತ್ಯ ಅಂಗಾಂಶಗಳನ್ನು ಕ್ಷಯಿಸಲಾಗುತ್ತದೆ. ಇದರಿಂದಾಗಿ ಪಕ್ಕದ ಅಂಗಾಶಗಳಿಗೆ ಆಗುವ ಹಾನಿಯು ಕಡಿಮೆಯಾಗುತ್ತದೆ. ಕಡಿಮೆ ಶಸ್ತ್ರಚಿಕಿತ್ಸೆಯ ಅವಧಿ, ಕಡಿಮೆ ರಕ್ತಸ್ರಾವ ಹೆಚ್ಚಿನ ನಿಖರತೆ, ಕ್ಲಿಷ್ಟಕರ ಜಾಗಗಳಲ್ಲಿಯೂ ಸುಲಭವಾಗಿ ತೆಗೆಯಬಹುದಾದ ತಂತ್ರಜ್ಞಾನ, ತಗ್ಗಿದ ಶಸ್ತ್ರಚಿಕಿತ್ಸಾ ನಂತರದ ನೋವು ಹಾಗೂ ಕಡಿಮೆ ಚೇತರಿಕಾ ಅವಧಿ ಈ ತಂತ್ರಜ್ಞಾನದ ಬಳಕೆಗೆ ಕಾರಣಗಳಾಗಿದೆ. ಪಾರಂಪರಿಕ ವಿಧಾನಗಳ ಬಳಕೆಗೆ ಹೋಲಿಸಿದ್ದಲ್ಲಿ ಕೊಬ್ಲೇಷನ್ ತಂತ್ರಜ್ಞಾನವು ಉಪಯುಕ್ತಕಾರಿಯಾಗಿದೆ ಎಂಬ ಮಾಹಿತಿ ತಿಳಿಸಿದರು.

ಎಸ್.ಎಸ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಅರುಣ್ ಕುಮಾರ ಅಜ್ಜಪ್ಪನವರು ಕಾರ್ಯಾಗಾರವನ್ನು ಉದ್ಘಾಟಿಸಿದರು.

ಎಸ್.ಎಸ್ ಆಸ್ಪತ್ರೆಯ ಇ.ಎನ್.ಟಿ ವಿಭಾಗ ಮುಖ್ಯಸ್ಥ ಡಾ.ಯೋಗಿಶ್ ಬಿ.ಎಸ್, ಜೆ.ಜೆ.ಎಂ. ಆಸ್ಪತ್ರೆಯ ಇ.ಎನ್.ಟಿ ವಿಭಾಗದ ಮುಖ್ಯಸ್ಥ ಡಾ. ಕೆ.ಪಿ ಬಸವರಾಜು, ಕಿವಿ, ಮೂಗು, ಗಂಟಲು ತಜ್ಞರ ಸಂಘದ ಅಧ್ಯಕ್ಷ ಡಾ.ರೇಣುಕಾನಂದ, ಹಿರಿಯ ಕಿವಿ, ಮೂಗು, ಗಂಟಲು ತಜ್ಞ ಡಾ.ಎ.ಎಮ್ ಶಿವಕುಮಾರ ಹಾಗೂ ಸ್ಮಿತ್ ಮತ್ತು ನೆಫೀವ್ ಸಂಸ್ಥೆಯ ರಾಯಭಾರಿ ಪ್ರಭಾತ್, ಡಾ. ಮುನೀಶ್ ಕೆ.ಎಸ್, ಡಾ.ವೆಂಕಟೇಶ್ ಬಿ.ಕೆ, ಡಾ. ಅಜಿತ್ ಕೆ.ಎಮ್, ಡಾ.ನಾಗರಾಜ ಮರಡಿ, ಡಾ.ಕೀರ್ತಿ, ಡಾ.ಲತಾ ಉಪಸ್ಥಿತರಿದ್ದರು.

**ದಿ ದಾವಣಗೆರೆ ಹರಿಹರ – ಅರ್ಬನ್ ಸಹಕಾರ ಬ್ಯಾಂಕ್ ನಿ.,**

ಆಡಳಿತ ಕಛೇರಿ: 79/2, ರಜತ ಮಹೋತ್ಸವ ಕಟ್ಟಡ, ಪಿ.ಬಿ. ರಸ್ತೆ, ದಾವಣಗೆರೆ - 577 002, ದೂರವಾಣಿ : 272570

**-: ಮಾನ್ಯ ಸದಸ್ಯರುಗಳ ಗಮನಕ್ಕೆ :-**

ಬ್ಯಾಂಕಿನ ಉಪನಿಯಮ 20(1)(ಎ) ರನ್ವಯ ಬ್ಯಾಂಕಿನ ಸದಸ್ಯರು ಕನಿಷ್ಠ ಷೇರು ಮೊತ್ತ ರೂ.1,000/- ಹೊಂದಿರತಕ್ಕದ್ದು. ತಪ್ಪಿದಲ್ಲಿ, ಬ್ಯಾಂಕಿನಿಂದ ನೀಡುವ ಯಾವುದೇ ಸೌಲಭ್ಯಗಳನ್ನು ಪಡೆಯಲು ಅರ್ಹರಿರುವುದಿಲ್ಲ ಮತ್ತು ಬ್ಯಾಂಕಿನ ಆಡಳಿತ ಮಂಡಲಿ ಚುನಾವಣೆಗೆ ಸ್ಪರ್ಧಿಸಲು / ಮತ ಚಲಾವಣೆ ಮಾಡಲು ಬರುವುದಿಲ್ಲ. ಆದ್ದರಿಂದ ಭಾಗಶಃ ಷೇರು ಮೊತ್ತ ಹೊಂದಿರುವ ಮಾನ್ಯ ಸದಸ್ಯರುಗಳು ಈ ಕೂಡಲೇ ಆಡಳಿತ ಕಛೇರಿಗೆ / ಸಮೀಪದ ಬ್ಯಾಂಕಿನ ಯಾವುದಾದರೂ ಶಾಖೆಗೆ ಭೇಟಿ ನೀಡಿ ಷೇರು ಮೊತ್ತವನ್ನು ರೂ.1000/- ಗಳಿಗೆ ಸರಿ ಮಾಡಿಕೊಳ್ಳಲು ಈ ಮೂಲಕ ಕೋರಲಾಗಿದೆ.

ಬಹಳಷ್ಟು ಸದಸ್ಯರುಗಳ ವಿಳಾಸ ಬದಲಾವಣೆಯಾಗಿ, ಪ್ರತಿ ವರ್ಷ ಕಳುಹಿಸುವ ವಾರ್ಷಿಕ ವರದಿಗಳು ವಾಪಸ್ಸು ಬರುತ್ತಿವೆ. ಆದ್ದರಿಂದ ಸದಸ್ಯರುಗಳು ತಮ್ಮ ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು ತಮ್ಮ ಸಮೀಪದಲ್ಲಿ ಇರುವ ನಮ್ಮ ಶಾಖೆಗಳಿಗೆ ಭೇಟಿ ನೀಡಿ ಕೂಡಲೇ ಕೆ.ವೈ.ಸಿ. ಅಪ್‌ಡೇಟ್ ಮಾಡಿಕೊಳ್ಳುವುದು. ಸದಸ್ಯರುಗಳು ಬ್ಯಾಂಕಿನಲ್ಲಿ ಉಳಿತಾಯ ಖಾತೆಯನ್ನು ಹೊಂದುವುದು ಕಡ್ಡಾಯವಿರುತ್ತದೆ. ಖಾತೆ ಹೊಂದಿರದ ಕೆಲವು ಸದಸ್ಯರ ಲಾಭಾಂಶ ಹೊಂದಾಣಿಕೆಯಾಗದೇ ಹಾಗೇಯೇ ಉಳಿದಿರುತ್ತದೆ. ಮೂರು ವರ್ಷ ಗತಿಸಿದ ನಂತರ ಲಾಭಾಂಶವನ್ನು ಮೀಸಲು ನಿಧಿಗೆ ವರ್ಗಾಯಿಸಲಾಗುವುದು. ಆದ್ದರಿಂದ ಮಾನ್ಯ ಸದಸ್ಯರುಗಳು ತಮ್ಮ ಸಮೀಪದ ನಮ್ಮ ಶಾಖೆಯಲ್ಲಿ ಖಾತೆಯನ್ನು ತೆರೆದು ಲಾಭಾಂಶವನ್ನು ವರ್ಗಾಯಿಸಿಕೊಳ್ಳಲು ಈ ಮೂಲಕ ಕೋರಿದೆ.

ಸಹಿ/- ಎನ್. ತುಳಸಿನಾಥ್
ಪ್ರಧಾನ ವ್ಯವಸ್ಥಾಪಕರು

ಸಹಿ/- ಎನ್.ಎ. ಮುರುಗೇಶ್
ಅಧ್ಯಕ್ಷರು

## ಸಿದ್ಧಗಂಗಾ ಬಳಗದಿಂದ ಬಸವ ಜಯಂತಿ ಆಚರಣೆ



ದಾವಣಗೆರೆ, ಮೇ 4- ಸಮಾನತೆ, ಸಹಬಾಳ್ವೆ ಇಂದ ಸಮಾಜದಲ್ಲಿ ನಾವು ಹೇಗೆ ನಡೆಯಬೇಕು ಎಂಬುದನ್ನು ಬಸವಣ್ಣನವರು ತಿಳಿಸಿ ಕೊಟ್ಟಿದ್ದಾರೆ. ಅಂತವರ ಜಯಂತಿಯು ಬರೀ ಪೂಜೆ ಪ್ರಸಾದಕ್ಕೆ ಮೀಸಲಾಗದೆ ವಚನಗಳನ್ನು ಓದಿ ತಿಳಿದುಕೊಂಡು ನಡೆದರೆ ನಮ್ಮ ಜೀವನ ಸಾರ್ಥಕವಾಗುತ್ತದೆ ಎಂದು ಶ್ರೀಶೈಲ ಮಠದ ಸಂಸ್ಕೃತ ಪಾಠ ಶಾಲೆಯ ವಿದ್ಯಾರ್ಥಿ ಹೇಮಯ್ಯ ಮಠಪತಿ ತಿಳಿಸಿದರು.

ಇಲ್ಲಿನ ವಿನೋಬನಗರದ ಸಿದ್ಧಗಂಗಾ ಗೆಳೆಯರ ಬಳಗದಿಂದ ಏರ್ಪಡಿಸಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು.

ಶಿವಯೋಗಿ ಹಿರೇಮಠ ಅವರು ಮಕ್ಕಳಲ್ಲಿ ಸಂಸ್ಕೃತಿ- ಸಂಸ್ಕಾರ ಕಲಿಸುವಲ್ಲಿ ವೇಷ ಭೂಷಣ ಸ್ಪರ್ಧೆಗಳು ಪ್ರೇರಣೆಯಾಗುತ್ತವೆ ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸಂಗನ ಬಸವೇಶ್ವರ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಸುನಿಲ್ ಶೆಟ್ಟರ್ ಮಾತನಾಡಿ, ನಶಿಸುತ್ತಿರುವ ಸಂಸ್ಕೃತಿಯನ್ನು ತಿಳಿಸಿಕೊಡುವಲ್ಲಿ ಮಹಾತ್ಮರ ಜಯಂತಿ, ಸ್ಮರಣೋತ್ಸವಗಳು ಪ್ರಮುಖ ಪಾತ್ರ ವಹಿಸುತ್ತವೆ ಎಂದರು.

ಕಾರ್ಯಕ್ರಮಕ್ಕೂ ಮೊದಲು ಶ್ರೀಶೈಲ ಮಠದ ಸಂಸ್ಕೃತ ಪಾಠ ಶಾಲೆಯ ಮಕ್ಕಳು ವಚನಗಳನ್ನು ಹಾಡುತ್ತಾ ವಚನಾಭಿಷೇಕದೊಂದಿಗೆ ಬಸವಣ್ಣನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು.

ಬಳಗದ ಹೇಮರಾಜ್ ಅವರು ಅಧ್ಯಕ್ಷತೆ ವಹಿಸಿದ್ದರು. ಬಳಗದ ಸರ್ವ ಸದಸ್ಯರು, ಸದ್ಭಕ್ತರು ಇದ್ದರು.

ಕಾರ್ಯಕ್ರಮದಲ್ಲಿ ಏರ್ಪಡಿಸಿದ್ದ ಬಸವಾದಿ ಶರಣ, ಶರಣೆಯರ ವೇಷ ಭೂಷಣ ಸ್ಪರ್ಧೆಯಲ್ಲಿ ಹಾಲೇಶ್, ಯಶಸ್, ಚಿನ್ಮಯ್, ಅಮೂಲ್ಯ, ತೇಜಸ್ವಿನಿ, ಹರ್ಷಿತಾ, ಕೀರ್ತಿ, ಖುಷಿ, ಕುಶಾಲ್, ಜಯಂತ್, ಉತ್ತಮ್, ಲಿಶಾಂತ್ ಭಾಗವಹಿಸಿದ್ದರು.

## ದುಃಖದಿಂದ ಆನಂದದ ಸಾಧನೆಗೆ ಬುದ್ಧೋಪದೇಶ

ಅಜ್ಞಾನದಿಂದ ಜ್ಞಾನದೆಡೆಗೆ ಸಾಗುವುದೇ ಮುಕ್ತಿಯ ಮೊದಲ ಹೆಜ್ಜೆ. ಬುದ್ಧ ಕ್ರಿ.ಪೂ. 566 ರಲ್ಲಿ ಹುಣ್ಣಿಮೆಯಂದು ಜನಿಸಿದರು. ಹುಣ್ಣಿಮೆಯಂದೇ ಜ್ಞಾನೋದಯವನ್ನು ಪಡೆದರು, ಇವರ ಪರಿನಿರ್ವಾಣದ ಕಾಲ ಕ್ರಿ.ಪೂ. 486 ಹುಣ್ಣಿಮೆಯಂದೇ ಆಗಿರುತ್ತದೆ. ಇದು ಕಾಕತಾಳಿಯವೋ, ಪವಾಡವೋ ತಿಳಿಯದು.

**ಬುದ್ಧನ 10 ಪರಿಪೂರ್ಣ ಮಾರ್ಗಗಳು:** ದಾನ, ಧ್ಯಾನ, ಶೀಲ, ತ್ಯಾಗ, ಪ್ರಜ್ಞೆ, ಪ್ರಯತ್ನಶೀಲತೆ, ತಾಳ್ಮೆ, ಸತ್ಯ, ದೃಢಸಂಕಲ್ಪ, ಮೈತ್ರಿ ಮತ್ತು ಉಪೇಕ್ಷೆ.

ಬೋಧಿಸತ್ವ ಎಂದರೆ ಸತ್ಯಾನ್ವೇಷಕ. ಕೇಡಿನಿಂದ ಒಳಿತಿನತ್ತ ಸಾಗುವ, ಸ್ವಯಂ ತನ್ನನ್ನೇ ಅರಿತು ನದಿಯಂತೆ ಪರಿಶುದ್ಧಗೊಳಿಸಿ ಕೊಳ್ಳುತ್ತಾ ಮುನ್ನಡೆಯುವ ದೀರ್ಘ ಪಯಣಿಗ.

**ಸಾಧನೆಗೆ ಸಾಧಕಗಳು :** ಸತ್ಯ, ಧರ್ಮ, ಅಹಿಂಸೆ, ಪ್ರೀತಿ ಮತ್ತು ಕರುಣೆ. ನಿರ್ಭಯ, ನಿಶ್ಚಿತತೆ, ನಿಶ್ಚಿಂತೆ, ವಿನಮ್ರತೆ. ಧೃಡ ಮನಸ್ಸು, ಸಂಕಟ-ಸವಾಲುಗಳಲ್ಲಿ ವಿಚಲಿತವಾಗದ ಮನಸ್ಥಿತಿ.

**ಸಾಧನೆಗೆ ಬಾಧಕಗಳು:** ದುರಭಿಮಾನ, ಎಲ್ಲೆಲ್ಲಿಯೂ ಚದುರಿ ಹೋಗುವ ಮನಸ್ಸು, ಅಜ್ಞಾನಗಳಾದ 'ನಾನು, ಸ್ವಾರ್ಥ, ದುರಾಸೆ, ಭೋಗ ಲಾಲಸೆ ಮತ್ತು ಮೌಢ್ಯ'.

**ಜೀವ ಕಲ್ಯಾಣಕ್ಕೆ ಬೇಕು:** ಗಾಳಿ, ನೀರು, ಅನ್ನ, ಒಳ್ಳೆಯ ಮಾತುಗಳು ಅತ್ಯಗತ್ಯ.

ಮುಕ್ತ ಮನ, ಜೀವ ಕಲ್ಯಾಣ ಭಾವನೆಗಳು, ಆನಂದಭಾವದಿಂದ ಕಾಯಕ ಮಾಡುವುದು, ಮನೋವಿಕಾರಗಳಾದ ಕಾಮ, ಕ್ರೋಧ, ಮೋಹ, ಮದ, ಮತ್ಸರಗಳಿಗೆ ನಾವೇ ಅಂಟಿಕೊಳ್ಳದೇ ಬಿಡಿಸಿಕೊಳ್ಳಬೇಕು.

ನಾವು ಒಳಿತನ್ನು ಆಚರಿಸುವುದರಿಂದ ಒಳಿತಾಗುತ್ತದೆಯೇ ಹೊರತು ನಂಬಿಕೆ, ಮೌಢ್ಯ, ಸಂಪ್ರದಾಯಗಳು ವ್ಯರ್ಥ.

ನಿಮ್ಮೆಲ್ಲರ ಒತ್ತಡಗಳಿಗೂ ನೀವು ಪ್ರತಿಕ್ರಿಯಿಸುವ ಬಗೆಯೇ ಕಾರಣ... ಆದ್ದರಿಂದ ಸ್ಪಂದಿಸಲು ಕಲಿಯಿರಿ, ಪ್ರತಿಕ್ರಿಯಿಸಬೇಡಿ.

- ಗೌತಮ ಬುದ್ಧ



ಸರಿ, ತಪ್ಪು, ಒಳಿತು, ಕೆಡುಕಗಳ ಮೂಲ 'ದೇಹ ಮತ್ತು ಮನಸ್ಸು'. ದೇಹ ಮತ್ತು ಮನಸ್ಸಿನ ಶಕ್ತಿ ಅರಿತು ವಿವೇಕದಿಂದ ಬಾಳಬೇಕು.

ಬುದ್ಧ ಲೋಕಕ್ಕೆ ನೀಡಿದ ಅನನ್ಯ ಕೊಡುಗೆ ಎಂದರೆ; ದುಃಖ ಇದೆ, ದುಃಖಕ್ಕೆ ಕಾರಣ, ದುಃಖ ನಿವಾರಣೆ ಮತ್ತು ದುಃಖ ನಿವಾರಣೆ ಮಾರ್ಗಗಳು ಎಂಬ ನಾಲ್ಕು ನಿತ್ಯ ಸತ್ಯಗಳೇ ಆಗಿವೆ. ಇವುಗಳನ್ನು 'ಆರ್ಯಸತ್ಯ'ವೆಂದು ಕರೆಯುತ್ತಾರೆ. ದುಃಖ ನಿವಾರಣೆಗೆ ಒಯ್ಯುವ ಮಾರ್ಗವನ್ನು 'ಅಷ್ಟಾಂಗ ಮಾರ್ಗ'ವೆಂದು ಗುರುತಿಸಲಾಗಿದೆ. ಅದೆಂದರೆ ಸರಿಯಾದ ತಿಳುವಳಿಕೆ, ಸರಿಯಾದ ಯೋಚನೆ, ಸರಿಯಾದ ಮಾತು, ಸರಿಯಾದ ಕ್ರಮ, ಸರಿಯಾದ ಜೀವನೋಪಾಯ, ಸರಿಯಾದ ಪ್ರಯತ್ನ, ಸರಿಯಾದ ಜಾಗೃತಿ ಮತ್ತು ಸರಿಯಾದ ಧ್ಯಾನವೇ ಆಗಿದೆ. ಇವುಗಳನ್ನು ಅನುಷ್ಠಾನಕ್ಕೆ ತರುವ ಸಲುವಾಗಿ ಪಂಚಶೀಲವನ್ನು ಇದಕ್ಕೆ ಪೂರಕವಾಗಿ ಬೋಧಿಸುತ್ತಾರೆ. ಪ್ರಾಣ ಹತ್ಯೆ ಮತ್ತು ಕಳ್ಳತನವನ್ನು ಮಾಡದಿರುವುದು. ಅನೈತಿಕ ಸಂಬಂಧವನ್ನು ಹೊಂದದೇ ಇರುವುದು. ಸುಳ್ಳು, ಚಾಡಿ ಹೇಳದೇ ಇರುವುದು. ಹೆಂಡ, ಸುರೆ ಮುಂತಾದ ಮತ್ತು ಭರಿಸುವ ಪಾನೀಯಗಳನ್ನು ಸೇವಿಸದೇ ಇರುವುದಾಗಿದೆ.

'ದುಃಖವನ್ನು ಕೊನೆಗಾಣಿಸುವುದಕ್ಕೆ ಒಂದು ದಾರಿಯುಂಟು' ಎಂಬುದೇ ಗೌತಮನು ಕಂಡ ನಾಲ್ಕನೆಯ ಸತ್ಯ.

✦ ಆಸೆಯನ್ನು ಹೋಗಲಾಡಿಸಬೇಕೆಂಬ ಮನಸ್ಸುಳ್ಳವನು ತನ್ನ ಮನಸ್ಸು, ಮಾತು, ನಡತೆಗಳನ್ನು ಶುದ್ಧವಾಗಿಟ್ಟುಕೊಳ್ಳಬೇಕು.

✦ ಸ್ವಾರ್ಥದ ಮೇಲೆ ಆಸೆಯಿಡದೆ, ಪರೋಪಕಾರದಲ್ಲಿ ಗಮನವಿಡಬೇಕು.

✦ ಇತರರಿಗೆ ಕಷ್ಟ ಬಂದಾಗ ಸಹಾಯ ಮಾಡಬೇಕು. ಸುಳ್ಳಾಡಬಾರದು, ಚಾಡಿ ಹೇಳಬಾರದು,

✦ ಯಾವಾಗಲೂ ನಿಜವನ್ನೇ ಹೇಳುತ್ತಾ, ದಯಾವಂತನಾಗಿರಬೇಕು.

✦ ಇರುವ ದುರ್ಗುಣಗಳನ್ನು ಹೋಗಲಾಡಿಸಬೇಕು. ಹೊಸ ದುರ್ಗುಣಗಳು ಬಾರದಂತೆ ನೋಡಿಕೊಳ್ಳಬೇಕು.

✦ ಇರುವ ಸದ್ಗುಣಗಳನ್ನು ಕಾಪಾಡಿಕೊಳ್ಳಬೇಕು. ಹೊಸ ಸದ್ಗುಣಗಳನ್ನು ಸಂಪಾದಿಸಬೇಕು.

✦ ಒಟ್ಟಿನಲ್ಲಿ ಹೇಳುವುದಾದರೆ, ಮನಸ್ಸನ್ನು ಪರಿಶುದ್ಧವಾಗಿ ಇಟ್ಟುಕೊಳ್ಳಬೇಕು. ಯಾವ ತರಹದ ಕೆಡುಕನ್ನೂ ಯೋಚಿಸಬಾರದು, ಆಡಬಾರದು, ಮಾಡಬಾರದು. ಒಳ್ಳೆಯದನ್ನೇ ಯೋಚಿಸಬೇಕು, ಮಾಡಬೇಕು. ಆ ರೀತಿ ನಡೆದರೆ ಆಸೆ ನಾಶವಾಗುತ್ತದೆ, ದುಃಖ ಮಾಯವಾಗುತ್ತದೆ.

ಬುದ್ಧನ ಜೀವನಾನಂದದ ಸೂತ್ರಗಳು :

✦ ಪ್ರತ್ಯೇಕತೆ, ವಿಭಜನೆ ಪ್ರಪಂಚದ ಎಲ್ಲಾ ಸಂಕಷ್ಟಗಳ ಮೂಲ.

✦ ಕರುಣೆ, ಮೈತ್ರಿ ಬಲವರ್ಧಕಗಳು ಸಕಲ ಸಂಕಷ್ಟಗಳಿಗೆ ಅಮೃತ.

✦ ನಿನಗೆ ನಿನ್ನ ಆಲೋಚನೆಗಳೇ ಬೆಳಕು, ನಿನ್ನ ದುಃಖ

✦ ಪರಿಹಾರ ನಿನ್ನಿಂದಲೇ, ಪರಮಾನಂದವೂ ನಿನ್ನಿಂದಲೇ.

✦ ಉದಾರ ಹೃದಯ, ಮೃದು ಮಧುರ ಮಾತು, ಸೇವೆಯ ಜೀವನ ಅತ್ಯುತ್ತಮ. ಆನಂದದ ಜೀವನಕ್ಕೆ ಭದ್ರ ಬುನಾದಿ.

✦ ಹೆಚ್ಚೆಚ್ಚು ಒಳಿತನ್ನು ಮಾಡುತ್ತಿರಿ, ಖಂಡಿತಾ ಹೆಚ್ಚೆಚ್ಚು ಆನಂದ ಪಡೆಯುತ್ತೀರಿ. ಆನಂದ ನಮ್ಮ ಜನ್ಮಸಿದ್ಧ ಹಕ್ಕು.

✦ ನಿನ್ನನ್ನು ದ್ವೇಷಿಸುವವರಿಗಿಂತ, ನಿನ್ನ ಶತ್ರುಗಳಿಗಿಂತ, ನಿನ್ನ ಶಿಸ್ತಿಲ್ಲದ ದಶದಿಕ್ಕುಗಳಿಗೆ ಹರಿಯುವ ನಿನ್ನ ಮನಸ್ಸೇ ಹಿತಶತ್ರು.

ಮೇಲಿನ ಬುದ್ಧೋಪದೇಶಗಳನ್ನು ನಮ್ಮ ನಮ್ಮ ಜೀವನಗಳಲ್ಲಿ ಅನುಸರಿಸಿದರೆ, ಈ ಬದುಕನ್ನು ಆನಂದಮಯವಾಗಿಸಬಹುದು. ಇಲ್ಲದಿದ್ದರೆ ದುಃಖ ಕಟ್ಟಿಟ್ಟ ಬುತ್ತಿ, ಅದರಿಂದ ಎಂದೂ ಬಿಡುಗಡೆ ದೊರೆಯದು.

**- ಶಿವನಕೆರೆ ಬಸವಲಿಂಗಪ್ಪ**
ಕರುಣಾ ಜೀವ ಕಲ್ಯಾಣ ಟ್ರಸ್ಟ್, ದಾವಣಗೆರೆ.

## ಹ್ಯಾಕಥಾನ್ ಸ್ಪರ್ಧೆಯಲ್ಲಿ ಜಿಎಂಐಟಿ ವಿದ್ಯಾರ್ಥಿಗಳಿಗೆ ದ್ವಿತೀಯ ಬಹುಮಾನ




ದಾವಣಗೆರೆ, ಮೇ 4- ನಗರದ ಜಿ.ಎಂ.ಐ.ಟಿ. ತಾಂತ್ರಿಕ ಮಹಾವಿದ್ಯಾಲಯದ ಗಣಕಯಂತ್ರ ವಿಭಾಗದ 6ನೇ ಸೆಮಿಸ್ಟರ್ ವಿದ್ಯಾರ್ಥಿಗಳ ಎರಡು ತಂಡಗಳಾದ ವೋಲ್ಟೇಜ್ ವೈಕಿಂಗ್ಸ್ (ಸಾಗರ್ ಪಾಟೀಲ್, ವರುಣ್ ಎಸ್. ಪಾಟೀಲ್, ಬಿ.ಆರ್. ತುಷಾರ್) ಮತ್ತು ಕಾರ್‌ಪೂಲ್‌ಕ್ರಿವ್ (ವಿ. ಪ್ರಣವ್, ಹೆಚ್.ಪಿ. ಪೂಜಾ ವನಮಾಲಿ ಸೆಡಿಂಬಿ ಮತ್ತು ಎನ್. ನವಪ್ರೀತಮ್) ಮಂಗಳೂರಿನ ಸೆಂಟ್ ಜೋಸೆಫ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ 25 ಮತ್ತು 26ನೇ ಏಪ್ರಿಲ್ 2023 ರಂದು ಇಜಿಡಿಕೆ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಇವರ ಸಹಯೋಗದಲ್ಲಿ ನಡೆದ ಹ್ಯಾಕ್ ಟು ಫ್ಯೂಚರ್ ಹ್ಯಾಕಥಾನ್ ಸ್ಪರ್ಧೆಯಲ್ಲಿ ಎರಡೂ ತಂಡಗಳು ದ್ವಿತೀಯ ಬಹುಮಾನ (ರೂ. 15 ಸಾವಿರ ನಗದು) ಪಡೆದು ಕೊಂಡಿರುತ್ತಾರೆ.

ಕಾಲೇಜಿನ ಆಡಳಿತಾಧಿಕಾರಿ ವೈ.ಯು. ಸುಭಾಷ್‌ಚಂದ್ರ, ಪ್ರಾಂಶುಪಾಲ ಡಾ. ಎಂ.ಬಿ, ಸಂಜಯ್ ಪಾಂಡೆ, ಗಣಕಯಂತ್ರ ವಿಭಾಗದ ಮುಖ್ಯಸ್ಥ ಪ್ರೊ. ಎಂ. ಸಂತೋಷ್‌ಕುಮಾರ್, ಕಾಲೇಜಿನ ಹ್ಯಾಕಥಾನ್ ಆಯೋಜಕ ಪ್ರೊ. ಎಸ್.ಟಿ. ಮಾರುತಿ ಮತ್ತಿತರರು ಅಭಿನಂದಿಸಿದ್ದಾರೆ.

## ವಿಪ್ರ ವಟು ಶಿಕ್ಷಣ ಶಿಬಿರ ಮುಕ್ತಾಯ

ದಾವಣಗೆರೆ, ಮೇ 4 - ಬ್ರಾಹ್ಮಣ ಸಮಾಜ ಸೇವಾ ಸಂಘ ಮತ್ತು ವಿಪ್ರ ವಟು ಶಿಕ್ಷಣ ಸಮಿತಿ ಇವರ ಸಹಯೋಗದೊಂದಿಗೆ ಬ್ರಾಹ್ಮಣ ವಿದ್ಯಾರ್ಥಿ ನಿಲಯದಲ್ಲಿ 10 ದಿನಗಳ ಕಾಲ ನಡೆದ ವಿಪ್ರ ವಟು ಶಿಕ್ಷಣ ಶಿಬಿರ ಕಳೆದ ವಾರ ಮುಕ್ತಾಯವಾಗಿದೆ. ಶಿಬಿರದಲ್ಲಿ 21 ವಿದ್ಯಾರ್ಥಿಗಳು ಹಾಜರಾಗಿದ್ದು ತ್ರಿಕಾಲ ಸಂಧ್ಯಾವಂದನೆ, ಪುರುಷ ಸೂಕ್ತ, ಗಣೇಶ ಅಥರ್ವಣ ಸೂಕ್ತ, ವಿಷ್ಣು ಸಹಸ್ರನಾಮ, ಭಗವದ್ಗೀತೆ, ಯೋಗ ಇತ್ಯಾದಿಗಳನ್ನು ಕಲಿತರು.

ಸಮಾರೋಪ ಸಮಾರಂಭದಲ್ಲಿ ಡಾ|| ಬಿ.ಟಿ. ಅಚ್ಯುತ್ ಹಾಗೂ ಆರ್. ಹೆಗಡೆಯವರು ಇಲ್ಲಿ ಕಲಿತ ಸಂಧ್ಯಾವಂದನೆಯನ್ನು ಮುಂದುವರಿಸುವಂತೆ ವಟುಗಳಿಗೆ ತಿಳಿಸಿದರು ಎಂದು ಬ್ರಾಹ್ಮಣ ಸಮಾಜ ಸೇವಾ ಸಂಘದ ಅಧ್ಯಕ್ಷ ಡಾ. ಎಂ.ಸಿ. ಶಶಿಕಾಂತ್ ತಿಳಿಸಿದರು.

## ಕೋಮುವಾದ ಎದುರಿಸುವ ಶಕ್ತಿ

(1ನೇ ಪುಟದಿಂದ) ಮಾತನಾಡಿ, ಕೋಮುವಾದದ ವಿರೋಧಿಸಿ, ಜಾತ್ಯತೀತ ಮನಸುಗಳ ಪರ ಕೆಲಸ ಮಾಡಬೇಕಾಗಿದೆ ಎಂದು ಹೇಳಿದರು.

ಕಾಂಗ್ರೆಸ್ ಅಭ್ಯರ್ಥಿಗಳ ಪರ ರೋಡ್ ಶೋ ನಡೆಸುವ ಮೂಲಕ ನಮ್ಮನ್ನು ಬೆಂಬಲಿಸಿದ್ದಕ್ಕಾಗಿ ಕೃತಜ್ಞತೆ ಸಲ್ಲಿಸುತ್ತೇವೆ ಎಂದರು.

ತಂಜೀಂ ಕಮಿಟಿಯ ಅಧ್ಯಕ್ಷ ದಾದುಶೇಠ್ ಮತ್ತು ನಿಕಟಪೂರ್ವ ಅಧ್ಯಕ್ಷ ಸಾಧಿಕ್ ಪೈಲ್ವಾನ್ ಮಾತನಾಡಿ, ಅಲ್ಪಸಂಖ್ಯಾತರ ಬಗ್ಗೆ ವಿಶೇಷ ಕಾಳಜಿ ವಹಿಸುತ್ತಿರುವ ಡಾ. ಶಾಮನೂರು ಶಿವಶಂಕರಪ್ಪ ಮತ್ತು ಎಸ್.ಎಸ್. ಮಲ್ಲಿಕಾರ್ಜುನ್ ಅವರನ್ನು ನಾವು ಸದಾ ಬೆಂಬಲಿಸುತ್ತೇವೆ ಎಂದು ಹೇಳಿದರು.

ಕಾಂಗ್ರೆಸ್ ಮುಖಂಡರಾದ ಸೈಯದ್ ಸೈಫುಲ್ಲಾ, ಅಯೂಬ್ ಪೈಲ್ವಾನ್, ಕೆ. ಚಮನ್‌ಸಾಬ್, ಮೈನುದ್ದೀನ್, ಸೈಯದ್ ಚಾರ್ಲಿ, ಜಾಕೀರ್ ಅಲಿ, ಬುತ್ತಿ ಗಫೂರ್‌ಸಾಬ್, ಶಫೀಕ್ ಪಂಡಿತ್, ಎ.ಬಿ. ರಹೀಂ, ಕೊಡಪಾನ ದಾದಾಪೀರ್, ಎ.ಬಿ. ಹಬೀಬ್ ಸಾಬ್, ಫೈರೋಜ್ ಪಾಟೀಲ್, ಸಾಗರ್, ಇರ್ಫಾನ್, ರಹಮತ್ ಅಲಿ, ಬುತ್ತಿ ಗೌಸ್, ಮಲ್ಲಿಕಾರ್ಜುನ್ ಇಂಗಳೇಶ್ವರ್, ಅಲ್ತಾಫ್ ಹುಸೇನ್, ಪರಸಪ್ಪ, ಫಾರೂಕ್ ಇತರರು ಭಾಗವಹಿಸಿದ್ದರು.

## ದಾರ್ಶನಿಕರ ಆದರ್ಶ ಮೈಗೂಡಿಸಿಕೊಳ್ಳಿ

### ಕೋಡಿಹಳ್ಳಿ ಆದಿಜಾಂಬವ ಮಠದ ಶ್ರೀ ಷಡಕ್ಷರಿ ಮುನಿ ಸ್ವಾಮೀಜಿ



ದಾವಣಗೆರೆ, ಮೇ 4- ದಾರ್ಶನಿಕರ, ಆದರ್ಶ ಪುರುಷರ ಹುಟ್ಟು ಹಬ್ಬಗಳು ಕೇವಲ ಆಚರಣೆಗೆ ಸೀಮಿತವಾಗದೇ ಅವರ ಸಾಧನೆ, ಸಿದ್ಧಾಂತಗಳು, ಆದರ್ಶಗಳು ಹಾಗೂ ಕಾಯಕ ತತ್ವಗಳನ್ನು ಪ್ರತಿಯೊಬ್ಬರೂ ಮೈಗೂಡಿಸಿಕೊಂಡಾಗ ಮಾತ್ರ ಆಚರಣೆ ಮಾಡಿದ್ದಕ್ಕೂ ಸಾರ್ಥಕತೆ ಬರುತ್ತದೆ ಎಂದು ಹಿರಿಯೂರು ತಾಲ್ಲೂಕು ಕೋಡಿಹಳ್ಳಿ ಆದಿಜಾಂಬವ ಮಠದ ಶ್ರೀ ಷಡಕ್ಷರಿ ಮುನಿ ಸ್ವಾಮೀಜಿ ಹೇಳಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ಬಸವ ಜಯಂತಿ, ಅಂಬೇಡ್ಕರ್ ಜಯಂತಿ, ದಲಿತ ಹೋರಾಟಗಾರರಿಗೆ ಸನ್ಮಾನ ಮತ್ತು ಕ್ರೀಡೆಯಲ್ಲಿ ಸಾಧನೆ ಮಾಡಿದ ಸಾಧಕರಿಗೆ ಏರ್ಪಡಿಸಿದ್ದ ಸನ್ಮಾನ ಸಮಾರಂಭದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.


ಇತ್ತೀಚಿನ ದಿನಮಾನಗಳಲ್ಲಿ ಯುವಜನರು ಬಸವೇಶ್ವರರ ಕಾಯಕ ತತ್ವಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳದಿರುವುದು ವಿಷಾದದ ಸಂಗತಿ ಎಂದರು.

ದಲಿತ ಮುಖಂಡ ಹೆಚ್. ಮಲ್ಲೇಶ್ ಮಾತನಾಡಿ, ಅಂಬೇಡ್ಕರ್ ಸಮಾಜಕ್ಕೆ ಆದರ್ಶ. ಅವರು ವಿಶ್ವಮಾನವರು, ಜ್ಞಾನದ ಸಂಕೇತ. ಯಾರೂ ಕೂಡ ಅವರನ್ನು ಜಾತಿಯಿಂದ ಗುರುತಿಸಬಾರದು ಎಂದು ಹೇಳಿದರು.

ದಲಿತ ಮುಖಂಡ ಸೋಮಲಾಪುರದ ಹನುಮಂತಪ್ಪ ಮಾತನಾಡಿದರು. ಸಮಿತಿ ಜಿಲ್ಲಾಧ್ಯಕ್ಷ ಜಿಗಳಿ ಹಾಲೇಶ್ ಅಧ್ಯಕ್ಷತೆ ವಹಿಸಿದ್ದರು.

ದಲಿತ ಸಂಘರ್ಷ ಸಮಿತಿ ಮುಖಂಡರಾದ ಸೊಕ್ಕೆ ಶಿವಕುಮಾರ್, ಪರಮೇಶ್, ನಾಗರಾಜ್, ಬಾತಿ ಶಿವಕುಮಾರ್, ಶಿರಮಗೊಂಡನಹಳ್ಳಿ ರುದ್ರೇಶ್ ಮತ್ತಿತರರು ಉಪಸ್ಥಿತರಿದ್ದರು.

## ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಇಂದು ಶಿವಾನುಭವ ಗೋಷ್ಠಿ





ಬಾಡಾ ಕ್ರಾಸ್‌ನಲ್ಲಿ ರುವ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ 266ನೇ ಬುದ್ಧ ಪೌರ್ಣಿಮೆ ಶಿವಾನುಭವ ಗೋಷ್ಠಿ ಮತ್ತು ಸಂಗೀತ ಕಾರ್ಯಕ್ರಮವನ್ನು ಇಂದು ಮಧ್ಯಾಹ್ನ 12 ಕ್ಕೆ ಏರ್ಪಡಿಸಲಾಗಿದೆ.

ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಹಾಗೂ ಶ್ರೀ ಕಲ್ಲಯ್ಯಜ್ಜ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಲೆಕ್ಕ ಪರಿಶೋಧಕ ಅಥಣಿ ವೀರಣ್ಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ವೀರೇಶ್ವರ ಪುಣ್ಯಾಶ್ರಮದ ಕಾರ್ಯದರ್ಶಿ ಎ.ಹೆಚ್. ಶಿವಯೋಗಿ ಸ್ವಾಮಿ ಉಪಸ್ಥಿತರಿರುವರು.

ಪ್ರಸಾದ ಸೇವೆಯನ್ನು ಬೆಂಗಳೂರಿನ ಟಿ.ಕೆ. ವೀರಣ್ಣ ಸ್ಮರಣಾರ್ಥ ಶ್ರೀಮತಿ ಉಮಾ ಮತ್ತು ಕುಟುಂಬದವರು, ದಾವಣಗೆರೆಯ ಡಾ. ಟಿ.ಜಿ. ನಿರಂಜನ್ ಹಾಗೂ ಕುಟುಂಬದವರು, ವೈಶ್ಯ ಸೇವಾಭೂಷಣ ಪಾಲ ರಾಜಗುಪ್ತ ಲಿಂ. ಶ್ರೀಮತಿ ಪಿ.ಆರ್. ಶಾರದ ಮತ್ತು ಸಹೋದರರು ಮತ್ತು ಮಕ್ಕಳು, ಮೊಮ್ಮಕ್ಕಳು, ಸಿ.ಜಿ. ಯಲ್ಲಪ್ಪ ಮತ್ತು ಮಕ್ಕಳು ವಹಿಸಿಕೊಳ್ಳಲಿದ್ದಾರೆ.

## ಸಿರಿಗೆರೆಯ ಬಿ.ಎಲ್.ಆರ್ ಕಾಲೇಜ್‌ಗೆ ಉತ್ತಮ ಫಲಿತಾಂಶ







ಸಿರಿಗೆರೆ, ಮೇ 4- ಇಲ್ಲಿನ ಬಿ. ಲಿಂಗಯ್ಯ ವಸತಿ ಪದವಿ ಪೂರ್ವ ಕಾಲೇಜಿಗೆ ದ್ವಿತೀಯ ಪಿಯುಸಿ ಫಲಿತಾಂಶ ಶೇ. 83.57ರಷ್ಟು ಲಭಿಸಿದೆ. ಕಲಾ ವಿಭಾಗದ 104 ವಿದ್ಯಾರ್ಥಿಗಳಲ್ಲಿ 6 ಅತ್ಯುನ್ನತ ಶ್ರೇಣಿ, 40 ಪ್ರಥಮ, 17 ದ್ವಿತೀಯ ಶ್ರೇಣಿಗಳು ಬಂದಿದ್ದು, ವಾಣಿಜ್ಯ ವಿಭಾಗದಲ್ಲಿ 99 ವಿದ್ಯಾರ್ಥಿಗಳಲ್ಲಿ 5 ಅತ್ಯುನ್ನತ ಶ್ರೇಣಿ, 42 ಪ್ರಥಮ, 20 ದ್ವಿತೀಯ ಶ್ರೇಣಿಗಳು, ವಿಜ್ಞಾನ ವಿಭಾಗದ 83 ವಿದ್ಯಾರ್ಥಿಗಳಲ್ಲಿ 31 ಅತ್ಯುನ್ನತ ಶ್ರೇಣಿ, 43 ಪ್ರಥಮ, 7 ದ್ವಿತೀಯ ಶ್ರೇಣಿ ಗಳಿಸಿದ್ದಾರೆ. ಕಲಾ ವಿಭಾಗದಲ್ಲಿ ಎಸ್.ಎ. ಶಶಿಕಲಾ 600 ಕ್ಕೆ 579, ವಾಣಿಜ್ಯ ವಿಭಾಗದಲ್ಲಿ ಜಿ.ಆರ್. ರಕ್ಷಿತಾ 578, ವಿಜ್ಞಾನ ವಿಭಾಗದಲ್ಲಿ ಯು.ಟಿ. ತೇಜರಾಜ 576 ಅಂಕಗಳನ್ನು ಗಳಿಸಿದ್ದಾರೆ.

ಜೈ ಶ್ರೀಮನ್ನಾರಾಯಣ
ವಿಕಾಸ ತರಂಗಿಣಿ, ದಾವಣಗೆರೆ
28ನೇ ವರ್ಷದ
ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ
ಏಪ್ರಿಲ್ 1 ರಿಂದ ಮೇ 15ರವರೆಗೆ.
ಸ್ಥಳ : ಮಹಾನಗರ ಪಾಲಿಕೆ ಆವರಣ
ಇಂದಿನ ಮಜ್ಜಿಗೆ ಪ್ರಾಯೋಜಕರು :
ಶ್ರೀ ಹೆಚ್.ಎಂ. ಜಯರಾಜ್ ಮತ್ತು ಕುಟುಂಬ ವರ್ಗದವರ ಸೇವಾರ್ಥ.

ತಕ್ಷಣ ಬೇಕಾಗಿದ್ದಾರೆ
ಡಿಟಿಡಿಸಿ ಕೋರಿಯರ್ ಆಫೀಸ್‌ನಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಜ್ಞಾನವಿರುವ ಹುಡುಗಿಯರು (Ladies) ಬೇಕಾಗಿದ್ದಾರೆ. ಸಂಜೆ 5 ರಿಂದ ರಾತ್ರಿ 10.30ರವರೆಗೆ
Part time ಕೆಲಸ ಮಾಡಲು ಡೆಲಿವರಿ ಬಾಯ್ ಬೇಕಾಗಿದ್ದಾರೆ.
ಮೊ.97385-23711

ವಾಸದ ಮನೆ ಭೋಗ್ಯಕ್ಕೆ ಇದೆ
ದಾವಣಗೆರೆ ಸಿಟಿ ಎಸ್.ಎಸ್ ಬಡಾವಣೆ 'ಎ' ಬ್ಲಾಕ್ ನೇತಾಜಿ ಸುಭಾಷ್‌ಚಂದ್ರ ಬೋಸ್ ಇಂಡೋರ್ ಸ್ಟೇಡಿಯಂ ಹತ್ತಿರ, ಎಸ್. ಸ್ಕ್ವೇಯರ್ ಡ್ಯೂ ಪ್ಲವರ್ ಅಪಾರ್ಟ್‌ಮೆಂಟ್‌ನಲ್ಲಿ ವಾಸ್ತು ಪ್ರಕಾರ ಅಳವಡಿಸಿರುವ ಲಿಫ್ಟ್, ನೀರು, ಹಾಗೂ ಎಲ್ಲಾ ಸೌಕರ್ಯವಿರುವ ವಾಸದ ಮನೆ ಭೋಗ್ಯಕ್ಕಿದೆ. ಬಿ.ಎಸ್. ಸಂತೋಷ್
96322 67555

ಮನೆ ಬಾಡಿಗೆಗಿದೆ
ಕುವೆಂಪುನಗರ 13ನೇ ಮೇನ್, 6ನೇ ಕ್ರಾಸ್‌ನಲ್ಲಿ 2 ಬೆಡ್‌ರೂಂ, ಬೋರ್ ವೇಲ್ ಹಾಗೂ ಮುನ್ಸಿಪಲ್ ನೀರಿನ ಸೌಕರ್ಯವಿರುವ ಮನೆ ಬಾಡಿಗೆಗಿದೆ.
96325 97507

ಟ್ಯಾಂಕ್ ಕ್ಲೀನಿಂಗ್
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

ಮ್ಯಾನೇಜರ್ ಬೇಕಾಗಿದ್ದಾರೆ
ಹೋಟೆಲ್‌ನಲ್ಲಿ ಕೆಲಸ ಮಾಡಲು ಮ್ಯಾನೇಜರ್, ಕ್ಲೀನರ್ ಬೇಕಾಗಿದ್ದಾರೆ.
ಸಂಪರ್ಕಿಸಿ.
88924 51765, 80956 82725

WANTED FACULTIES
For C, C+, Java, python
Qualification: Any Degree with having passion in teaching.
Contact: Vishistaa Educational institutions Davangere.
91645 17776

ಕೆಲಸಕ್ಕೆ ಬೇಕಾಗಿದ್ದಾರೆ
ಶ್ರೀ ಕೃಷ್ಣ ಪ್ಲೆಕ್ಸ್ ಪ್ರಿಂಟಿಂಗ್‌ನಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು ಬೇಕಾಗಿದ್ದಾರೆ.
ಹಳೇ ಬಸ್ ನಿಲ್ದಾಣದ ಎದುರು, ಪಿ.ಬಿ ರಸ್ತೆ, ದಾವಣಗೆರೆ.
96117 71970

WANTED
Marketing Executive, Salary 10-12k
Accountant -2, Salary 10-12k
Contact With Bio Data
Samruddhi Ply & Hardware
Nijalingappa Layout , Near Laxmi Floor Mills, Davangere
99803 39333

HOUSES FOR RENT
1 BHK, 2BHK, 3BHK, 4BHK, Independent, Duplex, Car parking, Tap water, Bore water, Solar, LIC Colony, SS Layout, JH patel layout, Anjaneya badavane, Banashankari Layout.
77955 06795
Dakshith Iynahalli

ಸೈಟುಗಳು ಮಾರಾಟಕ್ಕಿವೆ
ಹೊಸ ಬನಶಂಕರಿ ಲೇಔಟ್‌ನಲ್ಲಿ 40x43 East, 80x45 East, 30x50 West, 40 ಅಡಿ ರೋಡಿಗಿದೆ. 40x70 40x70 West, 60 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

ಬೇಕಾಗಿದ್ದಾರೆ
ಸೋಲಾರ್ ಆಫೀಸ್‌ನಲ್ಲಿ ಕಂಪ್ಯೂಟರ್ ಬಲ್ಲ ಮಹಿಳಾ Admin ಬೇಕಾಗಿದ್ದಾರೆ.
ಶಿವಕುಮಾರ ಸ್ವಾಮಿ ಲೇಔಟ್ ಸಮೀಪಸ್ಥರಿಗೆ ಆದ್ಯತೆ.
99005 47328

ಬೇಕಾಗಿದ್ದಾರೆ
ಹೋಟೆಲ್‌ನಲ್ಲಿ ಕೆಲಸ ಮಾಡಲು ಅನುಭವವುಳ್ಳ ಪುರುಷರು ಬೇಕಾಗಿದ್ದಾರೆ, ಗರಿಷ್ಠ ವೇತನ ನೀಡಲಾಗುವುದು.
ಸಂಪರ್ಕಿಸಿ :
63666 35593

ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಗ್ರಾಮಾಂತರದವರಿಗೂ ಅವಕಾಶವುಂಟು.
ಆಕರ್ಷಕ ವೇತನದೊಂದಿಗೆ ಊಟ - ವಸತಿ ಸೌಲಭ್ಯ ಇರುತ್ತದೆ. ಸಂಪರ್ಕಿಸಿ :
98442-94446

ತಕ್ಷಣ ಬೇಕಾಗಿದ್ದಾರೆ
ಡೆಲಿವರಿ ಸಂಸ್ಥೆಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಬಳ ರೂ. 13,500/- + ಪೆಟ್ರೋಲ್ ಭತ್ಯೆ + ESI + PF + ಪ್ರೋತ್ಸಾಹಕಗಳು.
ಸ್ಥಳ : ಚನ್ನಗಿರಿ, ಶಿವಮೊಗ್ಗ, ಸಂಪರ್ಕಿಸಿ :
93803 41503, 99721 15766

ಅನುಭವವಿರುವ ಶಿಕ್ಷಕಿಯರು ಬೇಕಾಗಿದ್ದಾರೆ
ಶ್ರೀ ತರಳಬಾಳು ನರ್ಸರಿ ಮತ್ತು ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ-ಬಸಾಪುರ, 21ನೇ ವಾರ್ಡ್, ದಾವಣಗೆರೆ-1
B.Sc B.Ed - 02, BA. B.Ed (English) - 01, D.Ed - 02, Hindi B.Ed - 01. ಸಂಪರ್ಕಿಸಿ :
94488 03836, 95912 85527

ಮನೆ ಬಾಡಿಗೆ ಬೇಕಾಗಿದೆ
ವಿದ್ಯಾನಗರ ತರಳಬಾಳು ಬಡಾವಣೆ ಸುತ್ತಮುತ್ತ ಸುಸಜ್ಜಿತವಾದ
3 Bedroom (attached bathroom)
ಇರುವ ಮನೆ ಬಾಡಿಗೆಗೆ ಬೇಕಾಗಿದೆ.
(Ground floor)
98804 66799

ಶ್ರೀ ಶಿವಕುಮಾರ ಸ್ವಾಮಿ
ವಾಟರ್ ಪ್ಯೂರಿಯರ್ ಸರ್ವೀಸ್
water Purifier service - 200/- and Gas Gyser - 150/-, Solar Service.
SBI ಬ್ಯಾಂಕ್ ಎದುರು, ಸೋಮೇಶ್ವರ ಸ್ಕೂಲ್ ರಸ್ತೆ, ನಿಟ್ಟುವಳ್ಳಿ, ದಾವಣಗೆರೆ.
ರಾಕೇಶ್ ಡಿ. 74111 01228

Wanted
Boys required for sales executive job at
Food Mart Supermarket
Quali : PUC, Any Degree
M : 9886463531

HERBAL CURE WELLNESS
PART TIME / FULL TIME
ಮೊಬೈಲ್ ಮೂಲಕ ನಮ್ಮ ಆಯುರ್ವೇದ ಉತ್ಪನ್ನಗಳನ್ನು ಪ್ರಚಾರ ಮಾಡುವ ಮೂಲಕ ದಿನಗಳಲ್ಲಿ 500 ರಿಂದ 5000 ರವರೆಗೂ ಗಳಿಸಿ.
81976 95295

ಸೈಟು ಮಾರಾಟಕ್ಕಿದೆ
ಎಂ.ಸಿ.ಸಿ. 'ಎ' ಬ್ಲಾಕ್, 5ನೇ ಅಡ್ಡ ರಸ್ತೆ ರಾಜು ಮೆಡಿಕಲ್ಸ್ ಶಾಪ್ ರೋಡ್‌ನಲ್ಲಿ ಪಶ್ಚಿಮ ದಿಕ್ಕಿನ 20x60 ಅಳತೆಯ ಸೈಟು ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ :
74116-87803, 99455-71898

WANTED
Vet Doctor To Work In
Sri Bhagwan Mahaveer Goushala, Avargere, Davangere.
Salary 15k to 18k
Contact
NITIN JAIN
94480 33734

ಮನೆ ಬಾಡಿಗೆಗಿದೆ
ಆಂಜನೇಯ ಬಡಾವಣೆಯಲ್ಲಿ, ಗ್ರೌಂಡ್‌ಫ್ಲೋರ್‌ನಲ್ಲಿರುವ 2BHK ಮನೆ, ಎಲ್ಲಾ ಸೌಕರ್ಯ ಹೊಂದಿದ್ದು ಬಾಡಿಗೆಗೆ ದೊರೆಯುತ್ತದೆ. ಆಸಕ್ತರು ಸಂಪರ್ಕಿಸಿ :
99863 31471
ಬ್ರೋಕರ್‌ಗೆ ಅವಕಾಶವಿಲ್ಲ.

ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

WANTED
Sr/Jr Accounts Executive M.com / B.com. 2 + Years exper, Residential Engineer Sewage Treatment Plant Operator, Hostel Supervisor, Plumber Carpenter, Attenders and Car/Bus Drivers ( Min 5+ Years experience)
90199 64655

ವಾಣಿಜ್ಯ ಕಟ್ಟಡ ಬಾಡಿಗೆಗೆ
ಹದಡಿ ಮುಖ್ಯ ರಸ್ತೆಯಲ್ಲಿರುವ ಟಿವಿಎಸ್ ಷೋರೂಂ ಪಕ್ಕ ಹಾಗೂ ಉದಯ ಬಜಾರ್ ಎದುರುಗಡೆ ಇರುವ ಸುಸಜ್ಜಿತ ವಾಣಿಜ್ಯ ಕಟ್ಟಡ ಬಾಡಿಗೆಗಿದೆ. ನೆಲ ಮಹಡಿ 1200 ಅಡಿಗಳು, ಮೊದಲನೇ ಮಹಡಿ 1600 ಅಡಿಗಳು. ಸೆಲ್ಲರ್ 2400 ಅಡಿಗಳು
ಸಂಪರ್ಕಿಸಿ.
96205 95579

ಬೇಕಾಗಿದ್ದಾರೆ
NDF Security Solutions India Pvt. LTD.,
ಎಂಬ ಕಂಪನಿಯಲ್ಲಿ ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್ಸ್ ಕೂಡಲೇ ಬೇಕಾಗಿದ್ದಾರೆ. ಸಂಪರ್ಕಿಸಿ :
9844 808903, 9663143409

ಬೇಕಾಗಿದ್ದಾರೆ
ಅಕೌಂಟ್ ಅಸಿಸ್ಟೆಂಟ್ ಟ್ಯಾಲಿ ಪ್ಯಾಕಿಂಗ್‌ಗಾಗಿ ಮಹಿಳೆಯರು ಮತ್ತು ಹುಡುಗರು ಬೇಕಾಗಿದ್ದಾರೆ.
ಕೈಗಾರಿಕಾ ಪ್ರದೇಶ, ಲೋಕಿಕೆರೆ ರಸ್ತೆ, ದಾವಣಗೆರೆ. ವಾಟ್ಸಾಪ್‌ಗೆ ರೆಸ್ಯೂಮ್ ಕಳಿಸಿ ಮತ್ತು ಕರೆ ಮಾಡಿ
ಫೋ. : 99863 66358

ಮಳಿಗೆ ಬಾಡಿಗೆಗೆ ಇದೆ
ಬಸವೇಶ್ವರ ಬಡಾವಣೆಯ 2ನೇ ಮುಖ್ಯ ರಸ್ತೆಯಲ್ಲಿ ಕಾರ್ನರ್ ಕಟ್ಟಡದಲ್ಲಿ 22x11 ಅಳತೆಯ ವಾಣಿಜ್ಯ ಮಳಿಗೆ ಬಾಡಿಗೆಗೆ ಇದೆ. ನಂ. 3709/144, ಆಸಕ್ತರು ಸಂಪರ್ಕಿಸಿ.
97415 64974

ಪ್ಲೇವುಡ್ ಅಂಗಡಿ ಮಾರಾಟಕ್ಕಿದೆ
ನಿಟ್ಟುವಳ್ಳಿಯಲ್ಲಿ ಕಾರ್ಯನಿರತವಾಗಿರುವ ಪ್ಲೇವುಡ್ ಅಂಗಡಿ ಮಾರಾಟಕ್ಕಿದೆ.
81471 82073, 70193 94388

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು, ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

KVR CONSTRUCTION HEIGHTS PRIVATE LTD.,
REQUIRMENT
Civil Engeneers-15 No.'s, 2-3 years experience above site.
send Resume to the mail Id and whatsapp to the below details
M/s KVR Construction Heights private limited
E-mail : kvrcheightspvtltd@gmail.com
8861000859, 7353827999

ಬೇಕಾಗಿದ್ದಾರೆ
ಇನ್ಶೂರೆನ್ಸ್ ಆಫೀಸ್‌ನಲ್ಲಿ ಆಫೀಸ್ ಬಾಯ್ ಕೆಲಸಕ್ಕೆ ಎಸ್.ಎಸ್.ಎಲ್.ಸಿ. ಉತ್ತೀರ್ಣ ಹೊಂದಿರುವ ಯುವಕ ಬೇಕಾಗಿದ್ದಾನೆ. ಸಮಯ ಬೆಳಿಗ್ಗೆ 10 ರಿಂದ ಸಂಜೆ 7 ರವರೆಗೆ.
9902120508, 8310981698

WANTED TEACHERS
B.A., B.Ed., (Social)-2
B.Sc., B.Ed., (Maths)-1
S.R.P. HIGH SCHOOL
Anjaneya Badavane, 17th Cross, Davangere.
91645 05229
78927 27892

2BHK ಮನೆ ಬಾಡಿಗೆಗೆ ಇದೆ
ಮೊದಲನೆ ಮಹಡಿಯಲ್ಲಿ 2 BHK ಮನೆ ಬಾಡಿಗೆಗೆ ಇದೆ.
ಸ್ಥಳ:2ನೇ ಮುಖ್ಯ ರಸ್ತೆ, ಕೆ.ಬಿ. ಬಡಾವಣೆ, ಜೈನ್ ಮಂದಿರದ ಹತ್ತಿರ, ದಾವಣಗೆರೆ.
70198 96845

WANTED TEACHERS
Kannada-1(M.A., B.Ed Major kannada)
English-1(M.A., B.Ed Major English)
Computer-2 (M.Com, B.Com)
Mathematics - 1 (M.Sc., B.Ed) (P.C.M)
Science - 1 (M.Sc., B.Ed) (C.B.Z)
Social-1 (M.A., B.Ed) Major (History)
HMS CONVENT
Hirematha kaipete, Davanagere.
98441 61962, 98442 73736

ಬಸವೇಶ್ವರ ಬೋರ್‌ವೆಲ್ಸ್
6 1/2, 4 1/2 ಇಂಚು ಬೋರ್‌ವೆಲ್ 300ರಿಂದ 350 ಅಡಿಯವರೆಗೆ ಮನೆಯ ಒಳಗೆ ಮತ್ತು ಹೊರಗೂ ಹೊಡೆಯಲಾಗುವುದು.
99008 92916

ಕೆಲಸಕ್ಕೆ ಬೇಕಾಗಿದ್ದಾರೆ
ಮನೆ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ.
94489 29509

ಬೇಕಾಗಿದ್ದಾರೆ
ತರಳಬಾಳು ಸ್ಕೂಲಿನಲ್ಲಿ ಸಿಬಿಎಸ್‌ಸಿ ಏಳನೇ ತರಗತಿ ಓದುತ್ತಿರುವ ವಿದ್ಯಾರ್ಥಿನಿಗೆ ಮನೆಯಲ್ಲೇ ಪಾಠ ಮಾಡಲು M.Sc ಓದಿರುವ, ಪಾಠ ಹೇಳಿಕೊಡಲು ಇಚ್ಛೆ ಇರುವವರು ಬೇಕಾಗಿದ್ದಾರೆ.
ಸಂಪರ್ಕಿಸಿ :
94819 09848

ಲೋನ್ ಕೊಡಲಾಗುತ್ತದೆ
ಇಟ್ಟಿಗೆ ಭಟ್ಟಿ, ಪ್ರಾವಿಜನ್ ಸ್ಟೋರ್, ಬಟ್ಟೆ ವ್ಯಾಪಾರ, ಸಣ್ಣ ವ್ಯಾಪಾರಿಗಳಿಗೆ, ಸಾಲ ಸೌಲಭ್ಯವಿದೆ, ಮನೆ ಖರೀದಿ ಮತ್ತು ನಿರ್ಮಾಣಕ್ಕೂ ಸಾಲ ಸೌಲಭ್ಯವಿದೆ, ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ .
74835 24662

Tuition for supplementary exam
PCMB, COMMERCE, ARTS.
100% ಫಲಿತಾಂಶ
ಸಿಂಚನ ಕೋಚಿಂಗ್ ಸೆಂಟರ್ ದಾವಣಗೆರೆ.
88614 45913, 85532 78258

ಜಮೀನು ಮಾರಾಟಕ್ಕಿದೆ
4 ಎಕರೆ 4 ಗುಂಟೆ ಕಪ್ಪು ಭೂಮಿ, 2 ಎಕರೆ, 25 ಗುಂಟೆ, ಕೆಂಪು ಭೂಮಿ, ದಾವಣಗೆರೆಯಿಂದ 19 ಕಿ.ಮೀ. ದೂರದಲ್ಲಿದೆ. ಸಂಪರ್ಕಿಸಿ :
90196 80218

ಬೇಕಾಗಿದ್ದಾರೆ
ನಗರದ ಪ್ರತಿಷ್ಠಿತ ಫರ್ನೀಚರ್ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಆದ್ಯತೆ.
ಫೋ. : 91108 68664

ಹಣಗೆರೆ ಕಟ್ಟೆ ಜ್ಯೋತಿಷ್ಯ ಫಲಂ
ಶ್ರೀ ಚೌಡೇಶ್ವರಿ ದೇವಿ ಮತ್ತು ಭೂತರಾಯನ ಪ್ರಯೋಗದಿಂದ ಪೂಜೆ ಸಲ್ಲಿಸಲಾಗುತ್ತದೆ.
ಪಂ|| ಎ.ಕೆ ರಾವ್
ವಿ.ಸೂ. ಸ್ತ್ರೀ-ಪುರುಷ ವಶೀಕರಣ. ಕೇವಲ 3 ದಿನಗಳಲ್ಲಿ ಪರಿಹಾರ ಶತ ಸಿದ್ಧ. ನಿಮ್ಮ ಯಾವುದೇ ಸಮಸ್ಯೆಯಿದ್ದರೂ ಫೋನಿನ ಮೂಲಕ ಸಂಪರ್ಕಿಸಿ.
99644 84508

CHANGE OF NAME
I RISHI VISHAL SANGHVI (new name), previously called RISHI VISHAL KUMAR (old name), resident of 116/25, Kirwadi layout, Davanagere. karnataka - 577002, Davanagere Taluk & District have changed my name as RISHI VISHAL SANGHVI vide affidavit dated 03.05.2023 sworn before Notary P. Brahmakumar, Davanagere. Henceforth all my transactions & dealings will be in my new name RISHI VISHAL SANGHVI.

ಮನೆ ಅಡುಗೆ ಕೆಲಸಕ್ಕೆ ಬೇಕಾಗಿದ್ದಾರೆ
(ವೆಜ್ ಮತ್ತು ನಾನ್ ವೆಜ್)
ವಿಳಾಸ ಡಾ.ರಾಜೇಶ್ವರಿ 1783/A3 12ನೇ ಕ್ರಾಸ್, ಸಿದ್ದವೀರಪ್ಪ ಬಡಾವಣೆ.
ಮೊ : 8892469449

# ಅಗತ್ಯ ವಸ್ತುಗಳ ಬೆಲೆ ತ್ರಿಬಲ್ ಏರಿಕೆಯೇ ಡಬಲ್ ಇಂಜಿನ್ ಸರ್ಕಾರದ ಸಾಧನೆ



## ಕೆಪಿಸಿಸಿ ಕಾರ್ಯಾಧ್ಯಕ್ಷ ಬಿ.ಎನ್.ಚಂದ್ರಪ್ಪ ಆರೋಪ

ಭರಮಸಾಗರ, ಮೇ 4- ದೇಶ, ರಾಜ್ಯದಲ್ಲಿ ಸಿಲಿಂಡರ್, ಅಡುಗೆ ಎಣ್ಣೆ, ಪೆಟ್ರೋಲ್ ಸೇರಿ ಅಗತ್ಯ ವಸ್ತುಗಳ ಬೆಲೆಯನ್ನು ತ್ರಿಬಲ್ ಏರಿಕೆ ಮಾಡಿರುವುದೇ ಡಬಲ್ ಇಂಜಿನ್ ಸರ್ಕಾರದ ಸಾಧನೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಬಿ.ಎನ್.ಚಂದ್ರಪ್ಪ ಆರೋಪಿಸಿದರು.

ಭರಮಸಾಗರ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ಗುರುವಾರ ಆಯೋಜಿಸಿದ್ದ ಕಾಂಗ್ರೆಸ್ ಕಾರ್ಯಕರ್ತರ ಸಭೆ ಹಾಗೂ ರೋಡ್ ಶೋ ನಲ್ಲಿ ಅವರು ಮಾತನಾಡಿದರು.

ಬೆಲೆ ಏರಿಕೆಗೆ ಜನಸಾಮಾನ್ಯರು ತತ್ತರಿಸಿದ್ದಾರೆ. ಸಿಲಿಂಡರ್ ಬಿಟ್ಟು, ಕಟ್ಟಿಗೆ ಒಲೆಗಳತ್ತ ಜನ ಗಮನ ಹರಿಸುತ್ತಿದ್ದಾರೆ. ಗ್ಯಾಸ್, ಪೆಟ್ರೋಲ್ ಬೆಲೆ ಏರಿಕೆಯಿಂದ ಜನ ಸಾಮಾನ್ಯರು ನಿತ್ಯ ಬಿಜೆಪಿ ಸರ್ಕಾರಕ್ಕೆ ಶಾಪ ಹಾಕುತ್ತಿದ್ದಾರೆ. ಮಾತೆತ್ತಿದರೆ ನಮ್ಮದು ಡಬಲ್ ಇಂಜಿನ್ ಸರ್ಕಾರ ಎಂದು ಹೇಳುವ ಬಿಜೆಪಿಯವರು ಬೆಲೆ ಏರಿಕೆ, ಗಲಭೆ, ಭ್ರಷ್ಟಾಚಾರವನ್ನು ತ್ರಿಬಲ್ ಹೆಚ್ಚಿಸಿದ್ದಾರೆ ಎಂದು ದೂರಿದರು.

ಕೆಪಿಸಿಸಿ ಸದಸ್ಯ, ಜಿ.ಪಂ. ಮಾಜಿ ಉಪಾಧ್ಯಕ್ಷ ಎಸ್.ಎಂ.ಎಲ್.ತಿಪ್ಪೇಸ್ವಾಮಿ ಮಾತನಾಡಿ, ನೋಟ್ ಬ್ಯಾನ್, ಜಿ.ಎಸ್.ಟಿ., ಬೆಲೆ ಏರಿಕೆ ಕಾರಣಕ್ಕೆ ಈಗಾಗಲೇ ಜನರು ಸಾಕಷ್ಟು ಕಷ್ಟ ಅನುಭವಿಸಿದ್ದಾರೆ. ಬರುವ ದಿನಗಳಲ್ಲಿ ನೆಮ್ಮದಿ ಜೀವನಕ್ಕೆ ಕಾಂಗ್ರೆಸ್ ಪಕ್ಷವನ್ನು 150ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಗೆಲ್ಲಿಸಲು ಜನರೇ ಸ್ವಯಂ ನಿರ್ಧಾರ ಕೈಗೊಂಡಿದ್ದಾರೆ ಎಂದರು.

ಜಿ.ಪಂ. ಮಾಜಿ ಅಧ್ಯಕ್ಷ ಆರ್.ಶಿವಕುಮಾರ್ ಮಾತನಾಡಿದರು.

ಮಾಜಿ ಸಚಿವ, ಕಾಂಗ್ರೆಸ್ ಅಭ್ಯರ್ಥಿ ಎಚ್.ಆಂಜನೇಯ ಮಾತನಾಡಿ, ಕಳಪೆ ರಸ್ತೆ ನಿರ್ಮಾಣ ಮಾಡಿದ್ದೆ ಎಂ.ಚಂದ್ರಪ್ಪನ ಸಾಧನೆ. ಭರಮಸಾಗರದಲ್ಲಿ ರಾಜವೀರ ಭರಮಣ್ಣನಾಯಕ ನಿರ್ಮಿಸಿದ ಕೆರೆಗೆ ಸಿರಿಗೆರೆ ಶ್ರೀಗಳ ಇಚ್ಛಾ ಶಕ್ತಿಯಿಂದ 44 ಕೆರೆಗಳಿಗೆ ನೀರುಣಿಸಲಾಯಿತು. ಶಾಸಕ ಚಂದ್ರಪ್ಪ 300 ಕೆರೆ ನಿರ್ಮಿಸಿದ್ದೇನೆ ಎಂದು ಸುಳ್ಳು ಹೇಳಿದ್ದು, ಆ ಕೆರೆಗಳು ಯಾವುವು ಎಂದು ಬಹಿರಂಗ ಪಡಿಸಲಿ ಎಂದು ಸವಾಲು ಹಾಕಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಎ.ವಿ. ಉಮಾಪತಿ, ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಆರ್.ಕೃಷ್ಣಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಪ್ರಕಾಶ್, ಬಂಜಾರ ಅಭಿವೃದ್ಧಿ ನಿಗಮದ ಮಾಜಿ ನಿರ್ದೇಶಕ ಅನಿಲ್, ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ಲಿಂಗವ್ವನಾಗ್ತಿಹಳ್ಳಿ ತಿಪ್ಪೇಸ್ವಾಮಿ, ರೈತ ಮುಖಂಡ ಶಶಿಪಾಟೀಲ್, ಎಸ್.ಟಿ.ನಿಗಮದ ಮಾಜಿ ಅಧ್ಯಕ್ಷ ಚೌಲಿಹಳ್ಳಿ ನಾಗೇಂದ್ರಪ್ಪ, ಶಮೀಮ್ ಪಾಷಾ ಮೊದಲಾದವರಿದ್ದರು.

# 40 ಭರವಸೆಗಳ ಪ್ರಣಾಳಿಕೆ ಬಿಡುಗಡೆ ಮಾಡಿದ ಪಕ್ಷೇತರ ಅಭ್ಯರ್ಥಿ ಎಂ.ಪಿ.ಲತಾ



## ಹರಪನಹಳ್ಳಿ

ಹರಪನಹಳ್ಳಿ, ಮೇ 4- ಕಾಂಗ್ರೆಸ್ ಟಿಕೆಟ್ ತಪ್ಪಿಸಿಕೊಂಡು ಹರಪನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಪಕ್ಷೇತರರಾಗಿ ಸ್ಪರ್ಧಿಸಿರುವ ಎಂ.ಪಿ.ಲತಾ ಮಲ್ಲಿಕಾರ್ಜುನ್ ಅವರು ಭರಪೂರ 40 ಭರವಸೆಗಳ ಸ್ವಾಭಿಮಾನದ ಪ್ರಣಾಳಿಕೆಯನ್ನು ಇಂದಿಲ್ಲಿ ತಮ್ಮ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಬಿಡುಗಡೆಗೊಳಿಸಿದರು.

**ಪ್ರಣಾಳಿಕೆ ಭರವಸೆಗಳು :** ಗರ್ಭಗುಡಿ ಬ್ರಿಡ್ಜ್-ಕಂ -ಬ್ಯಾರೇಜು ಯೋಜನೆ ಪೂರ್ಣಗೊಳಿಸುವುದು. 60 ಕೆರೆಗಳಿಗೆ ನದಿ ನೀರುಣಿಸುವ ಮಹತ್ವದ ಯೋಜನೆಯೊಂದಿಗೆ, ನಶಿಸಿ ಹೋಗಿರುವ ಇತರೆ ಕೆರೆಗಳನ್ನು ಪುನಃಶ್ಚೇತನಗೊಳಿಸಿ, ಅವುಗಳನ್ನು ಕೂಡ ನದಿ ನೀರು ಯೋಜನೆಗೆ ಸೇರಿಸುವುದು. ಕೊರತೆ ಇರುವ ಹಾಸ್ಟೆಲ್‌ಗಳ ನಿರ್ಮಾಣ, ಕುರಿ ಸಂತೆ ಸುಸಜ್ಜಿತ ಗೊಳಿಸುವುದು.

ಪಟ್ಟಣದಲ್ಲಿರುವ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿ ಪ್ರತ್ಯೇಕ ಹೆರಿಗೆ ಮತ್ತು ಮಕ್ಕಳ ಆಸ್ಪತ್ರೆ ನಿರ್ಮಿಸುವುದು. ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುವುದು. ಅನಿಶ್ಚಿತತೆಯಲ್ಲಿರುವ ಬಗರ್ ಹುಕ್ಕುಂ ಸಾಗುವಳಿಯ ಅರ್ಹ ಫಲಾನುಭವಿಗಳಿಗೆ ಜಮೀನಿನ ಪಟ್ಟಾ ನೀಡುವುದು.

ಯುವಕ-ಯುವತಿಯರಿಗೆ ಉದ್ಯೋಗ ಕಲ್ಪಿಸಲು ತಾಲ್ಲೂಕಿನಲ್ಲಿ ಸೋಲಾರ ಪ್ಲಾಂಟ್ ನಿರ್ಮಿಸುವುದು. ಗ್ರಾಮೀಣ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದು.ಹರಪನಹಳ್ಳಿ ಪುರಸಭೆಯನ್ನು ಮೇಲ್ದರ್ಜೆಗೇರಿಸುವುದು. ಒಳಚರಂಡಿ ಅವ್ಯವಸ್ಥೆ ಸರಿಪಡಿಸುವುದು. ಎಪಿಎಂಸಿ ಮೇಲ್ದರ್ಜೆಗೇರಿಸುವುದು.

ಇಂಜಿನಿಯರಿಂಗ್ ಕಾಲೇಜು ಸ್ಥಾಪನೆ ಮಾಡುವುದು. ಹರಪನಹಳ್ಳಿ ಪಟ್ಟಣದಲ್ಲಿ ಹೈಟೆಕ್ ಬಸ್ ನಿಲ್ದಾಣ ನಿರ್ಮಿಸುವುದು.

ತಾಲ್ಲೂಕಿನ ಪ್ರೇಕ್ಷಣೀಯ ಸ್ಥಳಗಳನ್ನು ಪ್ರವಾಸಿ ತಾಣಗಳನ್ನಾಗಿ ಅಭಿವೃದ್ಧಿ ಪಡಿಸುವುದು.

ಸುಸಜ್ಜಿತವಾದ ಒಳಾಂಗಣ, ಹೊರಾಂಗಣ ಕ್ರೀಡಾಂಗಣ ನಿರ್ಮಿಸಿ ಕ್ರೀಡಾ ಪಟುಗಳಿಗೆ ತರಬೇತಿಗೆ ಸಮರ್ಪಕ ವ್ಯವಸ್ಥೆ ಮಾಡುವುದು.

ಹರಪನಹಳ್ಳಿ ಪಟ್ಟಣದಲ್ಲಿ ಆಟೋ ರಿಕ್ಷಾ, ಟ್ಯಾಕ್ಸಿ ವಾಹನಗಳಿಗೆ ಶಾಶ್ವತ ನಿಲ್ದಾಣ ಕಲ್ಪಿಸಿ ಕೊಡುವುದು.

ಮುಖಂಡ ಹುಲಿಕಟ್ಟಿ ಚಂದ್ರಪ್ಪ, ಕಾನಹಳ್ಳಿ ಪರಮೇಶ್ವರಪ್ಪ, ನವರಂಗ, ಒ.ಮಹಾಂತೇಶ, ಎ.ಎಂ.ವಿಶ್ವನಾಥ ಇತರರು ಹಾಜರಿದ್ದರು.

# ಎಸ್ಸೆಸ್ ಅವರಿಗೆ ಶ್ರೀ ನಿರಂಜನ ಪ್ರಭು ದೇವರಿಂದ ಆಶೀರ್ವಾದ



ದಾವಣಗೆರೆ, ಮೇ 4- ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಶಾಮನೂರು ಶಿವಶಂಕರಪ್ಪ ಅವರಿಗೆ ಗರಗ-ನಾಗಲಾಪುರದ ಕುರುಗೋಡು ಶ್ರೀ ಕೊಟ್ಟೂರು ಸ್ವಾಮಿ ಶಾಖಾ ಮಠದ ಶ್ರೀ ನಿರಂಜನ ಪ್ರಭು ದೇವರು ಆಶೀರ್ವದಿಸಿದರು. ನಗರದ ಶ್ರೀ ಅನ್ನದಾನೇಶ್ವರ ಮಠದಲ್ಲಿ ನಿನ್ನೆ ನಡೆದ ಶಿವಾನುಭವ ಸಂಪದ ಕಾರ್ಯಕ್ರಮಕ್ಕೆ ಆಗಮಿಸಿದ್ದಾಗ ಎಸ್ಸೆಸ್ ಅವರನ್ನು ಶ್ರೀಗಳು ಆಶೀರ್ವದಿಸಿದರು.

ಈ ಸಂದರ್ಭದಲ್ಲಿ ಟ್ರಸ್ಟ್ ಅಧ್ಯಕ್ಷ ಅಥಣಿ ಎಸ್. ವೀರಣ್ಣ, ಕಾರ್ಯದರ್ಶಿ ಎನ್. ಅಡಿವೆಪ್ಪ, ಕೈಗಾರಿಕೋದ್ಯಮಿ ಎಸ್.ಎಸ್. ಗಣೇಶ್, ಪಾಲಿಕೆ ಮೇಯರ್ ವಿನಾಯಕ ಪೈಲ್ವಾನ್, ಪತ್ರಕರ್ತ ವೀರಪ್ಪ ಎಂ. ಬಾವಿ, ದಿನೇಶ್ ಕೆ ಶೆಟ್ಟಿ, ಡಿ.ಎನ್. ರೇವಣಸಿದ್ದಪ್ಪ, ಅಖಿಲ ಭಾರತ ವೀರಶೈವ ಮಹಾ ಸಭಾ ಕಾರ್ಯದರ್ಶಿ ರೇಣುಕಾ ಮತ್ತಿತರರು ಉಪಸ್ಥಿತರಿದ್ದರು.

# ಹೋರಾಟ ನಿರತ ಮಹಿಳಾ ಕುಸ್ತಿಪಟುಗಳಿಗೆ ಎಐಡಿಎಸ್ಓ ಬೆಂಬಲ

ದಾವಣಗೆರೆ, ಮೇ 4- ದೆಹಲಿಯ ಜಂತರ್ ಮಂತರ್ ನಲ್ಲಿ ಪ್ರತಿಭಟನೆ ನಡೆಸುತ್ತಿರುವ ದೇಶದ ಹೆಮ್ಮೆಯ ಮಹಿಳಾ ಕುಸ್ತಿಪಟುಗಳಿಗೆ ಎಐಡಿಎಸ್ಓ ಸಂಪೂರ್ಣ ಬೆಂಬಲ ಸೂಚಿಸಿದೆ.

ಬಿಜೆಪಿ ಶಾಸಕ ಹಾಗೂ ಡಬ್ಲ್ಯೂ ಎಫ್ಐ ಅಧ್ಯಕ್ಷ ಬ್ರಿಜ್ ಶರಣ್ ಸಿಂಗ್ ಅವರಿಂದ ಅನುಭವಿಸಿದ್ದ ಲೈಂಗಿಕ ಕಿರುಕುಳದ ವಿರುದ್ಧ ಮಹಿಳಾ ಕುಸ್ತಿಪಟುಗಳು ಬೀದಿಗಿಳಿದಿದ್ದು, ಹೋರಾಟ ಬೆಂಬಲಿಸಿ ದೆಹಲಿ ವಿವಿ ಮುಂಭಾಗ ಪ್ರತಿಭಟನೆಯಲ್ಲಿ ನಿರತರಾಗಿದ್ದ ಎಐಡಿಎಸ್ಓ ಕಾರ್ಯಕರ್ತರು ಮತ್ತು ಇತರೆ ವಿದ್ಯಾರ್ಥಿಗಳ ಮೇಲೆ ಲಾಠಿ ಪ್ರಹಾರ ನಡೆಸಿದ್ದಾರೆ. ಇದು ದೆಹಲಿ ಸರ್ಕಾರದ ಅಪ್ರಜಾತಾಂತ್ರಿಕ ಹಾಗೂ ಅತ್ಯಂತ ಕ್ರೂರ ದಾಳಿ ಎಂದು ಎಐಡಿಎಸ್ಓ ಜಿಲ್ಲಾ ಕಾರ್ಯದರ್ಶಿ ಪೂಜಾ ನಂದಿಹಳ್ಳಿ ತಿಳಿಸಿದ್ದಾರೆ.

ಡಬ್ಲ್ಯೂಎಫ್ಐ ಮುಖ್ಯಸ್ಥ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರನ್ನು ಕೂಡಲೇ ಅಧಿಕಾರದಿಂದ ವಜಾಗೊಳಿಸಿ, ಫೆಡರೇಶನ್‌ನಿಂದ ಉಚ್ಚಾಟನೆ ಮಾಡಬೇಕು.

ಲೈಂಗಿಕ ಕಿರುಕುಳದಲ್ಲಿ ಭಾಗಿಯಾಗಿರುವ ಅಪರಾಧಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕು. ಮಹಿಳೆಯರಿಗೆ ಸೂಕ್ತ ಭದ್ರತೆ ಖಾತ್ರಿ ಪಡಿಸಲು ಸರ್ಕಾರ ಮತ್ತು ಪೊಲೀಸ್ ಆಡಳಿತ ಬಿಗಿ ಕ್ರಮ ಕೈಗೊಳ್ಳಬೇಕೆಂದು ಸಂಘಟನೆ ಆಗ್ರಹಿಸಿದೆ.

# 24ನೇ ವಾರ್ಡಿನಲ್ಲಿ ಎಸ್ಸೆಸ್ಸೆಂ ಪ್ರಚಾರ




ದಾವಣಗೆರೆ, ಮೇ 4 - ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಸ್.ಎಸ್ ಮಲ್ಲಿಕಾರ್ಜುನ್ ಅವರು ನಗರದ 24ನೇ ವಾರ್ಡಿನ ಪಿ.ಜೆ.ಬಡಾವಣೆ ಹಾಗೂ ಎಂ.ಸಿ.ಸಿ. 'ಎ' ಬ್ಲಾಕ್‌ನಲ್ಲಿ ಚುನಾವಣಾ ಪ್ರಚಾರ ನಡೆಸಿದರು. ಕಾಂಗ್ರೆಸ್ ಮುಖಂಡ ಸುರಭಿ ಎಸ್. ಶಿವಮೂರ್ತಿ ಮತ್ತು ಇತರರು ಎಸ್ಸೆಸ್ಸೆಂ ಅವರಿಗೆ ಸಾಥ್ ನೀಡಿದರು.

# ಚುನಾವಣಾ ಮತ ಪ್ರಚಾರದಲ್ಲಿ ಮಕ್ಕಳ ಬಳಕೆ ಕಾನೂನು ಬಾಹಿರ

ದಾವಣಗೆರೆ, ಮೇ 4- ರಾಜ್ಯ ವಿಧಾನಸಭಾ ಸಾರ್ವತ್ರಿಕ ಚುನಾವಣೆ-2023 ನಡೆಯುತ್ತಿದ್ದು, 18 ವರ್ಷದೊಳಗಿನ ಅಪ್ರಾಪ್ತರು, ಕಿಶೋರ ಮಕ್ಕಳನ್ನು ಚುನಾವಣಾ ಮತ ಪ್ರಚಾರದಲ್ಲಿ ಯಾವುದೇ ಅಭ್ಯರ್ಥಿ, ಪಕ್ಷಗಳು ಬಳಕೆ ಮಾಡುವಂತಿಲ್ಲ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಶಿವಾನಂದ ಕಾಪಶಿ ತಿಳಿಸಿದ್ದಾರೆ. ಕೇಂದ್ರ ಸರ್ಕಾರವು ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕರ ಮಕ್ಕಳ ದುಡಿಮೆಯನ್ನು ನಿಯಂತ್ರಿಸಲು ಹಾಗೂ ನಿಷೇಧಿಸಲು ಬಾಲ ಕಾರ್ಮಿಕ ಮತ್ತು ಕಿಶೋರ ಕಾರ್ಮಿಕ ಕಾಯ್ದೆಯನ್ನು ಜಾರಿಗೆ ತಂದಿದ್ದು, ಈ ಕಾಯ್ದೆಯನ್ವಯ ಎಲ್ಲಾ ಉದ್ಯೋಗ ಮತ್ತು ಪ್ರಕ್ರಿಯೆಗಳಲ್ಲಿ 14 ವರ್ಷಕ್ಕಿಂತ ಕಡಿಮೆ ವಯೋಮಾನದ ಮಕ್ಕಳನ್ನು ಕೆಲಸಕ್ಕೆ ನಿಯೋಜಿಸಿಕೊಳ್ಳುವುದನ್ನು ಸಂಪೂರ್ಣವಾಗಿ ನಿಷೇಧಿಸಿದೆ. 14-18ರ ವಯಸ್ಸಿನ ಕಿಶೋರ ಕಾರ್ಮಿಕ ಮಕ್ಕಳನ್ನು ಉದ್ದಿಮೆಗಳಲ್ಲಿ ಕೆಲಸಕ್ಕೆ ಮಾಡುವುದನ್ನು ನಿಷೇಧಿಸಿದೆ. ಕಾಯ್ದೆ ಉಲ್ಲಂಘಿಸಿದಲ್ಲಿ ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕ ಕಾಯ್ದೆಯ ನ್ವಯ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿಗಳು ಎಚ್ಚರಿಸಿದ್ದಾರೆ.

# ಎಸ್.ಡಿ.ಪಿ.ಐ. ಕಪಿಮುಷ್ಠಿಯಲ್ಲಿ ಕಾಂಗ್ರೆಸ್



ಬೆಂಗಳೂರು, ಮೇ 4 - ಕಾಂಗ್ರೆಸ್ ಪಕ್ಷ ಎಸ್.ಡಿ.ಪಿ.ಐ ಹಾಗೂ ಪಿಎಫ್ಐ ಕಪಿಮುಷ್ಠಿಯಲ್ಲಿದ್ದು, ಅದರಿಂದ ಹೊರಬರಲು ಸಾಧ್ಯವಿಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಿಡಿಕಾರಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮತ್ತೊಬ್ಬರ ಭಾವನೆಗಳಿಗೆ ಧಕ್ಕೆ ಬರುವ ರೀತಿಯಲ್ಲಿ ಕಾಂಗ್ರೆಸ್ ವರ್ತಿಸುತ್ತಿದೆ. ಅವರ ಒತ್ತಡಕ್ಕೆ ಮಣಿಯುತ್ತಿದ್ದಾರೆ. ನಾವು ಎಸ್.ಡಿ.ಪಿ.ಐ, ಪಿಎಫ್ಐ ವಿರುದ್ಧ ಮಾತನಾಡಿದರೆ ಕಾಂಗ್ರೆಸ್ ನಾಯಕರಿಗೆ ತಳಮಳ ಶುರುವಾಗುತ್ತದೆ ಎಂದರು.

ಪಿ.ಎಫ್.ಐ. ನ ಇನ್ನೊಂದು ರೂಪವಾದ ಎಸ್.ಡಿ.ಪಿ.ಐ ಬೆಂಬಲವನ್ನು ಕಾಂಗ್ರೆಸ್ ಬಹಿರಂಗವಾಗಿ ಕೇಳಿತ್ತು. ಆದರೆ ಅವರು ಕೊಡುವುದಿಲ್ಲ ಎಂದಿದ್ದಾರೆ. ಕಾಂಗ್ರೆಸ್ ನ ಕಾಲದಲ್ಲಿ ಎಸ್.ಡಿ.ಪಿ.ಐ., ಪಿ.ಎಫ್.ಐ ಪ್ರಬಲವಾಗಿ ಬೆಳೆದಿದ್ದವು ಎಂದು ಆರೋಪಿಸಿದರು.

ಬಾಲವೇ ದೇಹವನ್ನು ಅಲುಗಾಡಿಸುವ ಸ್ಥಿತಿ ಇದೆ. ಎಸ್.ಡಿ.ಪಿ.ಐ ಬಿಜೆಪಿಯ ಬಿ. ಟೀಂ ಅಲ್ಲ. ಬಿ ಟೀಂ ಆಗಿದ್ದರೆ ನಾವು ಪಿ.ಎಫ್.ಐ ಬ್ಯಾನ್ ಮಾಡ್ತಿದ್ದೆವಾ? ತಾವು ಮಾಡಿದ ತಪ್ಪನ್ನು ಮುಚ್ಚಲು ಈ ರೀತಿಯ ಆರೋಪ ಮಾಡುತ್ತಿದ್ದಾರೆ ಎಂದರು. ಭಜರಂಗ ದಳಕ್ಕೆ ಆಂಜನೇಯನಿಗೂ ಏನು ಸಂಬಂಧ? ಎಂಬ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಪ್ರಶ್ನೆಗೆ ಉತ್ತರಿಸಿ, ರಾಮನಿಗೂ-ಹನುಮನಿಗೂ ಏನು ಸಂಬಂಧ ಇದೆಯೋ ಅದೇ ಸಂಬಂಧ. ಆಂಜನೇಯನಿಗೂ ಭಜರಂಗ ದಳಕ್ಕಿದೆ. ಇದನ್ನು ಕಾಂಗ್ರೆಸ್ ನವರು ಅರ್ಥ ಮಾಡಿಕೊಳ್ಳಬೇಕು. ಜನರ ಭಾವನೆಗಳಿಗೆ ಧಕ್ಕೆ ಬರೋ ರೀತಿಯಲ್ಲಿ ಮಾತನಾಡೋದು ಸರಿಯಲ್ಲ ಎಂದರು.

ನಾವು ನಮ್ಮ ಕಾರ್ಯಕ್ರಮಗಳ ಆಧಾರದಲ್ಲಿ ಚುನಾವಣೆ ಎದುರಿಸಿತ್ತಿದ್ದೇವೆ. ಕಾಂಗ್ರೆಸ್‌ನವರು ಭರವಸೆಗಳ ಮೇಲೆ ಚುನಾವಣೆ ಎದುರಿಸುತ್ತಿದ್ದಾರೆ. ಅನವಶ್ಯಕವಾಗಿ ಕೆದಕಿ ಕೆದಕಿ ಚುನಾವಣೆಯ ವಾತಾವರಣವನ್ನು ಜಾತಿ, ಧರ್ಮ, ಕೋಮು ಭಾವನೆಗಳ ಮೂಲಕ ಕೆರಳಿಸೋದು ಸರಿಯಲ್ಲ. ಇದು ಕಾಂಗ್ರೆಸ್ ನ ತುಷ್ಟೀಕರಣ ರಾಜಕಾರಣ ತೋರ್ಪಡಿಸುತ್ತದೆ ಎಂದರು.

# ಚುನಾವಣೆ : ಮತದಾನ ಅಧಿಕಾರಿ, ಸಿಬ್ಬಂದಿಗಳಿಗೆ ಇಂದು ತರಬೇತಿ : ಜಿಲ್ಲಾಧಿಕಾರಿ ಕಾಪಶಿ

ಸಾರ್ವತ್ರಿಕ ವಿಧಾನಸಭಾ ಚುನಾವಣೆಗೆ ಇದೇ ದಿನಾಂಕ 10 ರಂದು ನಡೆಯುವ ಮತದಾನಕ್ಕೆ ನಿಯೋಜಿಸಿರುವ ಸಿಬ್ಬಂದಿಗಳಿಗೆ ಇಂದು ತರಬೇತಿ ಹಮ್ಮಿಕೊಳ್ಳಲಾಗಿದೆ. ನಿಯೋಜಿತ ಸಿಬ್ಬಂದಿಗಳು ಅವರ ಕೇಂದ್ರ ಸ್ಥಾನದಿಂದ ತರಬೇತಿಗೆ ನಿಯೋಜಿತ ತಾಲ್ಲೂಕುಗಳಿಗೆ ತೆರಳಲು ಅಂದು ಬೆಳಗ್ಗೆ 7 ಗಂಟೆಯಿಂದ ಆಯಾ ತಾಲ್ಲೂಕುಗಳಿಂದ ಬಸ್ ವ್ಯವಸ್ಥೆ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಶಿವಾನಂದ ಕಾಪಶಿ ತಿಳಿಸಿದ್ದಾರೆ.

ದಾವಣಗೆರೆ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಿಂದ ನಿಯೋಜಿತ ಸ್ಥಳಗಳಿಗೆ ತೆರಳಲು ಬಸ್ ವ್ಯವಸ್ಥೆ ಮಾಡಲಾಗಿದೆ ಎಂದು ಅವರು ವಿವರಿಸಿದ್ದಾರೆ.

# 100ಕ್ಕೂ ಹೆಚ್ಚು ಕಾಂಗ್ರೆಸ್ ಕಾರ್ಯಕರ್ತರು ಬಿಜೆಪಿಗೆ ಸೇರ್ಪಡೆ



ದಾವಣಗೆರೆ, ಮೇ 4- ಉತ್ತರ ವಿಧಾನ ಸಭಾ ಕ್ಷೇತ್ರದ 31ನೇ ವಾರ್ಡ್ ನ 100ಕ್ಕೂ ಹೆಚ್ಚು ಕಾರ್ಯಕರ್ತರು ಕಾಂಗ್ರೆಸ್ ಪಕ್ಷ ತೊರೆದು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅಭಿವೃದ್ಧಿ ಕಾರ್ಯಗಳನ್ನು ಮೆಚ್ಚಿ ಬಿಜೆಪಿಗೆ ಅಧಿಕೃತವಾಗಿ ಸೇರ್ಪಡೆಗೊಂಡರು.

31ನೇ ವಾರ್ಡ್ ನಲ್ಲಿ ಉತ್ತರ ವಿಧಾನ ಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ಅವರು ಮತ ಪ್ರಚಾರದ ವೇಳೆ ಅವರ ಸಮ್ಮುಖದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಬಿಜೆಪಿಗೆ ಸೇರ್ಪಡೆಗೊಂಡು ನಾಗರಾಜ್ ಲೋಕಿಕೆರೆ ಅವರಿಗೆ ಬೆಂಬಲ ಸೂಚಿಸಿದರು.

# ಬಂಡಾಯ ಕಾರ್ಯಕರ್ತರ ಉಚ್ಚಾಟನೆ



## ಕೆಪಿಸಿಸಿ ಸದಸ್ಯ ದುಗ್ಗಪ್ಪ ಆಕ್ರೋಶ

ದಾವಣಗೆರೆ, ಮೇ 4- ಕಾಂಗ್ರೆಸ್‌ನಲ್ಲಿ ಬಂಡಾಯವೆದ್ದ ಕಾರ್ಯಕರ್ತರನ್ನು ಪಕ್ಷದಿಂದಲೇ ಉಚ್ಚಾಟನೆ ಮಾಡುವುದಾಗಿ ಹೇಳಿಕೆ ನೀಡಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿರುವ ಕೆಪಿಸಿಸಿ ಸದಸ್ಯ ಹೆಚ್. ದುಗ್ಗಪ್ಪ ಕಾರ್ಯಕರ್ತರ ಶ್ರಮವಿಲ್ಲದೇ ಇವರಿಗೆ ಅಧಿಕಾರ, ಸ್ಥಾನಮಾನಗಳು ಸಿಕ್ಕವೇ? ಎಂದು ಪ್ರಶ್ನಿಸಿದ್ದಾರೆ.

ಬಂಡಾಯ ಎದ್ದಿರುವವರನ್ನು ಕಾಂಗ್ರೆಸ್‌ನಿಂದ ಉಚ್ಚಾಟನೆ ಮಾಡಿರುವುದಾಗಿ ಹೇಳುತ್ತಿರುವುದು ಎಷ್ಟು ಸರಿ? ಇದು ವರಿಷ್ಠರು ಮಾತ್ರ ಕಟ್ಟಿ ಬೆಳೆಸಿದ ಪಕ್ಷವಲ್ಲ, ಕಾಂಗ್ರೆಸ್ ಇನ್ನೂ ಉಳಿದಿದೆ ಎಂದರೆ ಅದಕ್ಕೆ ನಿಷ್ಠಾವಂತ ಕಾರ್ಯಕರ್ತರ ಪರಿಶ್ರಮವೇ ಕಾರಣ ಎಂದಿದ್ದಾರೆ.

ಮಾಜಿ ಮುಖ್ಯಮಂತ್ರಿಗಳಾದ ದಿ. ನಿಜಲಿಂಗಪ್ಪ, ದೇವರಾಜ ಅರಸು, ದಿ. ಆರ್. ಗುಂಡೂರಾವ್, ವೀರೇಂದ್ರ ಪಾಟೀಲ್, ಬಂಗಾರಪ್ಪ, ಧರ್ಮಸಿಂಗ್, ವೀರಪ್ಪ ಮೊಯ್ಲಿ, ಎಸ್.ಎಂ.ಕೃಷ್ಣ ಇವರೆಲ್ಲಾ ಪಕ್ಷದ ಕಾರ್ಯಕರ್ತರನ್ನು ತಮ್ಮ ಮಕ್ಕಳಂತೆ ನೋಡಿಕೊಳ್ಳುತ್ತಿದ್ದರು. ನಿಷ್ಠಾವಂತ ಕಾರ್ಯಕರ್ತರನ್ನು ಗುರುತಿಸಿ ಸ್ಥಾನಮಾನ ನೀಡುತ್ತಿದ್ದರು. ಜವಾಬ್ದಾರಿಗಳನ್ನು ವಹಿಸುತ್ತಿದ್ದರು. ಉತ್ಸಾಹ ತುಂಬಿ ಹುರಿದುಂಬಿಸುತ್ತಿದ್ದರು. ಇವರೆಲ್ಲಾ ಎಂದಿಗೂ ಕಾರ್ಯಕರ್ತರನ್ನು ಕೇವಲವಾಗಿ ಕಾಣಲಿಲ್ಲ, ನಡೆಸಿಕೊಳ್ಳಲಿಲ್ಲ. ಆದ್ದರಿಂದಲೇ ಪಕ್ಷ ನಾಲ್ಕೈದು ದಶಕಗಳ ಕಾಲ ಅಧಿಕಾರದಲ್ಲಿತ್ತು. ಈಗ ವಂಶ ರಾಜಕಾರಣ ಮಾಡಲಾಗುತ್ತಿದೆ ಎಂದು ಅವರು ಅಸಮಾಧಾನ ಹೊರಹಾಕಿದ್ದಾರೆ.


**ಕರ್ನಾಟಕ ವಿಧಾನಸಭಾ ಚುನಾವಣೆ - 2023**
**ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ - 107,**
**ಪಕ್ಷೇತರ ಅಭ್ಯರ್ಥಿ**

ಆತ್ಮೀಯ ಬಂಧುಗಳೇ, ದಿನಾಂಕ 10.5.2023ನೇ ಬುಧವಾರದಂದು ನಡೆಯಲಿರುವ ದಾವಣಗೆರೆ ದಕ್ಷಿಣ ವಿಧಾನಸಭಾ ಚುನಾವಣೆಗೆ ಪಕ್ಷೇತರ ಅಭ್ಯರ್ಥಿಯಾಗಿ ನಾನು ಸ್ಪರ್ಧಿಸಿರುತ್ತೇನೆ. ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಲು ಕಂಕಣ ಬದ್ಧನಾಗಿರುತ್ತೇನೆ. ನನ್ನ ಗುರುತಾದ ಇಟ್ಟಿಗೆ ಗುರುತಿಗೆ ತಮ್ಮ ಅಮೂಲ್ಯವಾದ ನೀಡುವುದರ ಮೂಲಕ ನನ್ನನ್ನು ಪ್ರಚಂಡ ಬಹುಮತದಿಂದ ಜಯಶೀಲನನ್ನಾಗಿಸಿ ಕ್ಷೇತ್ರದ ಅಭಿವೃದ್ಧಿಗಾಗಿ ಅವಕಾಶ ಕಲ್ಪಿಸಿಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.



| ಕ್ರ.ಸಂ. | ಅಭ್ಯರ್ಥಿಯ ಹೆಸರು | ಚಿಹ್ನೆ | ಮತದಾನ |
|---|---|---|---|
| 11 | ಈರಣ್ಣ | | |

ದಿನಾಂಕ : 10.5.2023ನೇ ಬುಧವಾರ
ಸಮಯ : ಬೆಳಿಗ್ಗೆ 7 ರಿಂದ ಸಂಜೆ 6ರವರೆಗೆ
ತಮ್ಮ ಸೇವಾಂಕ್ಷಿ :
ಈರಣ್ಣ S/o ಮಲ್ಲೇಶಪ್ಪ

ಇಟ್ಟಿಗೆ' ಗುರುತಿಗೆ ನಿಮ್ಮ ಮತ – ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ಹಿತ



**VALIANT AMRUT INDIA INFRA LLP**
Reg. Office : No. 20 SRK Garden, Jayanagar,
Bangalore, Karnataka-560041 India
LLPIN : AAU-4668
E-mail : hemalatha.sujai@gamil.com

**ನಮೂನೆ ಸಂಖ್ಯೆ URC-2**
**ಅಧ್ಯಾಯ XXIರ ಭಾಗ 1ರ ಅಡಿಯಲ್ಲಿ ನೋಂದಣಿ ಕುರಿತು ಸೂಚನೆ ನೀಡುವ ಜಾಹೀರಾತು**
**(ವಿಭಾಗ 374 (b)-ಕಂಪನಿಗಳ ಕಾಯ್ದೆ, 2013 ಮತ್ತು 4 (1) ಕಂಪನಿಗಳ (ನೋಂದಣಿ ಮಾಡಲು ಅಧಿಕಾರ) ನಿಯಮಗಳು, 2014)**

01) ಕಂಪನಿ ಕಾಯಿದೆ. 2013ರ ವಿಭಾಗ 366 ರ ಉಪ-ವಿಭಾಗ (2) ರ ಅನುಸಾರವಾಗಿ, ದಿ ಸೆಂಟ್ರಲ್ ರಿಜಿಸ್ಟ್ರೇಶನ್ ಸೆಂಟರ್ (CRC) , ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಕಾರ್ಪೊರೇಟ್ ಅಫೇರ್ಸ್ (IICA)ನಲ್ಲಿ ರಿಜಿಸ್ಟ್ರಾರ್‌ಗೆ ಅರ್ಜಿಯನ್ನು ಮಾಡಲಾಗಿದೆ ಎಂದು ಈ ಮೂಲಕ ಸೂಚನೆ ನೀಡಲಾಗಿದೆ). ಪ್ಲಾಟ್ ಸಂಖ್ಯೆ, 6,7,8, ಸೆಕ್ಟರ್ 5, IMT ಮನೇಸರ್, ಜಿಲ್ಲೆ ಗುರ್ಗಾಂವ್ (ಹರಿಯಾಣ), ಪಿನ್ ಕೋಡ್-122050. ವ್ಯಾಲಿಯಂಟ್ ಅಮೃತ್ ಇಂಡಿಯಾ ಇನ್ಫ್ರಾ LLP, ಒಂದು LLP ಒಂದು ವ್ಯಾಪಾರ ಘಟಕದ ಅಧ್ಯಾಯ XXIನ ಭಾಗ 1ರ ಅಡಿಯಲ್ಲಿ ನೋಂದಾಯಿಸಬಹುದು ಕಂಪನಿಗಳ ಕಾಯಿದೆ 2013, ಷೇರುಗಳಿಂದ ಸೀಮಿತವಾದ ಕಂಪನಿಯಾಗಿ.

02) ಕಂಪನಿಯ ಪ್ರಮುಖ ವಸ್ತುಗಳು ಈ ಕೆಳಗಿನಂತಿವೆ :
ಎಲ್ಲಾ ರೀತಿಯ ಮತ್ತು ವಿವರಣೆ ಮತ್ತು ಹಕ್ಕು, ಶೀರ್ಷಿಕೆ ಮತ್ತು ಆಸಕ್ತಿಯ ಯಾವುದೇ ಸ್ಥಿರ ಅಥವಾ ಚರ ಆಸ್ತಿಯನ್ನು ಖರೀದಿಸುವ, ಖರೀದಿಸುವ ಅಥವಾ ಸ್ವಾಧೀನಪಡಿಸಿಕೊಳ್ಳುವ ವ್ಯವಹಾರವನ್ನು ಮುಂದುವರಿಸಲು ಮತ್ತು ಸ್ಥಿರ ಮತ್ತು ಚಲಿಸಬಲ್ಲ ಆಸ್ತಿಗಳ ಬಾಡಿಗೆ, ಅವಕಾಶ ಅಥವಾ ಇತರೆ ರೀತಿಯ ವ್ಯವಸ್ಥೆಗಳನ್ನು ಕೈಗೊಳ್ಳಲು ಎಲ್ಲಾ ರೀತಿಯ ಉಪಕರಣಗಳು ಮತ್ತು ವಿವರಣೆ, ಕಟ್ಟಡ ಉಪಕರಣಗಳು, ನಿರ್ಮಾಣ ಉಪಕರಣಗಳು ಮತ್ತು ಮನೆಗಳು, ಕಟ್ಟಡ, ಮಾರುಕಟ್ಟೆ, ಅಂಗಡಿಗಳು, ಕೈಗಾರಿಕಾ ಶೆಡ್‌ಗಳು, ಫ್ಲಾಟ್‌ಗಳು, ವಾಹನಗಳು, ಸಸ್ಯಗಳು, ಯಂತ್ರೋಪಕರಣಗಳಿಗೆ ಸೀಮಿತವಾಗಿಲ್ಲ.

03) ಪ್ರಸ್ತಾವಿತ ಕಂಪನಿಯ ಕರಡು ಜ್ಞಾಪಕ ಪತ್ರ ಮತ್ತು ಲೇಖನಗಳ ಪ್ರತಿಯನ್ನು 20 SRK ಗಾರ್ಡನ್, ಜಯನಗರ, ಬೆಂಗಳೂರು-560021 ಕಛೇರಿಯಲ್ಲಿ ಪರಿಶೀಲಿಸಬಹುದು.

04) ಈ ಅರ್ಜಿಯನ್ನು ಆಕ್ಷೇಪಿಸುವ ಯಾವುದೇ ವ್ಯಕ್ತಿಯು ತಮ್ಮ ಆಕ್ಷೇಪಣೆಯನ್ನು ಕೇಂದ್ರೀಯ ನೋಂದಣಿ ಕೇಂದ್ರ (CRC), ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಕಾರ್ಪೊರೇಟ್ ಅಫೇರ್ಸ್ (IICA), ಪ್ಲಾಟ್ ಸಂಖ್ಯೆ, 6,7,8, ಸೆಕ್ಟರ್ 5ನಲ್ಲಿ ರಿಜಿಸ್ಟ್ರಾರ್‌ಗೆ ಲಿಖಿತವಾಗಿ ತಿಳಿಸಬಹುದು ಎಂದು ಈ ಮೂಲಕ ಸೂಚನೆ ನೀಡಲಾಗಿದೆ. IMT ಮಾನೇಸರ್, ಜಿಲ್ಲೆ ಗುರ್ಗಾಂವ್ (ಹರಿಯಾಣ), ಪಿನ್ ಕೋಡ್-122050., ಈ ಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ ಇಪ್ಪತ್ತೊಂದು ದಿನಗಳಲ್ಲಿ, ಕಂಪನಿಗೆ ಅದರ ನೋಂದಾಯಿತ ಕಛೇರಿಯಲ್ಲಿ ಪ್ರತಿಯೊಂದಿಗೆ.

ಅರ್ಜಿದಾರರ ಹೆಸರುಗಳು
1) ರಾಮದಾಸ್ ರಾಮಕೃಷ್ಣನ್ ಅಯ್ಯರ್
2) ನಾಯ್ದು ಅಮೃತೇಶ್ ರೆಡ್ಡಿ

ದಿನಾಂಕ 05 ಮೇ, 2023


# 15ರಿಂದ ನಗರದಲ್ಲಿ ಬೇಸಿಗೆ ಶಿಬಿರ

ದಾವಣಗೆರೆ, ಮೇ 4 - ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಬಾಲ ಭವನದ ವತಿಯಿಂದ ಬೇಸಿಗೆ ಶಿಬಿರವು ಇದೇ ದಿನಾಂಕ 15 ರಿಂದ 29 ರ ವರೆಗೆ ಜೆ.ಎಚ್. ಪಟೇಲ್ ಬಡಾವಣೆಯ ಬಾಲಭವನದಲ್ಲಿ ನಡೆಯಲಿದೆ.

ಮೇ 5 ರಿಂದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕರ ಕಚೇರಿಯಲ್ಲಿ ಇದೇ ದಿನಾಂಕ 12 ರ ಒಳಗಾಗಿ ನೊಂದಾಯಿಸಿಕೊಳ್ಳಬೇಕು. 6 ರಿಂದ 16 ವರ್ಷದ ಮಕ್ಕಳು ಶಿಬಿರದಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕುವೆಂಪು ನಗರ, 14 ನೇ ಮುಖ್ಯ ರಸ್ತೆ, ಎಂ.ಸಿ.ಸಿ. 'ಬಿ' ಬ್ಲಾಕ್ ದಾವಣಗೆರೆ ಇಲ್ಲಿಗೆ ಸಂಪರ್ಕಿಸಬಹುದೆಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕರಾದ ವಾಸಂತಿ ಉಪ್ಪಾರ್ ತಿಳಿಸಿದ್ದಾರೆ.

# ನಗರದಲ್ಲಿ ಸ್ಪೋರ್ಟ್ಸ್, ಫಿಟ್‌ನೆಸ್ ಕ್ಯಾಂಪ್

ದಾವಣಗೆರೆ, ಮೇ 4- ಸೇಂಟ್ ಜಾನ್ಸ್ ಇಂಗ್ಲಿಷ್ ಮೀಡಿಯಂ ಸ್ಕೂಲ್ ಮತ್ತು ವಿದ್ವಾನ್ ಟೆಕ್ವಾಂಡೋ ಅಕಾಡೆಮಿ ಇವರುಗಳ ಸಂಯುಕ್ತಾಶ್ರಯದಲ್ಲಿ 4 ವರ್ಷಕ್ಕೂ ಮೇಲ್ಪಟ್ಟ ಹುಡುಗರಿಗೆ ಸ್ಪೋರ್ಟ್ಸ್, ಫಿಟ್‌ನೆಸ್ ಅಂಡ್ ಸೆಲ್ಫ್ ಡಿಫೆನ್ಸ್ ಟ್ರೈನಿಂಗ್ ಕ್ಯಾಂಪ್ ಕಾರ್ಯಕ್ರಮವನ್ನು ಇಂದಿನಿಂದ ಇದೇ ದಿನಾಂಕ 30 ರವರೆಗೆ ಪ್ರತಿ ದಿನ ಸಂಜೆ 5 ರಿಂದ 6ರವರೆಗೆ ನಗರದ ಶಿವಕುಮಾರಸ್ವಾಮಿ ಬಡಾವಣೆಯಲ್ಲಿರುವ ಸೇಂಟ್ ಜಾನ್ಸ್ ಇಂಗ್ಲಿಷ್ ಮೀಡಿಯಂ ಸ್ಕೂಲ್‌ನಲ್ಲಿ ಹಮ್ಮಿಕೊಳ್ಳಲಾಗಿದೆ. ವಿವರಗಳಿಗೆ ಮೊಬೈಲ್ ಸಂಖ್ಯೆ 86602 88828 ಗೆ ಸಂಪರ್ಕಿಸಿ.

# ಮತ್ತೊಮ್ಮೆ ಗೆದ್ದರೆ ತಾಲ್ಲೂಕಿನಲ್ಲಿ ಇಂಜಿನಿಯರಿಂಗ್ ಕಾಲೇಜು, ಕಾರ್ಖಾನೆಗಳನ್ನು ಸ್ಥಾಪಿಸುವ ಗುರಿ



## ಹರಪನಹಳ್ಳಿ ಬಿಜೆಪಿ ಅಭ್ಯರ್ಥಿ ಶಾಸಕ ಕರುಣಾಕರ ರೆಡ್ಡಿ ಭರವಸೆ

ಹರಪನಹಳ್ಳಿ, ಮೇ 4 - ಕ್ಷೇತ್ರಕ್ಕೆ ಸಾವಿರಾರು ಕೋಟಿ ಅನುದಾನ ತರುವ ಮೂಲಕ ಹಿಂದುಳಿದ ಹರಪನಹಳ್ಳಿ ತಾಲ್ಲೂಕನ್ನು ಅಭಿವೃದ್ಧಿ ಮಾಡಿದ್ದೇನೆ. ಮತ್ತೊಮ್ಮೆ ಗೆದ್ದರೆ ತಾಲ್ಲೂಕಿನಲ್ಲಿ ಇಂಜಿನಿಯರಿಂಗ್ ಕಾಲೇಜು, ಕಾರ್ಖಾನೆಗಳನ್ನು ಸ್ಥಾಪಿಸುವ ಗುರಿ ಹೊಂದಿದ್ದೇನೆ ಎಂದು ಬಿಜೆಪಿ ಅಭ್ಯರ್ಥಿ ಶಾಸಕ ಜಿ. ಕರುಣಾಕರ ರೆಡ್ಡಿ ಹೇಳಿದರು.

ತಾಲ್ಲೂಕಿನ ನಿಟ್ಟೂರು, ತಾವರಗೊಂದಿ, ತೆಲಗಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಕೈಗೊಂಡಿದ್ದ ಚುನಾವಣಾ ಪ್ರಚಾರದಲ್ಲಿ ಮಾತನಾಡಿದ ಅವರು ತಾಲೂಕಿನಲ್ಲಿ ಸಿಸಿ ರಸ್ತೆ, ಚರಂಡಿ, ಕುಡಿಯುವ ನೀರು, ಶಾಲಾ ಕೊಠಡಿ, ಡಿಗ್ರಿ ಕಾಲೇಜ್, ಡಿಪ್ಲೋಮಾ ಕಾಲೇಜ್, ಹಾಸ್ಟೆಲ್, ಸಮುದಾಯ ಭವನಗಳನ್ನು ನಿರ್ಮಾಣ ಮಾಡುವ ಮೂಲಕ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಿದ್ದೇನೆ ಎಂದರು.

ನನ್ನ ಕನಸಿನ ಮಹತ್ವದ ಯೋಜನೆಯಾದ ತಾಲ್ಲೂಕಿನ 60 ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಕಾಮಗಾರಿ ಪೂರ್ಣಗೊಳಿಸಿ ಚಾಲನೆ ನೀಡಿದ್ದೇನೆ. ಆದರೆ ಕಾಂಗ್ರೆಸ್ ನವರು ಹಿಂದೆ ಐದು ವರ್ಷ ಅಧಿಕಾರದಲ್ಲಿದ್ದರೂ ಕೆರೆಗೆ ನೀರು ತುಂಬಿಸಲಿಲ್ಲ ಎಂದು ಕಾಂಗ್ರೆಸ್ ವಿರುದ್ಧ ಹರಿಹಾಯ್ದರು.

ಈ ಸಂದರ್ಭದಲ್ಲಿ ಮುಖಂಡರಾದ ಬಾಗಳಿ ಕೊಟ್ರೇಶಪ್ಪ, ಆರ್.ಲೋಕೇಶ್, ಯಡಿಹಳ್ಳಿ ಶೇಖಪ್ಪ, ರಾಜು ಚನ್ನಗಿರಿ ಭೀಮಪ್ಪ, ಇ. ಗಂಗಾಧರ. ಇ.ಅಂಜಿನಪ್ಪ, ಸೇರಿದಂತೆ ಇತರರು ಇದ್ದರು.

# ಸುಗಮ ಸಂಗೀತ ನಿತ್ಯನೂತನವಾಗಲಿ

## 'ನಿನಾದ-8' ಸಮಾರೋಪ ಸಮಾರಂಭದಲ್ಲಿ ನಗರ ಶ್ರೀನಿವಾಸ ಉಡುಪ



ದಾವಣಗೆರೆ, ಮೇ 4- ಕರ್ನಾಟಕದಲ್ಲಿ ಸುಗಮ ಸಂಗೀತ ಕ್ಷೇತ್ರಕ್ಕೆ ತನ್ನದೇ ಆದ ವಿಶೇಷ ಸ್ಥಾನಮಾನವಿದ್ದು, ಶ್ರೋತೃಗಳ ಮನ ಮುಟ್ಟುವ ಕೆಲಸವಾಗಬೇಕಿದೆ. ಸುಗಮ ಸಂಗೀತ ನಿತ್ಯನೂತನವಾಗಬೇಕು ಎಂದು ಕರ್ನಾಟಕ ಸುಗಮ ಸಂಗೀತ ಪರಿಷತ್ತು ಪ್ರಧಾನ ಕಾರ್ಯದರ್ಶಿ ನಗರ ಶ್ರೀನಿವಾಸ ಉಡುಪ ಆಶಯ ವ್ಯಕ್ತಪಡಿಸಿದರು.

ಸುಶ್ರಾವ್ಯ ಸಂಗೀತ ವಿದ್ಯಾಲಯ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಹಯೋಗದಲ್ಲಿ ನಗರದ ಕುವೆಂಪು ಕನ್ನಡ ಭವನದಲ್ಲಿ ಹಮ್ಮಿಕೊಂಡಿದ್ದ 8 ನೇ ಗೀತ ಗಾಯನ ತರಬೇತಿ ಶಿಬಿರ 'ನಿನಾದ-8' ಕನ್ನಡದ ಖ್ಯಾತ ಕವಿ ಡಾ.ಹೆಚ್.ಎಸ್. ವೆಂಕಟೇಶಮೂರ್ತಿ ಅವರ ಗೀತೆಗಳ ಗಾಯನ ತರಬೇತಿ ಶಿಬಿರದ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸುಗಮ ಸಂಗೀತದಿಂದ ಮನಸ್ಸು ಅರಳುವ ಜೊತೆಗೆ, ಮನಸ್ಸಿಗೆ ಆಹ್ಲಾದವನ್ನು ಉಂಟು ಮಾಡುತ್ತದೆ. ಮಕ್ಕಳಲ್ಲಿ ಸುಗಮ ಸಂಗೀತದ ಬಗ್ಗೆ ಆಸಕ್ತಿ ಮೂಡಿಸುತ್ತಿರುವ ಇಂತಹ ಶಿಬಿರಗಳು ಅತ್ಯಂತ ಉಪಯುಕ್ತ. ಸುಶ್ರಾವ್ಯ ಸಂಗೀತ ವಿದ್ಯಾಲಯದ ಯಶಾ ಮತ್ತು ದಿನೇಶ್ ಅವರ ಪರಿಶ್ರಮದಿಂದ ಶಿಬಿರ ಯಶಸ್ವಿಯಾಗಿ ನಡೆದಿದೆ ಎಂದು ಪ್ರಶಂಸಿಸಿದರು.

ಖ್ಯಾತ ಸಂಗೀತ ನಿರ್ದೇಶಕ ಉಪಾಸನಾ ಮೋಹನ್ ಮಾತನಾಡಿ, ಮಕ್ಕಳ ಎದೆಯೊಳಗೆ ಭಾವಗೀತೆಯ ಹಣತೆ ಹಚ್ಚುವ ಕೆಲಸವನ್ನು ಇಂತಹ ಶಿಬಿರಗಳಿಂದ ಮಾಡಲು ಸಾಧ್ಯವಿದೆ. ಭಾವಗೀತೆಗಳ ಬಗ್ಗೆ ಮಕ್ಕಳಲ್ಲಿ ಅಭಿರುಚಿ ಮೂಡಿಸುವ ಕೆಲಸ ಮಾಡುವ ಹೊಣೆಗಾರಿಕೆ ಹಿರಿಯರದ್ದು ಎಂದರು.

ಸುಗಮ ಸಂಗೀತಕ್ಕೆ ಸಂಬಂಧಪಟ್ಟ 500 ಹಾಡುಗಳು ಮತ್ತು ಅದಕ್ಕೆ ಸಂಬಂಧಪಟ್ಟ ಕ್ಯೂಆರ್ ಕೋಡ್ ಇರುವ ಪುಸ್ತಕ ಹೊರ ತಂದಿರುವುದು ಇದೇ ಪ್ರಥಮವಾಗಿದೆ. ನನ್ನದು ಪುಟ್ಟ ಪ್ರಯತ್ನ ಎಂದು ಹೇಳಿಕೊಂಡರು.

ಪಿಯುಸಿಯಲ್ಲಿ ಶೇ. 98.3 ರಷ್ಟು ಫಲಿತಾಂಶ ಪಡೆದು ರಾಜ್ಯಕ್ಕೆ ಏಳನೇ ಸ್ಥಾನ, ಜಿಲ್ಲೆಯಲ್ಲಿ ಗ್ರಾಮಾಂತರ ವಿಭಾಗದಲ್ಲಿ ಪ್ರಥಮ, ನಗರ ಮಟ್ಟದಲ್ಲಿ ದ್ವಿತೀಯ ಸ್ಥಾನ ಪಡೆದ ಅನ್‌ಮೋಲ್ ಪಿಯು ಕಾಲೇಜಿನ ಸಿರಿ ಯಶಾ ದಿನೇಶ್ ರನ್ನು ಅಭಿನಂದಿಸಲಾಯಿತು.

ಸಂಗೀತ ದಿಗ್ಗಜರಾದ ನಗರ ಶ್ರೀನಿವಾಸ ಉಡುಪ, ಉಪಾಸನಾ ಮೋಹನ್ ಹಾಗೂ ಕಸಾಪ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಅವರನ್ನು ಸನ್ಮಾನಿಸಲಾಯಿತು.

ಅನ್‌ಮೋಲ್ ವಿದ್ಯಾಸಂಸ್ಥೆ ಸಂಸ್ಥಾಪಕ ಅಧ್ಯಕ್ಷ ಸಿ.ಜಿ. ದಿನೇಶ್, ಕಸಾಪ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಗೌರವ ಕಾರ್ಯದರ್ಶಿ ಬಿ. ದಿಳ್ಳೆಪ್ಪ, ಶ್ರೀಮತಿ ಯಶಾ ದಿನೇಶ್, ಸುಮಾ, ಸುಜಾತ, ಚಂದ್ರಿಕಾ ಮೋಹನ್, ವಿಜಯ ಮತ್ತಿತರರು ಉಪಸ್ಥಿತರಿದ್ದರು.

### 10 ರಂದು ಕಾರ್ಮಿಕರಿಗೆ ವೇತನ ಸಹಿತ ರಜೆ

ದಾವಣಗೆರೆ, ಮೇ 4 - ಇದೇ ದಿನಾಂಕ 10 ರಂದು ನಡೆಯಲಿರುವ ವಿಧಾನಸಭಾ ಸಾರ್ವತ್ರಿಕ ಚುನಾವಣೆಗೆ ಜಿಲ್ಲೆಯ ಎಲ್ಲಾ ಕಾರ್ಖಾನೆ, ಅಂಗಡಿ, ವಾಣಿಜ್ಯ ಸಂಸ್ಥೆಗಳು ಹಾಗೂ ಇತರೆ ಸಂಸ್ಥೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಹಾಗೂ ಕೈಗಾರಿಕಾ ಸಂಸ್ಥೆಗಳ ಅರ್ಹ ಮತದಾರರಿಗೆ ವೇತನ ಸಹಿತ ರಜೆ ಘೋಷಿಸಲಾಗಿದೆ. ಜಿಲ್ಲೆಯ ಎಲ್ಲಾ ಕೈಗಾರಿಕಾ ಸಂಸ್ಥೆಯ ಮಾಲೀಕರು ಕಾರ್ಮಿಕರಿಗೆ ಮತವನ್ನು ಚಲಾಯಿಸುವುದಕ್ಕಾಗಿ ಅನುವು ಮಾಡಿಕೊಡಬೇಕು ಎಂದು ಜಿಲ್ಲಾ ಕಾರ್ಮಿಕ ಅಧಿಕಾರಿ ತಿಳಿಸಿದ್ದಾರೆ.

# ಕುಂದುವಾಡದ ಜನ ಬೆಂಬಲಿಸಿದ್ದರಿಂದಲೇ ಕುಂದುವಾಡ ಕೆರೆ ನಿರ್ಮಾಣ ಸಾಧ್ಯವಾಯಿತು

## 44ನೇ ವಾರ್ಡ್ ಹೊಸ ಕುಂದುವಾಡದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಭರ್ಜರಿ ರೋಡ್ ಶೋ

ದಾವಣಗೆರೆ, ಮೇ 4- ಉತ್ತರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಸ್.ಎಸ್. ಮಲ್ಲಿಕಾರ್ಜುನ್ ಅವರು 44ನೇ ವಾರ್ಡ್ ನ ಹೊಸ ಕುಂದವಾಡದಲ್ಲಿ ಪಕ್ಷದ ಮುಖಂಡರು, ಕಾರ್ಯಕರ್ತರು ಮತ್ತು ಅಭಿಮಾನಿಗಳ ಜೊತೆಗೆ ಇಂದು ಬಿರುಸಿನ ಚುನಾವಣಾ ಪ್ರಚಾರ ನಡೆಸಿದರು.

ಗ್ರಾಮದ ಕಾರ್ಯಕರ್ತರು ಬೃಹತ್ ಸೇಬಿನ ಹಾರ ಹಾಕಿ ಅದ್ದೂರಿಯಾಗಿ ಸ್ವಾಗತಿಸಿದರು. ಕೆಲವರು ಕುರಿಮರಿ ನೀಡಿ, ಕಂಬಳಿ ಹೊದಿಸುವ ಮೂಲಕ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮಲ್ಲಿಕಾರ್ಜುನ್ ಅವರು, ಕುಂದುವಾಡದ ಜನತೆಯ ಸಹಕಾರವಿರದಿದ್ದರೆ ದಾವಣಗೆರೆಯ 'ಜೀವ ಜಲ'ದ ಸೆಲೆಯಾಗಿರುವ ಕುಂದುವಾಡ ಕೆರೆಯ ಪುನರ್ ನಿರ್ಮಾಣವಾಗುತ್ತಿರಲಿಲ್ಲ ಎಂದು ಹೇಳಿದರು.

ಹಿಂದೆ ಹಳೆ ಕೆರೆ ಇದ್ದಾಗ ಈ ಭಾಗದಲ್ಲಿ ರೈತರು ಹೆಚ್ಚಾಗಿ ಭತ್ತ ಬೆಳೆಯುತ್ತಿದ್ದರು. ಕೆರೆಗೆ ಚರಂಡಿ ನೀರು ಹರಿದುಬರುತ್ತಿತ್ತು. ಆಗ ಸಚಿವನಾಗಿದ್ದ ನನಗೆ ರೈತರು ಈ ಕೆರೆಯನ್ನು ಅಭಿವೃದ್ಧಿಪಡಿಸಿ ಒಳ್ಳೆಯ ನೀರನ್ನು ಕೊಡಿ ಎಂದು ಕೇಳಿದ್ದಲ್ಲದೆ, ನನಗೆ ಬೆಂಬಲ ಕೂಡಾ ನೀಡಿದ್ದರಿಂದಾಗಿ ಬೃಹತ್ ಕೆರೆ ನಿರ್ಮಾಣವಾಗಿದ್ದಲ್ಲದೆ, ನಗರದ ಅಭಿವೃದ್ಧಿಗೂ ಸಹಕಾರಿಯಾಯಿತು. ಇದಕ್ಕೆ ಕುಂದುವಾಡದ ಜನರ ಸಹಕಾರ ದೊಡ್ಡದು ಎಂದರು.

ತಮಗೆ ಆತ್ಮೀಯ ಸ್ವಾಗತ ನೀಡಿದ್ದಕ್ಕೆ ಕೃತಜ್ಞತೆ ಸಲ್ಲಿಸಿದ ಮಲ್ಲಿಕಾರ್ಜುನ್ ಅವರು, ಈ ಬಾರಿ ನಿಮ್ಮ ಅಭಿಮಾನದ ಓಟನ್ನು ಕಾಂಗ್ರೆಸ್‌ನ ಹಸ್ತದ ಗುರುತಿಗೆ ನೀಡುವ ಮೂಲಕ ನಮಗೆ ಆಶೀರ್ವಾದ ಮಾಡಬೇಕೆಂದು ಮನವಿ ಮಾಡಿದರು. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬರುವುದು ಶತಸಿದ್ಧ, ಮುಂದಿನ ದಿನಗಳಲ್ಲಿ ಸಿದ್ದರಾಮಯ್ಯನವರನ್ನು ಕುಂದುವಾಡಕ್ಕೆ ಕರೆತಂದು, ನಿಮ್ಮ ಸಹಕಾರದ ಬಗ್ಗೆ ತಿಳಿಸುವುದಾಗಿ ಭರವಸೆ ನೀಡಿದರು.



ಇದೇ ಸಂದರ್ಭದಲ್ಲಿ ಗ್ರಾಮದ ಕೆಲವು ಮಹಿಳೆಯರು ದಿನಬಳಕೆ ವಸ್ತುಗಳ ಬೆಲೆ ಏರಿಕೆಯ ಬಗ್ಗೆ ಮಾತನಾಡಿ ಆಕ್ರೋಶ ವ್ಯಕ್ತಪಡಿಸಿದರು. ಮಹಿಳೆಯರನ್ನು ಸಮಾಧಾನಪಡಿಸಿದ ಮಲ್ಲಿಕಾರ್ಜುನ್ ಅವರು, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ತನ್ನಿ ಆಗ ಬೆಲೆಗಳು ಕಡಿಮೆಯಾಗುತ್ತವೆ ಎಂದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಎಚ್.ಜಿ. ದೊಡ್ಡಪ್ಪ, ವಾರ್ಡ್ ಅಧ್ಯಕ್ಷ ಜೆ. ಮಾರುತಿ, ದಯಾನಂದ, ನಾಗರಾಜ್, ಮಂಜಪ್ಪ, ತಿಪ್ಪಣ್ಣ, ಮಂಜುನಾಥ್ ಡಿಎಸ್‌ಎಸ್, ಬಸವರಾಜ ಗೌಡ್ರು, ಮಹಾಂತೇಶ್, ಮಾಲತೇಶ್ ಜೆ. ಆರ್., ವಿಜಯಕುಮಾರ್, ಗಣೇಶ್ ಮತ್ತಿತರರು ಹಾಜರಿದ್ದರು.

# ಗೆಲ್ಲುವ ಆತ್ಮವಿಶ್ವಾಸ ಕಳೆದುಕೊಂಡ ಬಿಜೆಪಿ ಅಭ್ಯರ್ಥಿಗಳು : ಡಿ.ಕೆ.ಶಿ.

ರಾಣೇಬೆನ್ನೂರು, ಮೇ 4- ತಮ್ಮ ಮೂರು ವರ್ಷಗಳ ಆಡಳಿತ ಅವರಿಗೆ ಬೇಸರ ತರಿಸಿದೆ. ನಾವು ಗೆಲ್ಲುತ್ತೇವೆ ಎನ್ನುವ ಆತ್ಮವಿಶ್ವಾಸವನ್ನು ಬಿಜೆಪಿ ಅಭ್ಯರ್ಥಿಗಳು ಕಳೆದುಕೊಂಡಿದ್ದಾರೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದರು.

ಅವರು ಇಲ್ಲಿನ ಕಾಂಗ್ರೆಸ್ ಕಛೇರಿ ಯಲ್ಲಿ ನಡೆದ ಬೃಹತ್ ಬಹಿರಂಗ ಸಭೆಯಲ್ಲಿ ಅಭ್ಯರ್ಥಿ ಪ್ರಕಾಶ್ ಕೋಳಿವಾಡರ ಪರ ಮತಯಾಚಿಸಿ ಮಾತನಾಡಿದರು.

ಬಿಜೆಪಿ ಒಡೆದಿದೆ, ದೇಶದ ಜನರ ವಿಶ್ವಾಸ ಕಳೆದುಕೊಂಡಿದೆ. ಜನ ತಮ್ಮನ್ನು ನಂಬುವುದಿಲ್ಲ ಎನ್ನುವ ಸತ್ಯ ಅಲ್ಲಿರುವವರಿಗೆ ತಿಳಿದಿದೆ. ಅದಕ್ಕೆ ಕೇವಲ ಧರ್ಮದ ಅಮಲೇರಿಸುವ ಕೆಲಸ ಮಾಡುತ್ತಿದ್ದಾರೆ. ಪಕ್ಷಕ್ಕೆ ಮನೆ ಮಂದಿಯೆಲ್ಲರೂ ದುಡಿದ ಜಗದೀಶ ಶೆಟ್ಟರ್, ಸವದಿ ಅಂತವರನ್ನು ಪಕ್ಷ ಬಿಡುವಂತೆ ಮಾಡಿದರು. ಲಿಂಗಾಯತರು, ಗೌಡರು, ಮುಸಲ್ಮಾನರು, ಕ್ರಿಶ್ಚಿಯನ್ನರು ಹೀಗೆ ಎಲ್ಲರನ್ನು ಜೊತೆಗಿಟ್ಟುಕೊಳ್ಳುವ ಮಾನವ ಧರ್ಮ ಕಾಂಗ್ರೆಸ್‌ನದ್ದು ಎಂದು ಡಿಕೆಶಿ ಹೇಳಿದರು.

'ಕೊಟ್ಟ ಕುದುರೆಯನು ಏರದವ ಧೀರನೂ ಅಲ್ಲಾ, ವೀರನು ಅಲ್ಲಾ' ಎನ್ನುವ ಶರಣರ ನುಡಿಯಂತೆ ಅಧಿಕಾರ ಇದ್ದಾಗ ಏನೂ ಮಾಡದ ಬಿಜೆಪಿ, ಈಗ ಬೊಗಳೆ ಬಿಡುತ್ತಿದೆ. ಕಮಲ ಕೆರೆಯಲ್ಲಿರಬೇಕು, ತೆನೆ ಹೊಲದಲ್ಲಿರಬೇಕು, ಬಡವರ ಕಣ್ಣೀರು ಒರೆಸುವ, ದಾನ-ಧರ್ಮ ಮಾಡುವ ಕೈ ಅಧಿಕಾರದಲ್ಲಿರಬೇಕು ಎನ್ನುವ ಅನುಭಾವಿಗಳ ಮಾತಿನಂತೆ ನೀವೆಲ್ಲರೂ ಕೈಗೆ ಹರಸಿರಿ ಎಂದು ಡಿಕೆಶಿ ಹೇಳಿದರು.



ರಾಣೇಬೆನ್ನೂರಿನಲ್ಲಿ ಕಾಂಗ್ರೆಸ್ ಬಹಿರಂಗ ಸಭೆ

ತಂದೆಯ ಅಧಿಕಾರದಲ್ಲಿ ಹಸ್ತಕ್ಷೇಪ ಮಾಡದೇ, ತನ್ನದೇ ಸಹಚರರೊಂದಿಗೆ ಬಡವರ, ದೀನ-ದಲಿತರ ಪರ ನಿಂತು ತಮ್ಮ ಕೈಲಾದ ಸೇವೆ ಮಾಡಿದ ಪ್ರಕಾಶ್ ಕೋಳಿವಾಡ ಅವರನ್ನು ಜಯಿಸಿರಿ ಎಂದು ಮನವಿ ಮಾಡಿದ ಡಿಕೆಶಿ ಜೊತೆ ಮಾಜಿ ಸಭಾಪತಿ ಕೆ.ಬಿ. ಕೋಳಿವಾಡ, ಉಸ್ತುವಾರಿ ರಾಮಪ್ಪ, ಮಾಜಿ ಸಂಸದ ಮಂಜುನಾಥ ಕುನ್ನೂರ ರಾಣೇಬೆನ್ನೂರು, ಶಿಗ್ಗಾವಿ ಅಭ್ಯರ್ಥಿಗಳಾದ ಪ್ರಕಾಶ್ ಕೋಳಿವಾಡ, ನಾದಿರ್ ಖಾನ್ ಪಠಾಣ, ಮಂಜನಗೌಡ ಪಾಟೀಲ್, ರವಿ ಪಾಟೀಲ್ ಮತ್ತಿತರರಿದ್ದರು.

### ಸಿದ್ರಾಮಯ್ಯ ಕಳಕಳಿ...

ನಾನು ರಾಣೇಬೆನ್ನೂರಿಗೆ ಹೋಗಬೇಕು. ಅಲ್ಲಿನ ಜನರನ್ನು ಭೆಟ್ಟಿ ಆಗಬೇಕು ಅನ್ನುವ ಕಳಕಳಿ ವಿರೋಧ ಪಕ್ಷದ ನಾಯಕರಾದ ಸಿದ್ರಾಮಯ್ಯ ಅವರಿಗೆ ಬಹಳಷ್ಟಿದೆ. ಆದರೆ ಅವರ ಕ್ಷೇತ್ರದಲ್ಲಿ ಎರಡು ದಿನ ಇರಲೇಬೇಕಾದ ಸಂದರ್ಭ ಇರುವುದರಿಂದ ತೊಂದರೆ ಆಗುತ್ತಿದೆ. ನಾನು ಮತ್ತೆ ಹೋಗುತ್ತೇನೆ ನನ್ನ ಪರವಾಗಿ ರಾಣೇಬೆನ್ನೂರು ಜನತೆಗೆ ಕಾಂಗ್ರೆಸ್ ಬೆಂಬಲಿಸಿ ಪ್ರಕಾಶ್ ಕೋಳಿವಾಡ ಗೆಲ್ಲಿಸುವಂತೆ ತಿಳಿಸಲು ನನಗೆ ಹೇಳಿದ್ದಾರೆ ಎಂದು ನೆರೆದವರ ಜೈಕಾರದ ಮಧ್ಯೆ ಡಿಕೆಶಿ ಹೇಳಿದರು.

### ಶಂಕರ್ ಟಿಕೆಟ್‌ಗೆ ಬಂದಿದ್ದಾ...

ಕಾಂಗ್ರೆಸ್ ಪಕ್ಷಕ್ಕೆ ಹಾಗೂ ರಾಣೇಬೆನ್ನೂರು ಜನಕ್ಕೆ ಮೋಸ ಮಾಡಿ, ಮಂತ್ರಿಗಿರಿ, ಶಾಸಕಗಿರಿ ಕಳೆದು ಕೊಂಡು ನನಗೆ ಟಿಕೆಟ್ ಕೊಡಿ ಎಂದು ನಿಮ್ಮ ಶಂಕರ್ ನನ್ನ ಹತ್ತಿರ ಬಂದಿದ್ದಾ. ನಮ್ಮದು ಆಗಲೇ ಕ್ಯಾಂಡಿಡೇಟ್ ರೆಡಿ ಇದೆ ಅಂತಾ ಹೇಳಿದೆ. ಮರಳಿ ಹೋದ ಎಂದು ಜನರ ಕೇಕೆಯ ಮಧ್ಯೆ ಡಿಕೆಶಿ ಹೇಳಿದರು.

### ಬೊಮ್ಮಾಯಿ ಹುಬ್ಬಳ್ಳಿಗೆ...

ಸಿಎಂ ಬೊಮ್ಮಾಯಿ ಅವರನ್ನು ಸೋಲಿಸಲು ಅಲ್ಲಿನ ಜನ ತಯಾರಾಗಿದ್ದಾರೆ. ಮಂಜುನಾಥ ಕುನ್ನೂರ, ಸೋಮಣ್ಣ ಬೇವಿನಮರದ ನಮ್ಮ ಜೊತೆಗಿದ್ದಾರೆ. ಇಂದು ಅಲ್ಲಿನ ಕುರುಬ ಸಮಾಜದ ಮುಖಂಡರು ಬಂದಿದ್ದಾರೆ. ಬೊಮ್ಮಾಯಿ ಸೋಲು ನಿಶ್ಚಿತ, ಪಠಾಣ ಪಟಾಕಿ ಹಚ್ಚುತ್ತಾರೆ ಎಂದು ಶಿಗ್ಗಾವಿಯಿಂದ ಬಂದಿದ್ದ ಮುಖಂಡರಿಗೆ ಪಕ್ಷದ ಶಾಲುಗಳನ್ನು ಹಾಕಿ ಪಕ್ಷಕ್ಕೆ ಸೇರಿಸಿಕೊಂಡು ಬೊಮ್ಮಾಯಿಯವರೇ ರೆಸ್ಟ್‌ಗೆ ನೀವು ಹುಬ್ಬಳ್ಳಿಗೆ ತೆರಳಿರಿ ಎಂದು ಡಿಕೆಶಿ ಹೇಳಿದರು.

# ರಾಜ್ಯದಲ್ಲಿ ಬಿಜೆಪಿ ಸೋಲಿಸಿದರೆ ಹಿಂದುತ್ವಕ್ಕೆ ಹಿನ್ನಡೆ: ಸಿಪಿಐ (ಎಂ)

ನವದೆಹಲಿ, ಮೇ 4- ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸಿದರೆ ಹಿಂದುತ್ವಕ್ಕೆ ಪ್ರಮುಖ ಹಿನ್ನಡೆಯಾಗಲಿದೆ. ಇದು ಸೆಕ್ಯೂಲರ್ ಹಾಗೂ ಪ್ರಜಾಸತ್ತಾತ್ಮಕ ಪಕ್ಷಗಳು 2024ರ ಲೋಕಸಭಾ ಚುನಾವಣೆ ಎದುರಿಸಲು ನೆರವಾಗಲಿದೆ ಎಂದು ಸಿಪಿಐ (ಎಂ) ಅಭಿಪ್ರಾಯ ಪಟ್ಟಿದೆ. ದಕ್ಷಿಣದ ರಾಜ್ಯಗಳಲ್ಲಿ ಕರ್ನಾಟಕದಲ್ಲಿ ಮಾತ್ರ ಬಿಜೆಪಿ ಅಧಿಕಾರದಲ್ಲಿದೆ. ಇಲ್ಲಿ ಬಿಜೆಪಿ ಸೋತರೆ ಹಿಂದುತ್ವವಾದಿಗಳಿಗೆ ಪ್ರಮುಖ ಹಿನ್ನಡೆಯಾಗಲಿದೆ ಎಂದು ಸಿಪಿಐ (ಎಂ) ಮುಖವಾಣಿ ಸಂಪಾದಕೀಯದಲ್ಲಿ ತಿಳಿಸಲಾಗಿದೆ.

ಬಿಜೆಪಿ ರಾಜಕೀಯದಲ್ಲಿ ಪೂರ್ಣ ಮೇಲುಗೈ ಸಾಧಿಸಲು ಪ್ರಯತ್ನ ನಡೆಸಿದೆ. ದಕ್ಷಿಣದ ರಾಜ್ಯಗಳಲ್ಲಿ ಪ್ರಭಾವ ಹೆಚ್ಚಿಸುವ ಮಹತ್ವಾಕಾಂಕ್ಷೆಗಾಗಿ ಅದು ಕರ್ನಾಟಕವನ್ನು ಉಳಿಸಿಕೊಳ್ಳುವ ಪ್ರಯತ್ನ ನಡೆಸಲಿದೆ ಎಂದು ಸಿಪಿಐ (ಎಂ) ಹೇಳಿದೆ. ಕರ್ನಾಟಕದಲ್ಲಿ ಬಿಜೆಪಿಯನ್ನು ಸೋಲಿಸಿದರೆ 2024ರ ಲೋಕ ಸಭಾ ಚುನಾವಣೆಯಲ್ಲಿ ಬಿಜೆಪಿಗೆ ಗಂಭೀರ ಸವಾಲು ಹಾಕಲು ಸೆಕ್ಯುಲರ್ ಹಾಗೂ ಪ್ರಜಾಸತ್ತಾತ್ಮಕ ಪಕ್ಷಗಳಿಗೆ ಸಾಧ್ಯವಾಗಲಿದೆ ಎಂದು ಎಡಪಕ್ಷ ತಿಳಿಸಿದೆ.

# ಪಾಕ್ ಗುಪ್ತಚರನಿಗೆ ಮಾಹಿತಿ

## ಡಿಆರ್‌ಡಿಒ ಹಿರಿಯ ವಿಜ್ಞಾನಿ ಬಂಧನ

ಪುಣೆ, ಮೇ 4 – ರಕ್ಷಣಾ ಸಂಶೋಧನಾ ಸಂಸ್ಥೆಯಾದ ಡಿ.ಆರ್.ಡಿ.ಒ.ದ ಹಿರಿಯ ವಿಜ್ಞಾನಿಯನ್ನು ಪಾಕಿಸ್ತಾನದ ಗುಪ್ತಚರನೋರ್ವನಿಗೆ ಮಾಹಿತಿ ನೀಡುತ್ತಿದ್ದ ಆರೋಪದ ಮೇಲೆ ಬಂಧಿಸಲಾಗಿದೆ. ಪಾಕಿಸ್ತಾನದ ಗುಪ್ತಚರನ ಜೊತೆ ವಿಜ್ಞಾನಿ ವಾಟ್ಸಆಪ್ ಮೂಲಕ ಮಾಹಿತಿ ಹಂಚಿಕೊಳ್ಳುತ್ತಿದ್ದುದಾಗಿ ಮಹಾರಾಷ್ಟ್ರದ ಉಗ್ರವಾದ ವಿರೋಧಿ ದಳ ತಿಳಿಸಿದೆ. ಇದು ಹನಿಟ್ರ್ಯಾಪ್ ಪ್ರಕರಣ ಎಂದು ಉಗ್ರವಾದ ವಿರೋಧಿ ದಳ ತಿಳಿಸಿದೆ.

### ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಇಂದು ಪೂಜೆ



ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಬುದ್ಧ ಪೌರ್ಣಿಮೆ ಪ್ರಯುಕ್ತ ಇಂದು ನವ ಗ್ರಹ ಹೋಮ, ಶ್ರೀ ಸತ್ಯನಾರಾಯಣ ಸ್ವಾಮಿ ಪೂಜಾ ಕಥಾ, ಪ್ರಧಾನ ದೇವತೆ ಶ್ರೀ ಮಾತಾ ಅನ್ನ ಪೂರ್ಣೇಶ್ವರಿಗೆ ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ. ಶ್ರೀಮತಿ ರೇಷ್ಮಾ ಅವಿನಾಶ್ ಹಾಗೂ ಸಕುಟುಂಬದವರು ಪೂಜಾ ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

# ಒಮ್ಮೆ ಅವಕಾಶ ಕೊಡಿ, ಜನಸೇವೆ ಮಾಡಿ ತೋರುವೆ

## ಉತ್ತರ ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ಬಿರುಸಿನ ಮತ ಪ್ರಚಾರ

ದಾವಣಗೆರೆ, ಮೇ 4- ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದಲ್ಲಿ ಮೂಲಭೂತ ಸೌಲಭ್ಯಗಳೊಂದಿಗೆ ಸಮಗ್ರ ಅಭಿವೃದ್ಧಿ ಮತ್ತು ಸಂಕಷ್ಟದಲ್ಲಿನ ಜನರ ಸೇವೆ ಮಾಡಲು ಬಯಸಿ ಈ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದೇನೆ. ನನಗೆ ಸೇವೆ ಮಾಡುವ ಅವಕಾಶ ನೀಡುವುದು ನಿಮ್ಮ ಕೈಯ್ಯಲ್ಲಿದೆ. ಒಮ್ಮೆ ನನಗೆ ಅವಕಾಶ ಕೊಟ್ಟರೆ ಮಾತು ಸಾರ್ಥಕಗೊಳಿಸುತ್ತೇನೆ ಎಂದು ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ಮನವಿ ಮಾಡಿದರು.

ಚಿಕ್ಕಬೂದಿಹಾಳ್ ನಿಂದ ಮತ ಪ್ರಚಾರ ಆರಂಭಿಸಿದ ನಾಗರಾಜ್ ಲೋಕಿಕೆರೆ ಅವರು ದೇವರಹಟ್ಟಿ, ಗಡಿ ಬೇವಿನಮರ, ಮಾಗಾನಹಳ್ಳಿ, ಪುಟಗನಾಳ್ ಭಾಗಗಳಲ್ಲಿ ಸಂಚರಿಸಿ ಬಿರುಸಿನ ಮತ ಪ್ರಚಾರ ನಡೆಸಿದರು.



ಮತ ಪ್ರಚಾರದ ವೇಳೆ ಮತದಾರರನ್ನುದ್ದೇಶಿಸಿ ಮಾತನಾಡಿದರು.

ನನ್ನ ಮೇಲೆ ವಿಶ್ವಾಸವಿಟ್ಟು ಬಿಜೆಪಿ ವರಿಷ್ಠರು, ಸಂಸದ ಜಿ. ಎಂ. ಸಿದ್ದೇಶ್ವರ ಹಾಗೂ ಶಾಸಕ ಎಸ್.ಎ. ರವೀಂದ್ರನಾಥ್ ಸೇರಿದಂತೆ, ಸ್ಥಳೀಯ ಮುಖಂಡರು ನನಗೊಂದು ಅವಕಾಶ ನೀಡಿದ್ದಾರೆ. ಇದಕ್ಕೆ ಕ್ಷೇತ್ರದ ಮತದಾರರ ಆಶೀರ್ವಾದ ಬೇಕೆಂದರು.

ನಗರ ಪಾಲಿಕೆ ಸದಸ್ಯ ಜೆ. ಎನ್. ಶ್ರೀನಿವಾಸ್ ಸಾಥ್ ನೀಡಿದ್ದರು.

### 38, 40ನೇ ವಾರ್ಡ್‌ನಲ್ಲಿ ಇಂದು ಉತ್ತರ ಕಾಂಗ್ರೆಸ್ ಅಭ್ಯರ್ಥಿ ಎಸ್ಸೆಸ್ಸೆಂ ಪ್ರಚಾರ



ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ 38 ಮತ್ತು 40 ನೇ ವಾರ್ಡ್‌ನಲ್ಲಿ ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಚುನಾವಣಾ ಪ್ರಚಾರ ಕೈಗೊಳ್ಳುವರು. ಬೆಳಿಗ್ಗೆ 10 ಗಂಟೆಗೆ ಶಿವ ಧ್ಯಾನ ಮಂದಿರದಲ್ಲಿ ಪೂಜೆ ಸಲ್ಲಿಸಿ ವಿವೇಕಾನಂದ ಬಡಾವಣೆ, ವಿನಾಯಕ ಬಡಾವಣೆಯಲ್ಲಿ ಪ್ರಚಾರ ನಡೆಸುವರು.

ನಂತರ 12-30 ರಿಂದ 38ನೇ ವಾರ್ಡ್ ಎಂಸಿಸಿ 'ಬಿ' ಬ್ಲಾಕ್‌ನ 8ನೇ ಮೇನ್ 2ನೇ ಕ್ರಾಸ್‌ನಿಂದ ಪ್ರಾರಂಭವಾಗಿ 9,10,11 ಮತ್ತು 12ನೇ ಮೇನ್ ಗಳಲ್ಲಿ ಮನೆ ಮನೆಗೆ ತೆರಳಿ ಮತಯಾಚಿಸುವರು.

### 15,16,39-41 ವಾರ್ಡುಗಳಿಗೆ ಇಂದು ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ



ಉತ್ತರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ಅವರು ಇಂದು ನಡೆಸಲಿರುವ ಮತ ಪ್ರಚಾರದ ವಿವರ : ಬೆಳಿಗ್ಗೆ 7.30ಕ್ಕೆ 15 ಮತ್ತು 16ನೇ ವಾರ್ಡ್‌ಗಳಲ್ಲಿ ಪ್ರಚಾರ ನಡೆಸಲಿದ್ದು, ಜೈನ್ ಲೇಔಟ್‌ನ ಬನ್ನಿ ಮಹಾಂಕಾಳಮ್ಮ ದೇವಸ್ಥಾನ ದಿಂದ ಪ್ರಾರಂಭವಾಗಲಿದೆ. ಸಂಜೆ 4.30ಕ್ಕೆ 39, 40 ಮತ್ತು 41ನೇ ವಾರ್ಡ್‌ಗಳಲ್ಲಿ ಮತ ಯಾಚಿಸುವರು. ವಿದ್ಯಾನಗರ ಕಾಫಿ ಡೇಯಿಂದ ಪ್ರಾರಂಭವಾಗಲಿದೆ.

### ನಗರದಲ್ಲಿ ಇಂದು ಮಜ್ಜಿಗೆ ವಿತರಣೆ

ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಶ್ರೀ ಜಯದೇವ ವೃತ್ತದಲ್ಲಿ ಉಚಿತ ಮಜ್ಜಿಗೆ ವಿತರಿಸಲಾಗುವುದು. ನಿರಂಜನ್ ಬೆಳಗಾವಿ ಹಾಗೂ ಆರ್. ಅಶೋಕ್, ಎಸ್.ಆರ್.ಎ. ಆಟೋಮೊಬೈಲ್ಸ್ ದಾವಣಗೆರೆ ಇವರು ಇಂದಿನ ಮಜ್ಜಿಗೆ ದಾನಿಗಳಾಗಿದ್ದಾರೆ.

ಕೃತಜ್ಞತೆಗಳು ಹಾಗೂ ಅಭಿನಂದನೆಗಳು



ನನ್ನನ್ನು ದಾವಣಗೆರೆ ಜಿಲ್ಲಾ ಮಹಿಳಾ ಕಾಂಗ್ರೆಸ್ ಸಂಘಟನಾ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಿದ ಜಿಲ್ಲೆಯ ಕಾಂಗ್ರೆಸ್ ವರಿಷ್ಠರಿಗೆ, ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷೆ ಶ್ರೀಮತಿ ಅನಿತಾಬಾಯಿ ಮಾಲತೇಶ್ ರಾವ್ ಡಿ.ರವರಿಗೂ, ಜಿಲ್ಲಾಧ್ಯಕ್ಷರಾದ ಶ್ರೀ ಹೆಚ್.ಬಿ.ಮಂಜಪ್ಪನವರಿಗೂ, ಹಿಂದುಳಿದ ವರ್ಗಗಳ ರಾಜ್ಯ ಪ್ರ.ಕಾರ್ಯದರ್ಶಿ ಶ್ರೀ ಜಮ್ನಳ್ಳಿ ನಾಗರಾಜ್‌ರವರಿಗೂ, ಶ್ರೀ ಶಿವನಹಳ್ಳಿ ರಮೇಶ್‌ರವರಿಗೂ, ಶ್ರೀ ದಿನೇಶ್ ಕೆ.ಶೆಟ್ಟಿರವರಿಗೂ, ಮಾಲಾ ಹನುಮಂತಪ್ಪನವರಿಗೂ, ಪಕ್ಷದ ಮುಖಂಡರಿಗೂ, ಕಾರ್ಯಕರ್ತರಿಗೂ, ಅಭಿಮಾನಿಗಳಿಗೂ ಹೃತ್ಪೂರ್ವಕ ಕೃತಜ್ಞತೆಗಳು.

ಶ್ರೀಮತಿ ಕಾವ್ಯ
ಜಿಲ್ಲಾ ಮಹಿಳಾ ಕಾಂಗ್ರೆಸ್ ಸಂಘಟನಾ ಕಾರ್ಯದರ್ಶಿ

ಶುಭಾಶಯ ಕೋರುವವರು
- ಶ್ರೀಮತಿ ಅರ್ಪಿತ ಬಿ.ವಿ.ಅರುಣ್ ಕುಮಾರ್ ಕೆ.,
- ಶ್ರೀಮತಿ ಕೃತಿ ಕಿರಣ್ ಕುಮಾರ್ ಕೆ.
- ಶ್ರೀಕ
- ಶ್ರೀಶ
- ಶ್ರೀಮತಿ ಸುಮಾ ಯೋಗೇಶ್
- ಶ್ರೀಮತಿ ಶೋಭ ಮೂರ್ತಿ
- ಶ್ರೀಮತಿ ಅನಿತ ಬಸವರಾಜು
- ಶ್ರೀಮತಿ ಸುನೀತಾ ಬಸವರಾಜು
- ಶ್ರೀಮತಿ ವೀಣಾ ರಾಜು
- ಶ್ರೀಮತಿ ರೇಖಾ ಕೊಟ್ರೇಶ್
- ಶ್ರೀಮತಿ ದೀಪ ವೀರೇಶ್
- ಶ್ರೀಮತಿ ವಿಜಯ ಕೊಟ್ರೇಶ್

ಪುಣ್ಯಸ್ಮರಣೆ



ಜನನ : 08.06.1936
ನಿಧನ : 05.05.2015

ಲಿಂ|| ಶರಣ ಶಾಮನೂರು ಬಕ್ಕೇಶಪ್ಪನವರು
ದಾವಣಗೆರೆ.

ನೀವು ನಮ್ಮನ್ನಗಲಿ ಇಂದಿಗೆ ಎಂಟು ವರ್ಷಗಳಾದವು....
ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಾ,
ಸದಾ ನಿಮ್ಮ ಸ್ಮರಣೆಯಲ್ಲಿರುವ,

ಶ್ರೀಮತಿ ಶಾಂತಮ್ಮ ಬಕ್ಕೇಶಪ್ಪ ಶಾಮನೂರು
ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು,
ಸಹೋದರರು, ಸಹೋದರಿಯರು
ಮೊಮ್ಮಕ್ಕಳು, ಮರಿಮೊಮ್ಮಕ್ಕಳು.

ಶಾಮನೂರು ವಂಶಸ್ಥರು ಹಾಗೂ ಬಂಧು-ಮಿತ್ರರು

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte